
ರಂಜನ ಬೋಧನ ಪ್ರಬೋಧನೆ

ಲಂಕೇಶ್

16 ಸೆಪ್ಟೆಂಬರ್ 2015 ಪುಟ 20 ರೂ. 15/-

ದು ಬಸವಣ್ಣ
ದು ಕಲ್ಬುರ್ಗಿ





ರಾಘನ ಮತ್ತೊಂದು ಕಾಮಕಾಂಡ

ಬಿಬಿಎಂಪಿ
ಶೋಕ್ ಗತ್ತು
ಜೆಪಿಗೆ ಕುತ್ತು



ಹಿಟ್ಲರ್‌ನ ಹಂತಕ ಪಡೆ (Einsatzgruppen -ಐನ್ಸಾಟ್ಸ್‌ಗ್ರುಪ್ಪೆನ್) ಮತ್ತು ಕಲ್ಬುರ್ಗಿಯವರ ಕ



ಡಾ.ಎಂ.ಎಂ.ಕಲ್ಬುರ್ಗಿಯವರನ್ನು ಯಾರು ಕೊಂದಿದ್ದಾರೆಂಬುದಕ್ಕೆ ಇದುವರೆಗೂ ಆಧಾರಗಳು ಸಿಕ್ಕಿಲ್ಲ. ತೀರಾ ವೈಯಕ್ತಿಕವಾದ ಕಾರಣಗಳು, ಅರೆ ಸಾಮಾಜಿಕ ಕಾರಣಗಳಿಂದ ಹಿಡಿದು, ಸೈದ್ಧಾಂತಿಕ ಭಿನ್ನಾಭಿಪ್ರಾಯದ ಕಾರಣಕ್ಕೆ ನಡೆದಿರುವ ಹತ್ಯೆ ಎನ್ನುವತನಕ ಹಲವು ಸಾಧ್ಯತೆಗಳನ್ನು ಮುಂದಿಡಲಾಗುತ್ತಿದೆ. ಆದಷ್ಟು ಬೇಗ ಇದರ ಬಗ್ಗೆ ಸತ್ಯ ಹೊರಬರಲಿ ಎಂದು ನಾವೆಲ್ಲರೂ ಬಯಸುತ್ತೇವೆ. ಏಕೆಂದರೆ, 'ಸುಖಾಸುಮ್ಮನೆ' ಸಂಘಪರಿವಾರದ ಮೇಲೆ ಆರೋಪ ಹೊರಿಸುವುದು ಬೇಡ ಎಂದು ಹಲವರು ಹೇಳುತ್ತಿದ್ದಾರೆ. ಆದರೆ, ನಿಜವಾದ ಹಂತಕರು ಯಾರು ಎಂಬ ಸತ್ಯ ಅಷ್ಟು ಬೇಗ ಹೊರಬಹುದು ಎಂಬ ನಿರೀಕ್ಷೆಯು ಸಫಲವಾಗುತ್ತದೆ ಎಂದು ಹೇಳಲಾಗದು. ಏಕೆಂದರೆ, ಮಹಾರಾಷ್ಟ್ರದಲ್ಲಿ ಗೋವಿಂದ ಪನ್ಸಾರೆಯವರ ಹತ್ಯೆಯಾಗಿ 6 ತಿಂಗಳು ಕಳೆದುಹೋಗಿದೆ. ಧಾಬೋಲ್ಕರ್ ಅವರ ಹತ್ಯೆಯಾಗಿ (ಆಗಸ್ಟ್ 20, 2013) 2 ವರ್ಷಗಳೇ ಸಂದಿವೆ. ಇದುವರೆಗೂ ಹಂತಕರ ಸುಳಿವು ಸಿಕ್ಕಿಲ್ಲ. ಮಹಾರಾಷ್ಟ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಹಾಗಾಗಿದೆ ಎಂದು ಹೇಳುವ ಹಾಗೂ ಇಲ್ಲ. ಧಾಬೋಲ್ಕರ್ ಹತ್ಯೆಯಾದಾಗ ಕಾಂಗ್ರೆಸ್ ಸರ್ಕಾರವೇ ಇತ್ತು. ಸಿದ್ದರಾಮಯ್ಯನವರ ಸರ್ಕಾರ ಅದಕ್ಕಿಂತ ದಕ್ಷವಾಗೇನೂ ಕೆಲಸ ಮಾಡುತ್ತಿಲ್ಲ ಎಂಬುದಕ್ಕೆ ಹಲವು ಸಾಕ್ಷಿಗಳಿವೆ.

ಹಾಗಾಗಿ, ಈ ಕುರಿತು ಸಾಂದರ್ಭಿಕ ಅಂಶಗಳನ್ನಿಟ್ಟುಕೊಂಡು ಚರ್ಚಿಸಬೇಕಾದ ಅನಿವಾರ್ಯತೆ ಇದ್ದೇ ಇದೆ. ಕಲ್ಬುರ್ಗಿಯವರದ್ದೂ ಸೇರಿದಂತೆ ಮೂರೂ ಹತ್ಯೆಗಳಲ್ಲಿ ಸಾಮಾನ್ಯ ಎಳೆಗಳು ಇವೆ. ಮೂವರೂ ಸಂಘಪರಿವಾರದ ವಿರೋಧ ಕಟ್ಟಿಕೊಂಡಿದ್ದರು. ಸಂಘಪರಿವಾರವು ಮೂರೂ ಜನರಿಗೆ ನಾಶ ಮಾಡುವ ಎಚ್ಚರಿಕೆಯನ್ನೂ ಕೊಟ್ಟಿತ್ತು. ಕೊಲೆ ನಡೆದ ರೀತಿಯಲ್ಲೂ ಹಲವು ಸಾಮ್ಯಗಳಿವೆ. ಬೆಳಗಿನ ಹೊತ್ತು, ಬೈಕ್‌ಗಳಲ್ಲಿ ಬಂದ ಯುವಕರು ಗುಂಡು ಹೊಡೆದು ಸಾಯಿಸಿದ್ದಾರೆ. ಮೂರೂ ಜನ ಸತ್ತನಂತರ, ಬಿಜೆಪಿ ಪಕ್ಷವು ತೋರಿಕೆಗೆ ಖಂಡಿಸುತ್ತದೆ ಮತ್ತು ಅದರ ಪರಿವಾರವು ಸಿಕ್ಕ ಸಿಕ್ಕ ಕಡೆ (ಸಾಮಾಜಿಕ ಜಾಲತಾಣಗಳೂ ಸೇರಿದಂತೆ) ಕೊಂದದ್ದು ಸರಿ ಎಂದು ಸಮರ್ಥಿಸುತ್ತದೆ. ಇನ್ನು ಕೆಲವು 'ನ್ಯೂಟ್ರಲ್' ಜನರು 'ಅದೇನೇ ಇರಲಿ ಅವರನ್ನು ಕೊಂದದ್ದು ಮಾತ್ರ ತಪ್ಪು, ಆದರೆ, ಅವರು ಆ ರೀತಿ ಹೇಳಿದ್ದು ಸರಿಯೇ? ಒಂದು ಧರ್ಮದ ಜನರ ಭಾವನೆಗಳನ್ನು ನೋಯಿಸಿದ್ದು ಸರಿಯೇ?' ಇತ್ಯಾದಿ ಹೇಳತೊಡಗುತ್ತಾರೆ. ಆ ವಾದದ ಸಾರಾಂಶ, ಹಾಗೆ ಹೇಳಿದರೆ ಹೀಗೆ ಕೊಲ್ಲುವುದು ಸಹಜ ಎನ್ನುವಂತೆ ಇರುತ್ತದೆ. ಇನ್ನೂ ಕೆಲವರು, 'ಅವರೇ ಕೊಂದಿರಬಹುದು, ಆದರೆ ಬಹಿರಂಗವಾಗಿ ಹಾಗೆ ಹೇಳಬಾರದು' ಎನ್ನುತ್ತಾರೆ. ಒಂದಷ್ಟು ಸಮಯದ ನಂತರ ಮತ್ತೊಂದು ಕೊಲೆ ನಡೆಯುತ್ತದೆ.

ಫ್ಯಾಸಿಸಂಗೂ ಸರ್ವಾಧಿಕಾರಕ್ಕೂ ಇರುವ ಒಂದು ಪ್ರಮುಖ ವ್ಯತ್ಯಾಸವೆಂದರೆ, ಫ್ಯಾಸಿಸಂಗೆ ಜನರ ಸಮ್ಮತಿ ಇರುತ್ತದೆ. ಅದು ಜನರನ್ನು ತನ್ನ ಅಜೆಂಡಾಕ್ಕೆ ಮೊಬಿಲೈಸ್ ಮಾಡಿಕೊಂಡಿರುತ್ತದೆ, ಅದು ನರಮೇಧವೇ ಆಗಿದ್ದರೂ... ಹಾಗಾಗಿಯೇ ಫ್ಯಾಸಿಸಂಅನ್ನು ಸೋಲಿಸುವುದೆಂದರೆ, ಅದಕ್ಕೆ ಸಮಾಜದಲ್ಲಿರುವ ಮಾನ್ಯತೆಯನ್ನು ಇಲ್ಲವಾಗಿಸುವುದು ಪ್ರಮುಖ ಅಂಶವಾಗಿದೆ. ಫ್ಯಾಸಿಸಂ ಎಂಬುದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು, ತರ್ಕವನ್ನು, ಪ್ರಜಾತಂತ್ರವನ್ನು ಕೊಲ್ಲುತ್ತದೆ. ಹಾಗಾಗಿಯೇ ಸ್ವಾತಂತ್ರ್ಯ ವಿಚಾರವಾದ ಮತ್ತು ಪ್ರಜಾತಂತ್ರವನ್ನು ಪ್ರತಿಪಾದಿಸುವ ವ್ಯಕ್ತಿಗಳನ್ನೂ ಕೊಲ್ಲುತ್ತದೆ. ಫ್ಯಾಸಿಸ್ಟರು ಅತ್ಯಂತ ಸಂಘಟಿತರಾಗಿರುತ್ತಾರೆ. ಸಮಾಜದಲ್ಲಿ ಸಂಘಟಿತವಾದ ಸಂಸ್ಥೆಗಳನ್ನೂ (ಧಾರ್ಮಿಕ, ಸಾಮಾಜಿಕ - ಧರ್ಮ, ಜಾತಿಗಳೂ ಸಂಸ್ಥೆಗಳಾಗಿ ಮತ್ತು ಈ ಸಂಸ್ಥೆಗಳು ನಿರ್ಮಿಸಿಕೊಳ್ಳುವ ಇತರ ಭೌತಿಕ ಹಾಗೂ ಬೌದ್ಧಿಕ ಸಂಸ್ಥೆಗಳು) ಅದು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತದೆ. ಅದು ಸಾವಿರಾರು ಬಾಹುಗಳಿಂದ ತನ್ನ ಕೆಲಸವನ್ನು ಸಾಧಿಸಿಕೊಳ್ಳುತ್ತದೆ. ಇತಿಹಾಸದಲ್ಲಿ ಅಂತಹ ಹಲವು ಉದಾಹರಣೆಗಳಿವೆ.

ಉದಾಹರಣೆಗೆ, ಜರ್ಮನಿಯಲ್ಲಿ ಹಿಟ್ಲರ್ ಮಾಡಿದ್ದನ್ನು ನೋಡಬಹುದು. **Einsatzgruppen** -ಐನ್ಸಾಟ್ಸ್‌ಗ್ರುಪ್ಪೆನ್ ಎಂಬುದು **Schutzstaffel hhttps://en.wikipedia.org/wiki/Schutzstaffelh**(ಎಸ್‌ಎಸ್) ಎಂದು ಕರೆಯಲಾಗುತ್ತಿದ್ದ ಹಂತಕ ಪಡೆಯ ಒಂದು ಭಾಗ. ಅದು ಹಲವಾರು ಕೊಲೆಗಳನ್ನು ನಡೆಸಿತು. ಮೊದಲ ಹಂತದಲ್ಲಿ ಅದನ್ನು ರಹಸ್ಯ ಕೊಲೆಗಳನ್ನು ಮಾಡಲು ಬಳಸಲಾಯಿತು. ನಿಧಾನಕ್ಕೆ ಸಾರ್ವಜನಿಕ ಮಾನ್ಯತೆ ಹಾಗೂ ಅಧಿಕಾರದ ಕೇಂದ್ರೀಕರಣ ಹೆಚ್ಚಾದಂತೆಲ್ಲಾ ಕೊಲೆಗಳನ್ನು ಬಹಿರಂಗವಾಗಿಯೇ ಮಾಡಲು ಈ ಪಡೆಯನ್ನು ಬಳಸಿಕೊಳ್ಳಲಾಯಿತು. ಬೀದಿಗಳು ಸಾರ್ವಜನಿಕ ವಧಾಸ್ಥಾನಗಳಾಗಿ ಪರಿವರ್ತನೆ ಹೊಂದಿದವು. ಮುಖ್ಯವಾಗಿ ಪೋಲೆಂಡ್‌ನ ಬುದ್ಧಿಜೀವಿಗಳನ್ನು ಮೊದಲ ಟಾರ್ಗೆಟ್‌ಗಳನ್ನಾಗಿ ಆರಿಸಿಕೊಳ್ಳಲಾಗಿತ್ತು.


ಸ್ವತಃ ಹಿಟ್ಲರ್ ಈ ಕುರಿತು ಸ್ಪಷ್ಟ ಮಾತುಗಳಲ್ಲಿ ಉದ್ದೇಶವನ್ನು ವಿವರಿಸಿದ್ದ 'ನಾನು ಇನ್ನೊಮ್ಮೆ ಹೇಳುತ್ತಿದ್ದೇನೆ. ಮುಂಚೂಣಿಯಲ್ಲಿರುವವರು ಗಮನದಲ್ಲಿಡಬೇಕಾದ್ದೇನೆಂದರೆ, ಪೋಲಿಷ್ ಜನರಿಗೆ ಒಬ್ಬನೇ ಒಬ್ಬ ನಾಯಕನಿರಬೇಕು ಮತ್ತು ಅವನು ಜರ್ಮನ್ನನಾಗಿರಬೇಕು. ಜೊತೆಜೊತೆಯಲ್ಲಿ ಇಬ್ಬರು ನಾಯಕರು ಇರಲಾಗದು. ಹಾಗಾಗಿ ಪೋಲಿಷ್ ಬುದ್ಧಿಜೀವಿ ವರ್ಗದ ಎಲ್ಲಾ ಪ್ರತಿನಿಧಿಗಳನ್ನು ನಿರ್ಮೂಲನೆ ಮಾಡಬೇಕು. ಇದು ನಿಮಗೆ ಕಟುವಾಗಿ ಕೇಳಿಸಬಹುದು. ಆದರೆ, ಬದುಕಿನ ನಿಯಮಗಳು ಹಾಗೆಯೇ ಇರುತ್ತವೆ'. ನಾಯಕ ಎನ್ನುವಾಗ ಹಿಟ್ಲರ್ ಒಂದು ಸಿದ್ಧಾಂತದ ಬಗ್ಗೆ ಮಾತನಾಡುತ್ತಿರುವುದನ್ನು ಗಮನಿಸಬಹುದು. ಬುದ್ಧಿಜೀವಿಗಳು ಸಮಾಜದಲ್ಲಿ ಅಭಿಪ್ರಾಯವನ್ನು ಸೃಷ್ಟಿಸುತ್ತಾರೆ ಮತ್ತು ವ್ಯವಸ್ಥೆಯ ವಿರುದ್ಧ ಮಾತನಾಡುವ ಬುದ್ಧಿಜೀವಿಗಳು ಸಮಾಜದಲ್ಲಿ ಪ್ರಜಾಪ್ರಭುತ್ವವು ಸರ್ವರೀತಿಯಲ್ಲಿ ನೆಲೆಗೊಳಿಸಲು ಕಾರಣರಾಗುತ್ತಾರೆ. ಹಾಗಾಗಿ, ಹಿಟ್ಲರನ ಸಿದ್ಧಾಂತದ ಮೇಲಾಳ್ವಿಕೆಯು ಪ್ರಜಾಪ್ರಭುತ್ವದ ವಿಚಾರದ ವ್ಯಾಪಕತೆಯ ಜೊತೆಗೆ ಸಹಜೀವನ ನಡೆಸುವುದು ಸಾಧ್ಯವಿಲ್ಲ.

ಆದರೆ, ಈ ರೀತಿ ನಿರ್ಮೂಲನ ಮಾಡುವ ಮುಂಚೆ, ಅವರನ್ನು ಅಮಾನ್ಯಗೊಳಿಸುವ ಕೆಲಸವೂ ಆಗಬೇಕಲ್ಲವೇ? ಅದಕ್ಕೂ ಜನಪ್ರಿಯ ಮಾಧ್ಯಮಗಳ ಯಂತ್ರಾಂಗವು ಕೆಲಸಕ್ಕೆ ಬರುತ್ತದೆ. ಕರ್ನಾಟಕದ್ದೇ ಉದಾಹರಣೆ ನೋಡುವುದಾದಲ್ಲಿ ನಮ್ಮ ಬುದ್ಧಿಜೀವಿಗಳನ್ನು ಅವಮಾನ್ಯಗೊಳಿಸುವ ಕೆಲಸವನ್ನು ಮಾಡುವುದರಲ್ಲಿ ಮೊದಲ ಸಾಲಿನಲ್ಲಿರುವವು ಮಾಧ್ಯಮಗಳು, ದೃಶ್ಯ ಮಾಧ್ಯಮಗಳು. ಅವು ಈ ಕೆಲಸವನ್ನು ಕೇವಲ ಹೀಗಳಿಕೆ, ಕೋರ್ಟ್ ಮಾರ್ಷಲ್, ಟಾರ್ಗೆಟಿಂಗ್‌ಗಳ ಮೂಲಕ ಮಾತ್ರ ಮಾಡುತ್ತಿಲ್ಲ. (ಅನಂತಮೂರ್ತಿಯವರು ಮತ್ತು ಕಲ್ಬುರ್ಗಿಯವರಿಗೆ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು. ಒಂದು ಟಿವಿ ಚಾನೆಲ್‌ನಲ್ಲಂತೂ ನಿರೂಪಕ ಕಲ್ಬುರ್ಗಿಯವರ ಮೇಲೆ ಅತ್ಯಂತ ಹೀನಾಯವಾಗಿ ವಾಗ್ದಾಳಿ ನಡೆಸಿದ ಮತ್ತು ಅವರು ತನ್ನಿಂದ ತಪ್ಪಾಯಿತು ಎಂದು ಹೇಳುವಂತೆ ಮಾಡಿದನೆಂದು



ಪ್ರೊ.ಎಚ್ಚೆಲ್ಕೆಯವರು ಹೇಳಿದರು) ಈ ದೃಶ್ಯ ಮಾಧ್ಯಮಗಳಿಗಿಂತಲೂ ಕೀಳುಮಟ್ಟದಲ್ಲಿ ಎರಡು ಪತ್ರಿಕೆಗಳು ಆ ಕೆಲಸವನ್ನು ಮಾಡಿದವು. ಹೆಚ್ಚು ಕಡಿಮೆ ಬೀದಿಯಲ್ಲಿ ನಿಲ್ಲಿಸಿ ಸುತ್ತಲಿಂದಲೂ ಕಲ್ಲು ಹೊಡೆಸುವ ರೀತಿಯಲ್ಲಿ ಅವು ನಡೆದುಕೊಂಡವು. ಇವೆಲ್ಲವೂ ನಂತರದ ದಿನಗಳಲ್ಲಿ ನಿರ್ದಿಷ್ಟ ವ್ಯಕ್ತಿಗಳ ಕೊಲೆಯನ್ನು ಸಮರ್ಥಿಸಲು ನೆರವಾಗುತ್ತವೆ.

ಸಾರ್ವಜನಿಕ ಹಲ್ಲೆ, ಹತ್ಯೆಗಳನ್ನು ನಡೆಸುವ ಮುನ್ನ ರಹಸ್ಯ ಕಾರ್ಯಾಚರಣೆಗಳನ್ನು ನಡೆಸುವುದು ಹಾಗೂ ಅವಕ್ಕೆ ಸಾರ್ವಜನಿಕ ಅಭಿಪ್ರಾಯವನ್ನು ಅಣಿನೆರೆಸುವುದು ಫ್ಯಾಸಿಸ್ಟ್ ಕ್ರಿಮಿನಲ್‌ಗಳ ಕಾರ್ಯವಿಧಾನವಾಗಿದ್ದಂತೆ ತೋರುತ್ತದೆ. ಕನ್ನಡದ ಒಂದು ಟಿವಿ ಚಾನೆಲ್ ನಮ್ಮ ಬರಹಗಾರರೊಬ್ಬರನ್ನು ತನ್ನ ಸ್ಟುಡಿಯೋಗೆ ಕರೆಸಿ, ತನ್ನ



• ಬಿಡ್ಗೋಸ್ಜ್‌ಕ್ ಎಂಬಲ್ಲಿ 1939ರ ಸೆ. 9ರಂದು ಪೋಲೆಂಡ್‌ನ 25 ಪ್ರಮುಖ ವ್ಯಕ್ತಿಗಳನ್ನು ಸಾರ್ವಜನಿಕವಾಗಿ ಕೊಂದ ದೃಶ್ಯ. ಅಲ್ಲಿನ ಐತಿಹಾಸಿಕ ಮಾರ್ಕೆಟ್ ಚೌಕದಲ್ಲಿನ ಮುನಿಸಿಪಲ್ ಮ್ಯೂಸಿಯಂನ ಮುಂದೆ ಇದು ನಡೆಯಿತು. ಅದಾದನಂತರ ಜನರಲ್ಲಿ ಭೀತಿ ಉಂಟುಮಾಡಲು ಶವಗಳನ್ನು 6 ಗಂಟೆಗಳ ಕಾಲ ಅಲ್ಲಿಯೇ ಇಡಲಾಗಿತ್ತು.

Sonderfahndungsbuch

Polen

Herausgegeben vom Reichskriminalpolizeiamt
Berlin C 2, Werderscher Markt 5/6

A. Zeichenerklärung.

1. Name ohne zusätzliches Zeichen und ohne Aktenzeichen = Festnahme für Geheimes Staatspolizeiamt, Abteilung IV/III zu Nr. 19058 III C g.
2. Name mit Zeichen + = Festnahme für Geheimes Staatspolizeiamt, Abteilung IV/III J, zu Nr. 3454.
3. Name mit Zeichen × = Festnahme für Geheimes Staatspolizeiamt, Abteilung IV/II, zu Nr. 03131/39 g—II A 4.
4. Name mit Zeichen E G = Entwichener oder entlassener Straf- (Untersuchungs-) Gefangener.
5. Name mit Zeichen E K oder E Gr = Festnahme für die dabei bezeichneten Dienststellen (Einsatzkommandos oder Einsatzgruppen).

B. Dienstanweisung.

Bei Festnahme einer im Sonderfahndungsbuch Polen ausgeschriebenen Person ist wie folgt zu verfahren:

1. **Zuführung.**
   a) Die für das Geheime Staatspolizeiamt (s. A. 1, 2, 3) und die Einsatzkommandos bzw. Einsatzgruppen (s. A. 5) festgenommenen Personen sind der nächst erreichbaren Staatspolizei-(leit-)stelle zuzuführen.
   b) Die entwichenen oder entlassenen Strafgefangenen (s. A. 4) sind der nächsten Kriminalpolizei-Dienststelle zuzuführen. Diese hat die Festgenommenen bis zur Klärung der Abschiebungsfrage in Vorbeugungshaft zu nehmen.
2. **Meldung an die fahndende Behörde.**
   Von der Festnahme einer der vom Geheimen Staatspolizeiamt (s. A. 1, 2, 3) oder einem Einsatzkommando bzw. Einsatzgruppe (s. A. 5) ausgeschriebenen Person ist der fahndenden Behörde sofort und unmittelbar von der festnehmenden Dienststelle Kenntnis unter Hinweis auf die Ausschreibung im Sonderfahndungsbuch zu geben und gleichzeitig der Verbleib des Festgenommenen zu melden.
3. **Meldung an die veröffentlichende Behörde.**
   Außerdem ist von jeder Festnahme — auch der entwichenen oder entlassenen Strafgefangenen (s. A. 4) — der im Sonderfahndungsbuch Polen ausgeschriebenen Personen dem Reichskriminalpolizeiamt — III B 2 a — zwecks Löschung der Notierung sofort und unmittelbar Kenntnis zu geben.

• ಹಂತಕ ಪಡೆಯು ಕೊಲ್ಲಬೇಕೆಂದು ಮಾಡಿಕೊಂಡಿದ್ದ ಪಟ್ಟಿ

ಆವರಣದಲ್ಲೇ ಅವರ ಮೇಲೆ ದಾಳಿಯಾ
ನೋಡಿಕೊಂಡಿತು.

ಹಿಟ್ಲರ್ ಮಾಡಿದ್ದಕ್ಕೂ, ಸಂಘಪ
ಮಾಡುತ್ತಿರುವುದಕ್ಕೂ ಇರುವ ಸಾಮ್ಯತೆಗಳನ್ನು ಗು
ಕಾರಣಗಳಿವೆಯೆಂಬುದು ಎಲ್ಲರಿಗೂ ಗೊತ್ತು. ಇದ
ಸಂಘಪರಿವಾರವು ಹಿಟ್ಲರನನ್ನು ಎಂದಿಗೂ ಖ
ಬದಲಿಗೆ ಆರಾಧಿಸಿದೆ. ಅಧಿಕೃತವಾಗಿಯೇ ಮೆಚ್ಚಿ
ದೇಶವನ್ನಾಳುತ್ತಿರುವ ಪ್ರಧಾನಿ ಹಾಗೂ ಆತನ
ಆರೆಸ್ಸೆಸ್‌ನ ಜೊತೆಗಿನ ತಮ್ಮ ಸಹಯೋ
ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸಿದ್ಧಾಂತ ಮಾ
ಕಾರ್ಯವಿಧಾನದಲ್ಲೂ ಸಾಮ್ಯತೆಗಳು ಮುಖಕ್ಕೆ ರಾ
ಪ್ರಮಾಣದಲ್ಲಿವೆ. ಹೀಗಾಗಿ ಮುಂದೇನಾಗಬ
ಎಂಬುದನ್ನು ಮೊದಲೇ ಊಹಿಸಲು ನಮಗೆ ಸಾ

ಆದರೂ ನಾವು ಆ ರೀತಿ ಊಹಿಸಬಾರದು
ಕೆಲವರು ಹೇಳುತ್ತಾರೆ. ಬದಲಿಗೆ, ಜರ್ಮ
ನಡೆದಂತೆಯೇ ನಾವು ಪ್ರತೀ ಹಂತದಲ್ಲೂ ಕ
ಹಂತದ ಬಗ್ಗೆ 'ಇದು ಬೇರೆ ರೀತಿಯಲ್ಲೂ ಆಗಬ
ಎಂಬ ಹುಸಿ ನ್ಯೂಟ್ರಲ್ ಆಶಾಭಾವನೆ ತೋರಬ
ಅಂಥವರು ಬಯಸುತ್ತಾರೆ. ಇದು ಸೂಕ್ತ ರಿ
ಫ್ಯಾಸಿಸಂಅನ್ನು ಎದುರಿಸಲು ಬೇಕಾದ
ಮಾಡಿಕೊಳ್ಳದಿರುವಂತೆ ನಮ್ಮನ್ನು ತಡೆಯುತ್ತದೆ. ಆ
ಫ್ಯಾಸಿಸಂಅನ್ನು ಸಮಾಜದಲ್ಲಿ ಅಮಾನ್ಯಗೊಳಿಸುವ
ಅದು ಎಷ್ಟರಮಟ್ಟಿಗೆ ತನ್ನ ಕಬಂಧ ಬಾಹು
ಚಾಚಬಹುದು ಎಂಬುದನ್ನು ಮುಂಗಂಡು
ಎದುರಿಸುವ ಬಗೆಗಳನ್ನು ಹುಡುಕಿಕೊಳ್ಳುವ ತು


ರೆಬೀರೋ ಥರದ ಪೊಲೀಸ್ ದಂತಕಥೆ (ಮು
ಪೊಲೀಸ್ ಕಮೀಷನರ್ ಆಗಿದ್ದವರು, ನಂತರ ಪಂ
ಬಿಕ್ಕಟ್ಟಿನ ಸಂದರ್ಭದಲ್ಲಿ ಅ
ನಿಯೋಜಿತವಾದರು)ಯಾಗಿರುವ ವ್ಯಕ್ತಿಯೂ, 'ಮಾ
ಸಂಝೌತಾ ಎಕ್ಸ್‌ಪ್ರೆಸ್ ಇತ್ಯಾದಿ 'ಹಿ
ಭಯೋತ್ಪಾದಕರು ನಡೆಸಿದ - ದಾಳಿಗಳ ಬಗ್ಗೆ
ಮತ್ತು ವಿಶ್ವ ಹಿಂದೂ ಪರಿಷತ್‌ಗಳಿಗೆ ಗೊತ್ತಿದೆ
ನಾನು ಭಾವಿಸುವುದಿಲ್ಲ, ದಾಳಿಕೋರರು ಅ
ಸದಸ್ಯರಾಗಿರಬಹುದು. ಆದರೆ ಅದರ ಮೇಲಿನ ನಾ
ತಿಳಿದೇ ಇವು ನಡೆದಿರಬೇಕಿಲ್ಲ' ಎಂದು ಹೇ
ಇದು ಅಮಾಯಕತೆಯೋ, ಸತ್ಯವನ್ನು ಆದಷ್ಟೂ ನಿ
ದೃಷ್ಟಿಕೋನದಿಂದ ನೋಡಬೇಕು
ತೋರಿಸಿಕೊಳ್ಳಬೇಕಾದರೆ ಬಳಸುವ ಮಾತಿನ ರಿ
ಗೊತ್ತಿಲ್ಲ. ಏಕೆಂದರೆ, ಆರೆಸ್ಸೆಸ್‌ನಂತಹ ಒಂದು
ಶಿಸ್ತಿನ ಸಂಘಟನೆಯಲ್ಲಿ ಅದರ ಸದಸ್ಯ
ಸಂಘಟನೆಯ ಮೇಲಿನ ನಾಯ
ತಿಳಿಯದೆಯೇ ಇಂತಹ ದೊಡ್ಡ
ಹಾಕುವುದು ಸಾಧ್ಯವಿರುವುದಿಲ್ಲ.

ರೆಬೀರೋ ಅವರಿಗೋ
'ನ್ಯೂಟ್ರಾಲಿಟಿ' ಪ್ರಕಟಪಡಿಸಬ
ಹೇಳುವವರಿಗೋ ಮೇಲಿನೆಲ್ಲಾ
ಗೊತ್ತಿಲ್ಲವೆಂದೇನಲ್ಲ. ಆದರೆ, ಸಾರ್ವ
ಅಳವಡಿಸಬೇಕಾದ ತಂತ್ರಗಾರಿಕೆಯ
ಅವರು ಭಾವಿಸಿರುವ ಸಾಧ್ಯತೆಯ
ಸದಾಶಯದಿಂದಲೇ ಹೊರ
ವಾದಗಳಾಗಿರುತ್ತವೆ. ಬಲಪ
ರಾಜಕಾರಣ ಹಂತಕ ಪಡೆಗಳನ್ನು ಬ
ಟ್ರಯಲ್ ನೋಡುತ್ತಿರುವಾಗ,
ಎದುರುಗೊಳ್ಳಬೇಕಾದ ಶಕ್ತಿಗಳು
ಬಗೆಯ ಕಾರ್ಯವಿಧಾನ
ಅಳವಡಿಸಿಕೊಳ್ಳಬೇಕೆಂಬುದಷ್ಟೇ ಪ

ಅಂತಿಮವಾಗಿ ಕಲ್ಬುರ್ಗಿಯವ
ಅವರ ವಿಚಾರಗಳ ಕಾರಣಕ್ಕೆ ಅಲ್ಲ
ಸಾಬೀತಾಗಬಹುದು. ಆದರೆ, ಅವ
ಹೇಳಲಾಗಿರುವ ಐತಿಹಾಸಿಕ ಸ
ಸುಳ್ಳಾಗಿಸುವುದಿಲ್ಲ ಮತ್ತು ಅದರಿಂ
ಕಲಿಯಲೇಬೇಕಾದ ಐತಿಹಾಸಿಕ
ಅನಿವಾರ್ಯತೆಯನ್ನು ಇಲ್ಲವಾಗಿಸು

ನೀವು ಅವರನ್ನು ಅವರ ವಿ
ಕಾರಣದಿಂದಲೇ ಕೊಂದಿರುವು
ಈ ನಾವೆಲ್ಲಾ ಅವೇ ವಿಚಾರ
ಹೊಂದಿದ್ದೇವೆ ಮತ್ತು ಅವ
ಮುಂದೆಯೂ ಹೇಳಲಿದ್ದೇವೆ. ಬ
ಗುಂಡಿನ ಮೂಲಕ ನೀವದ
ದಮನಿಸಲಾಗದು.

...ಾಡನ್ನೇ ತತ್ತರಿಸಿದ ಕಲಬುರ್ಗಿ ಕೊಲೆ



ನಾನು ಎಂ.ಎಂ.ಕಲಬುರ್ಗಿಯವರನ್ನು ಭೇಟಿ ...ದ್ದು ಒಂದು ಬಾರಿ ಮಾತ್ರ. ಅದೂ ಆಕಸ್ಮಿಕವಾಗಿ ...ಟಿ ಆದದ್ದು.

... ಅದು ಪ್ರಾಯಶಃ 2003-04. ಆಗ ಮಲೆಬೆನ್ನೂರಿನಲ್ಲಿ ...ದ ಒಂದು ಸಭೆಯಲ್ಲಿ ಹಿಂದೂತ್ವವಾದಿ ಪ್ರಮೋದ್ ...ತಾಲಿಕ್ ಉಗ್ರವಾದ ಭಾಷಣವೊಂದನ್ನು ಬಿಗಿದಿದ್ದ. ...ೇ ಸಭೆಯಲ್ಲಿ ಆತನನ್ನು ವಿರೋಧಿಸಿ ಮಾತನಾಡಿದ್ದ ...ೆಹಳ್ಳಿ ಮಠದ ಪಂಡಿತಾರಾಧ್ಯ ಸ್ವಾಮಿಗಳು ಆತನಿಗೆ ...ಯಾದ ಶಾಸ್ತಿ ಮಾಡಿದ್ದರು. ಅವರು ಅವತ್ತು ಆಡಿದ್ದ ...ತು ಅದೆಷ್ಟು ಚೆನ್ನಾಗಿತ್ತೆಂದರೆ ಅದನ್ನು ನಮ್ಮ ಪತ್ರಿಕೆಯಲ್ಲಿ ...ೂರ್ಣವಾಗಿ ಮುದ್ರಿಸಿದ್ದೆವು. ಆದರೇನಂತೆ, ಪಂಡಿತಾರಾಧ್ಯ ...ಮಿಗಳ 'ಕಟ್ಟುವ ಕೆಲಸ'ಕ್ಕಿಂತಲೂ ಮುತಾಲಿಕನ 'ಕೆಡವುವ ...ಸ'ವೇ ಹಿಂದೂತ್ವವಾದಿಗಳಿಗೆ ಮೆಚ್ಚುಗೆಯಾಗಿ ...ದಿನಗಳ ನಂತರ ಮಲೆಬೆನ್ನೂರಿನಲ್ಲಿ ಕೋಮುಗಲಭೆಗಳು ...ಭವಿಸಿದವು. ಆ ಗಲಭೆಗಳಲ್ಲಿ ಹಲವಾರು ಮುಸಲ್ಮಾನರ ...ನೆ, ಆಸ್ತಿಪಾಸ್ತಿಗಳು ನಾಶವಾಗಿದ್ದವು. ಅದೆಲ್ಲಕ್ಕಿಂತ ...ರಂತವೆಂದರೆ ಕೆಲವು ಲಿಂಗಾಯತ ಯುವಕರು ಇಬ್ಬರು ...ಸಲ್ಮಾನ ಮಹಿಳೆಯರ ಮೇಲೆ ಅತ್ಯಾಚಾರವೆಸಗಿ 'ಜೈ ...ರಾಮ್' ಎಂದು ಘೋಷಣೆ ಕೂಗಿದ್ದು.

... ಈ ಎಲ್ಲ ಘಟನೆಗಳು ನನ್ನನ್ನು ತೀವ್ರವಾಗಿ ...ಲ್ಲಾಡಿಸಿದವು. ಯಾಕೆಂದರೆ ಮಲೆಬೆನ್ನೂರು ಒಂದು ...ತಿಯಲ್ಲಿ ನನಗೆ ಹತ್ತಿರವಾಗಿದ್ದ ಊರು. ನಾವು ...ವರಾಗಿದ್ದಾಗ ಬೇಸಿಗೆ ರಜೆಯಲ್ಲಿ ಶಿವಮೊಗ್ಗೆಯಿಂದ ...ಮ್ಮನ ತವರೂರಾದ ಕೊಕ್ಕನೂರಿಗೆ ಹೋಗುವಾಗ ನಾವು ...ಲೆಬೆನ್ನೂರಲ್ಲಿ ಬಸ್ ಬದಲಾಯಿಸಬೇಕಿತ್ತು. ಕೊಕ್ಕನೂರಿನ ... ಬರುವತನಕ ನಾವೆಲ್ಲ ಕಾಯುತ್ತಿದ್ದದ್ದು ನಜೀರ್ ...ಬ ಮುಸಲ್ಮಾನನ ಸೈಕಲ್ ರಿಪೇರಿ ಶಾಪಿನಲ್ಲಿ. ...ಬಾ ಬೆಳ್ಳಗಿದ್ದ ನಜೀರ್‌ನ ತುಟಿಗಳು ದಪ್ಪವಾಗಿದ್ದವು. ... ಆತ ಬಡವನಾಗಿದ್ದರೂ ನಮ್ಮ ಬಗ್ಗೆ ಆತನಿಗೆ ಅದೆಷ್ಟು ...ರೆ ಎಂದರೆ ಆತ ಹತ್ತಿರವಿದ್ದ ಹೊಟೇಲ್‌ನಿಂದ ನಮಗೆಲ್ಲ ...ಡಕ್ಕಿ ಮತ್ತು ಮೆಣಸಿನಕಾಯಿ ತಂದುಕೊಡುತ್ತಿದ್ದ, ಚಾ ...ಸುತ್ತಿದ್ದ. ಬಸ್ ಬಂದಾಗ ನಮ್ಮನ್ನೆಲ್ಲ ಹತ್ತಿಸಿ ನಮ್ಮ ...ೇಜನ್ನು ಆತನೇ ಎತ್ತಿ ಇಡುತ್ತಿದ್ದ.

... ನಮ್ಮ ಕುಟುಂಬದೊಂದಿಗೆ ನಜೀರನದ್ದು ಗಳಸ್ಯಕಂಠಸ್ಯ. ...ಕೆಂದರೆ ನಮ್ಮ ಧರ್ಮು ಚಿಕ್ಕಪ್ಪನಿಗೆ ಮೋಟಾರ್ ...ಳ್ ಇತ್ಯಾದಿಗಳೆಂದರೆ ತುಂಬಾ ಇಷ್ಟ. ಬೈಕು, ರೇಡಿಯೋ, ...ಪ್ ರೆಕಾರ್ಡರ್ ಕೆಟ್ಟರೆ ಅವರೇ ಅದನ್ನು ರಿಪೇರಿ ...ಡಲು ಯತ್ನಿಸುತ್ತಿದ್ದರು. ಇಂತಹ ಸಾಹಸಗಳಲ್ಲಿ ಅವರಿಗೆ ...ಥ್ ನೀಡುತ್ತಿದ್ದದ್ದು ನಜೀರ್. ಅಷ್ಟೇ ಅಲ್ಲ, ಧರ್ಮು ...ಪ್ಪ ತಮ್ಮ ಮನೆಯ ಹಿಂದೆ ಒಂದು ಗಿರಣಿ ಮೆಷಿನ್ ...ಕಿದ್ದರು. ಅದು ಕೈಕೊಟ್ಟಾಗಲೆಲ್ಲ ಅದನ್ನು ಸರಿ ...ಡುತ್ತಿದ್ದದ್ದೂ ಇದೇ ನಜೀರ್. ಇಂತಹ ಕೆಲಸಕ್ಕೆಲ್ಲ ... ನಮ್ಮ ಮನೆಗೆ ಬಂದಾಗ ಹತ್ತಿರದ ಮಿತ್ರನಂತೆಯೇ ...ರ್ಮು ಚಿಕ್ಕಪ್ಪ ಮತ್ತು ಇತರರು ಆತನನ್ನು ...ಸಿಕೊಳ್ಳುತ್ತಿದ್ದರು. ಅಮ್ಮ ಹೇಳುವಂತೆ "ಅಡುಗೆ ಮನೆ ...ಪ್ಪ ಇತರೆ ಎಲ್ಲ ಕಡೆ ನಜೀರನಿಗೆ ಪ್ರವೇಶವಿತ್ತು"! ...ೀರನಿಂದಾಗಿಯೇ ನನ್ನ ಮನಸ್ಸಿನಲ್ಲಿ ಮಲೆಬೆನ್ನೂರು ...ೋಮು ಸೌಹಾರ್ದದ ತಾಣವಾಗಿತ್ತು.

... ಇಂತಹ ಮಲೆಬೆನ್ನೂರು ಕೋಮುಗಲಭೆಗೆ ...ಯಾಗಿದ್ದು ಮತ್ತು ಲಿಂಗಾಯತ ಯುವಕರು ...ತ್ಯಾಚಾರವೆಸಗಿದ್ದು ನನಗೆ ಶಾಕ್ ನೀಡಿತ್ತು. ಇದಾದ ...ವು ದಿನಗಳ ನಂತರ ದಾವಣಗೆರೆಯಲ್ಲಿರುವ ಮುರುಘಾ ...ಠದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಬೇಕೆಂದು ...ಹ್ವಾನ ಬಂತು. ಅಲ್ಲಿಯತನಕ ನಾನು ಯಾವ ಲಿಂಗಾಯತ ...ಠದ ಕಾರ್ಯಕ್ರಮದಲ್ಲೂ ಭಾಗವಹಿಸಿರಲಿಲ್ಲ. ಆದರೆ ...ಲೆಬೆನ್ನೂರಿನಲ್ಲಾದದ್ದರ ಬಗ್ಗೆ ನನ್ನ ಆತಂಕವನ್ನು ಅಲ್ಲಿನ ...ಗಾಯತರೊಂದಿಗೆ ಹಂಚಿಕೊಳ್ಳಬಹುದು ಎಂಬ ...ಯಿಂದ ಒಪ್ಪಿಕೊಂಡೆ.

... ಅವತ್ತಿನ ಸಭೆಯಲ್ಲಿ ಮಾತನಾಡುತ್ತಾ "ಲಿಂಗಾಯತ ...ರ್ಮವನ್ನು ಸ್ಥಾಪಿಸಿದ ಬಸವಣ್ಣ ದೇಹವೇ ದೇಗುಲವಯ್ಯ ...ಎಂದಿದ್ದರು. ನಿಮ್ಮ ಲಿಂಗಾಯತ ಧರ್ಮದ ಸಿದ್ಧಾಂತಕ್ಕೂ, ...ಗ್ರೆಸ್ ಮತ್ತು ಬಿಜೆಪಿ ಪ್ರತಿಪಾದಿಸುವ ಧಾರ್ಮಿಕ ...ದ್ಧಾಂತಕ್ಕೂ ಸಂಬಂಧವೇ ಇಲ್ಲ. ಆದರೂ ಇವತ್ತು ನೀವು ...ಲಿಂಗಾಯತರು ಯಾವುದೋ ದೇವರಿಗೆ ದೇವಸ್ಥಾನ ...ಕಟ್ಟಬೇಕು ಎನ್ನುವವರೊಂದಿಗೆ ಕೈಜೋಡಿಸಿದ್ದೀರಿ. ...ಸಂಘಟನೆಗಳಿಂದ ಪ್ರಚೋದನೆ ಪಡೆದ ಹಲವು ಲಿಂಗಾಯತ ...ಯುವಕರು ಇತ್ತೀಚೆಗೆ ಮಲೆಬೆನ್ನೂರಿನಲ್ಲಿ ಇಬ್ಬರು ...ಮಹಿಳೆಯರ ಮೇಲೆ ಅತ್ಯಾಚಾರವೆಸಗಿ 'ಜೈ ಶ್ರೀ ರಾಮ್' ...ಎಂದು ಅಬ್ಬರಿಸಿದ್ದಾರೆ. ಅದು ಹೇಯವಾದದ್ದು" ...ಎನ್ನುತ್ತಿದ್ದಂತೆ ಗಲಾಟೆ ಶುರುವಾಯಿತು. "ರಾಜಕೀಯ ಮಾತಾಡಬೇಡ" ಎಂದು ಕೆಲವರು ಅಬ್ಬರಿಸಿದರು. ನನಗೂ ಕೋಪ ಬಂತು. "ಇದೇ ಮೊದಲ ಬಾರಿ ನಾನು ಲಿಂಗಾಯತ ಮಠಕ್ಕೆ ಬಂದಿರೋದು. ಇದ್ದೇ ಕೊನೆ ಬಾರಿ ಕೂಡ" ಎಂದು ಹೇಳಿ ಕೂತೆ. ಅದೇ ಸಭೆಯಲ್ಲಿ ಭಾಗವಹಿಸಿದ್ದ ಸಾಣೆಹಳ್ಳಿ ಮಠದ ಪಂಡಿತಾರಾಧ್ಯ ಸ್ವಾಮಿಗಳು "ಲಿಂಗಾಯತ ಮಠ ಕಾರ್ಯಕ್ರಮದಲ್ಲಿ ಇನ್ನು ಮುಂದೆ ಭಾಗವಹಿಸುವುದಿಲ್ಲ ಎಂದು ಹೇಳಬಾರದು. ಕಸ ಪೊರಕೆಗೆ ಎಲ್ಲಿ ಕೆಲಸ ಇರುತ್ತೇ ಹೇಳಿ. ಕಸ ಇರೋ ಕಡೆ" ಎಂದು ಸರಿಯಾಗಿಯೇ ನನಗೆ ಉಪದೇಶ ನೀಡಿದ್ದರು.

ಅವತ್ತು ಕಾರ್ಯಕ್ರಮ ಮುಗಿದನಂತರ ನನ್ನ ಹೋಟೆಲ್‌ಗೆ ಹಿಂದಿರುಗಿದಾಗ ಅದೇ ಹೋಟೆಲ್‌ನಲ್ಲಿ ಕಲಬುರ್ಗಿಯವರೂ ತಂಗಿದ್ದಾರೆ ಎಂದು ಗೊತ್ತಾಯಿತು. ಅವರನ್ನು ಮಾತನಾಡಿಸಲು ಅವರ ರೂಮಿಗೆ ಹೋದೆ. ಅಷ್ಟು ಹೊತ್ತಿಗೆ ಮಠದಲ್ಲಾದ ಗಲಾಟೆ ವಿಷಯ ಅವರ ಕಿವಿಗೆ ಬಿದ್ದಿತ್ತು. ಅವರು ಹಲವಾರು ಶಾಸನ ಮತ್ತು ವಚನಗಳನ್ನು ಉಲ್ಲೇಖಿಸಿ ಹೇಗೆ ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಲ್ಲ ಮಾತ್ರವಲ್ಲ, ಅದಕ್ಕೆ ಹೇಗೆ ವಿರುದ್ಧವಾದದ್ದು ಎಂದೆಲ್ಲ ವಿವರಿಸಿದ್ದರು. ಆಗ ಚಿದಾನಂದ ಮೂರ್ತಿಗಳು ಲಿಂಗಾಯತರು ಹಿಂದೂಗಳು ಎಂದು ವಾದಿಸುವುದನ್ನು ನಾನು ಪ್ರಸ್ತಾಪಿಸಿದಾಗ, ಕಲಬುರ್ಗಿಯವರು "ಹಾಗಲ್ಲ" ಎನ್ನುತ್ತ ಇನ್ನಷ್ಟು ಉದಾಹರಣೆಗಳನ್ನು ಕೊಟ್ಟಿದ್ದರು.

ಅವರೊಂದಿಗೆ ಅವತ್ತು ನಾನು ಅರ್ಧ ಗಂಟೆ ಕಳೆದೆ. ಇತಿಹಾಸ ಮತ್ತು ಸಾಹಿತ್ಯದಲ್ಲಿ ಅವರು ದೊಡ್ಡ ಸಾಧನೆ ಮಾಡಿದ್ದರೂ ನನ್ನಂತ ಅಜ್ಞಾನಿಗೂ ಅರ್ಥವಾಗುವಂತೆ ತುಂಬಾ ಸರಳವಾಗಿ ಮಾತನಾಡಿದ್ದು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಅವರ ಉತ್ತರ ಕರ್ನಾಟಕದ ನುಡಿಗಟ್ಟು, ಜೆಂಟಲ್‌ಮ್ಯಾನ್ ನೇಚರ್, ನಗುಮುಖ, ದನಿಯಲ್ಲಿನ ಮಮತೆ ಎಂದೂ ಮರೆಯಲಾಗದಂತವು.

ಯಾರಿಗೂ ಎಂದೂ ಕೇಡನ್ನು ಬಯಸದಿದ್ದ ಕಲಬುರ್ಗಿಯವರ ಕೊಲೆ ಇಡೀ ನಾಡೇ ತತ್ತರಿಸುವಂತೆ ಮಾಡಿದೆ...


* * *

ಕೆಳೆದ ಶನಿವಾರ ಬೆಂಗಳೂರಿನ ಗಿರಿನಗರ ಪೊಲೀಸ್ ಠಾಣೆಯಲ್ಲಿ ತನ್ನ ವಿರುದ್ಧ ಎರಡನೆ ಅತ್ಯಾಚಾರ ದೂರು ದಾಖಲಾಗುತ್ತಿದ್ದಂತೆ ಸಗಣಿ ಸ್ವಾಮಿ ರಾಘು ಕಂಗಾಲಾಗಿದ್ದಾನೆ. ಎಲ್ಲಿ ಪೊಲೀಸರು ತನ್ನನ್ನು ಬಂಧಿಸುತ್ತಾರೋ ಎಂದು ಭಯಭೀತಿಗೊಳಗಾಗಿದ್ದಾನೆ. ಒಂದು ವರ್ಷದ ಹಿಂದೆ ಪ್ರೇಮಲತಾ ಅವರು ದೂರು ಕೊಡಲು ಮುಂದಾದಾಗ ಆಕೆಯ ಪತಿ ದಿವಾಕರ ಶಾಸ್ತ್ರಿಯ ವಿರುದ್ಧವೇ ಸಂಚು ರೂಪಿಸಿ ಪೊಲೀಸರು ಆ ದಂಪತಿಗಳಿಬ್ಬರನ್ನೂ ಬಂಧಿಸುವಂತೆ ಮಾಡುವಲ್ಲಿ ಆತ ಯಶಸ್ವಿಯಾಗಿದ್ದ. ಆಮೇಲೆ ದೂರು ದಾಖಲಾಗಿ ಪೊಲೀಸರು ಆತನನ್ನು ಬಂಧಿಸಲು ಹೋದಾಗ ಚಾತುರ್ಮಾಸದಲ್ಲಿದ್ದೀನಿ ಎಂಬ ಕಾರಣ ಕೊಟ್ಟು ಬಚಾವಾಗಿದ್ದನಲ್ಲದೆ ತನ್ನ ರಕ್ಷಣೆಗೆ ಸ್ಥಳೀಯ ಭಕ್ತರ ಸೈನ್ಯವನ್ನೇ ಇಟ್ಟುಕೊಂಡಿದ್ದ. ಆದರೀಗ ಬೆಂಗಳೂರಿನಲ್ಲಿ ಆತ ಮತ್ತದೇ ಚಾತುರ್ಮಾಸ ಎಂದು ಕೂತಿರುವಾಗ ಅಕಸ್ಮಾತ್ತಾಗಿ ಪೊಲೀಸರು ತನ್ನನ್ನು ಬಂಧಿಸಲು ಬಂದರೆ ಆಪತ್ತು ಕಾದಿದೆ ಎಂದು ಗ್ರಹಿಸಿದ ರಾಘು ಮತ್ತದೇ ಭಕ್ತರನ್ನು ಪ್ರಚೋದಿಸಿ ತನ್ನನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಜೊತೆಗೆ ತನ್ನನ್ನು ವಿರೋಧಿಸುತ್ತಿರುವವರ ವಿರುದ್ಧ - ವಿಶೇಷವಾಗಿ ನಿಮ್ಮ ಈ ಪತ್ರಿಕೆಯ ವಿರುದ್ಧ - ತನ್ನ ಭಕ್ತರನ್ನು ಎತ್ತಿಕಟ್ಟುವ ಕಾರ್ಯವನ್ನೂ ಆತ ಮಾಡಿದ್ದಾನೆ.

ಆಗಸ್ಟ್ 29ರ ರಾತ್ರಿ ರಾಘು ತನ್ನ ಗಿರಿನಗರದ ಮಠದಲ್ಲಿ ಕೂತು ತನ್ನ ಹಿಂಬಾಲಕರಿಗೆ ಕೊಟ್ಟಿರುವ ಕರೆಯ ಎಂಟು ನಿಮಿಷಗಳ ಆಡಿಯೋ ರೆಕಾರ್ಡಿಂಗ್ ನಮ್ಮ ಕೈಸೇರಿದ್ದು ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ನಮ್ಮ ತಂಡ ನಿರ್ಧರಿಸಿದೆ.

ಅವತ್ತು ರಾಘು ಏನಂದಿದ್ದಾನೆ ಗೊತ್ತಾ? ವಿವರಗಳು ಇಲ್ಲಿವೆ ನೋಡಿ:

ನಮ್ಮನ್ನು ವಿರೋಧ ಮಾಡುವವರ ಬಗ್ಗೆ ಯಾವ ಭಿನಾಭಿಪ್ರಾಯವೂ ಇಲ್ಲ. ಅದು ಅವರ ಜಾತಿ ಸ್ವಭಾವ, ಜನ್ಮ ಸ್ವಭಾವ. ನಮ್ಮ ಸಮಸ್ಯೆ ಇರುವುದು ನಮ್ಮ ಜೊತೆ ಇರುವವರ ಬಗ್ಗೆ. ಬಸ್‌ಸ್ಟ್ಯಾಂಡಿನಲ್ಲಿ ಮಠದ ಬಗ್ಗೆ ಮಾತನಾಡುತ್ತಿದ್ದಾಗ ನಿಮ್ಮ ಪೌರುಷ ಎಲ್ಲಿತ್ತು? ಶಿಷ್ಯ ವೃಂದದ ಪೌರುಷ ಎಲ್ಲಿತ್ತು? ಸಮಾಜವನ್ನು ಉದ್ಧಾರ ಮಾಡೋ ಕೆಲಸ ನಮ್ಮದು. ಆದರೆ ಗುರುಪೀಠವನ್ನು ಕಾದುಕೊಳ್ಳುವ ಕೆಲಸ ನಿಮ್ಮದು. ಧರ್ಮೋ ರಕ್ಷತಿ ರಕ್ಷಿತಃ. ಲಂಕೇಶ್ ಪತ್ರಿಕೆಯೊಂದಿಗೆ ನಾವು ಹೋರಾಟ ಮಾಡೋದಕ್ಕೆ ಸಾಧ್ಯವಿಲ್ಲ. ಬೀದಿ ಬಸವರಿಗೆ ನಾವು ಉತ್ತರ ಕೊಡೋದಕ್ಕೆ ಸಾಧ್ಯವಿಲ್ಲ. ನೀವು ಉತ್ತರ ಕೊಡಬೇಕು ಅದಕ್ಕೆ. ಎಲ್ಲಿದ್ದೀರಿ ನೀವು? ನಿಮ್ಮ ಗುರುವನ್ನು ವಾಚಾಮಗೋಚರನಿಂದನೆ ಮಾಡುವಾಗ, ಸಾಮೂಹಿಂಕವಾಗಿ ಈ ರೀತಿ ನಾಶಮಾಡುವಾಗ ಎಲ್ಲಿದ್ದೀರಿ ನೀವು? ನಾವು ಕೇಳುತ್ತಿರುವ ಪ್ರಶ್ನೆ ಇದು. ನಮ್ಮ ಸಾಮರ್ಥ್ಯ ಕಡಿಮೆಯಾಗಿಲ್ಲ. ಜೀವನಪರ್ಯಂತ ಇಂತಹ ಸಂಗ್ರಾಮಗಳನ್ನು ಎದುರಿಸುತ್ತೇವೆ ನಾವು. ಇಡೀ ಜಗತ್ತು ಮುರಿದುಬಿದ್ದರೂ ನಾವು ಎದುರಿಸುತ್ತೇವೆ. ಆ ಛಾತಿ ನಮಗೆ ಇವತ್ತು ಕೂಡ ಇದೆ. ಆದರೆ ಇದೆಲ್ಲ ಯಾರಿಗಾಗಿ ಎಂಬ ಪ್ರಶ್ನೆ ನಮಗಿದೆ. ಯಾರಿಗಾಗಿ? ಯಾರ ಜೊತೆ ಮಾಡಬೇಕು ಸಂಗ್ರಾಮವನ್ನ? ಅದಕ್ಕೆ ನಾವು ಆಗಲೇ ಹೇಳಿದ್ದು. ಹೊರಗಿರುವವರ ಜೊತೆ ಸಂಗ್ರಾಮ ಮಾಡುವ ಸಂದರ್ಭವಲ್ಲ ಇದು, ಒಳಗಿರುವವರ ಜೊತೆ ಸಂಗ್ರಾಮ ಮಾಡಬೇಕಾದ ಸಂದರ್ಭ ಬಂದುಬಿಟ್ಟಿದೆ. ನಿಮಗೆ ಗುರುಪೀಠ ಬೇಕು ಎಂಬುದು ನಮಗೆ ಗೊತ್ತಾಗುವುದು ಹೇಗೆ? ಹಾಗಾಗಿ ಒಂದು ವಿಷಯವನ್ನು ಪುನಃ ಸ್ಪಷ್ಟಪಡಿಸುತ್ತೇವೆ. ಯಾರೋ ವಿರೋಧ ಮಾಡಿದರು ಎಂಬ ಕಾರಣಕ್ಕೆ ನಾವು ಹೆದರಿ ಓಡುತ್ತಿರುವವರಲ್ಲ, ಸಾಮರ್ಥ್ಯ ಕಡಿಮೆ ಆಗಿರುವವರಲ್ಲ ಅಥವಾ ಅನುಭವವೂ ಕಡಿಮೆ ಆಗಿಲ್ಲ.



ಅವತ್ತು ನಮಗೆ ಎಷ್ಟು ಅನುಭವ ಇತ್ತೋ ಇವತ್ತು ಅದಕ್ಕಿಂತ ಹೆಚ್ಚು ಅನುಭವ ಇದೆ. ಇಂಥವನ್ನು ನಿಭಾಯಿಸಲು ಬೇಕಾದಂತಹ ಎಲ್ಲವೂ ನಮ್ಮ ಹತ್ತಿರ ಇದೆ. ಆದರೆ ಇದನ್ನೆಲ್ಲ ಯಾರಿಗಾಗಿ ಮಾಡಬೇಕು? ಯಾರಿಗಾಗಿ ಮಾಡಬೇಕೋ ಅವರು ಹೋಗಿ ಅಲ್ಲಿ ಕೂತುಕೊಂಡಿದ್ದಾರೆ ಅವರ ಜೊತೆಗೆ ಅಥವಾ ಸುಮ್ಮನಿದ್ದಾರೆ. ಉಳಿಸಿಕೊಳ್ಳುವ ಪ್ರಯತ್ನ ನೀವು ಮಾಡದಿದ್ದರೆ ಉಳಿದುಕೊಳ್ಳುವುದಿಲ್ಲ. ಸ್ಪಷ್ಟಪಡಿಸಬೇಕೆಂದರೆ ಇವತ್ತಿನವರೆಗೂ ಸಾರಥ್ಯವನ್ನು ನಾವು ಮಾಡಿದ್ದೇವೆ. ಸಂಗ್ರಾಮವನ್ನೂ ನಾವೇ ಮಾಡಿದ್ದೇವೆ. ಈಗ ನಿಮ್ಮ ಕೆಲಸ ನೀವು ಮಾಡಿ. ಪುನಃ ಹೇಳುತ್ತೇನೆ, ಸಮಾಜಕ್ಕೆ ಬೇಕಾದ ಎಲ್ಲವನ್ನೂ ನಾವು ಮಾಡುತ್ತೇವೆ. ಆದರೆ ವಿರೋಧದ ಅಲೆ ಏಳುತ್ತಾ ಹೋದಲ್ಲಿ ನೀವು ಸುಮ್ಮನಿರುವಂತಿಲ್ಲ, ಅದು ನಿಮ್ಮ ಕೆಲಸ. ಈ ಸಮಾಜದ ಕೊನೆ ಮಗುವಿಗೆ ಆಪತ್ತು ಬಂದರೆ ನಾವು ಅದನ್ನು ರಕ್ಷಿಸುತ್ತೇವೆ. ಮುಂದೆ ನಿಂತು ನಾವು ಆ ಮಗುವನ್ನು ಕಾಪಾಡುತ್ತೇವೆ. ಆದರೆ ಪೀಠ ಕಾಪಾಡಲು ಯಾರಿದ್ದರು? ಪೀಠದ ಮರ್ಯಾದೆ ಕಾಪಾಡಲು ಯಾರಿದ್ದರು? ಬರ್‍ತಾಬರ್‍ತಾ ಗಬ್ಬೆದ್ದುಹೋಯ್ತಲ್ಲಾ? ಅದ್ಧೇನು ವಿಷಯ ಲಂಕೇಶ ಪತ್ರಿಕೆಯಲ್ಲಿ ಬಂದರೇನು, ಹಾಯ್ ಬೆಂಗಳೂರಲ್ಲಿ ಬಂದರೇನು, ಇನ್ನೆಲ್ಲೋ ಬಂದರೇನು ಅನ್ನೋ ತರಹ ಆದರೆ... ನೋಡು ರಾಮಚಂದ್ರ, ಕೆಲಸ ಮಾಡಕ್ಕೆ ಒಂದು ವಾತಾವರಣ ಬೇಕು, ವಾತಾವರಣ ಇಲ್ಲದಿದ್ದರೆ ಕೆಲಸ ಮಾಡಕ್ಕೆ ಆಗೋದಿಲ್ಲ, ನಾವು ಎಲ್ಲೂ ಕೆಲಸ ಮಾಡಲ್ಲ ಅಂತ ಹೇಳ್ತಾಯಿಲ್ಲ, ನಾವು ಎಲ್ಲಿರುತ್ತೇವೋ ಅಲ್ಲಿ ಕೆಲಸ ಮಾಡುತ್ತಿರುತ್ತೇವೆ. ಇಂತಹದ್ದೇ ಸಾಮ್ರಾಜ್ಯವನ್ನು ರಾಜಸ್ತಾನದಲ್ಲಿ ಕೊಟ್ಟರೋದು ನೆನಪಿರಲಿ. ಸವಾಲು ಹಾಕುತ್ತೇವೆ ನಾವು ನಿಮಗೆ. ಇವತ್ತು ಏನು ಸಾಮ್ರಾಜ್ಯ ಇದೆ ನಮ್ಮದು ಇಂತದ್ದೇ ಸಾಮ್ರಾಜ್ಯವನ್ನು ನಾವು ರಾಜಸ್ತಾನಕ್ಕೂ ಹೋಗಿ ಕಟ್ಟುತ್ತೇವೆ ಬೇಕಿದ್ದರೆ, ಬಿಹಾರಕ್ಕೂ ಹೋಗಿ ಕಟ್ಟುತ್ತೇವೆ ಬೇಕಿದ್ದರೆ. ಬಂಗಾಲಕ್ಕೂ ಹೋಗಿ ಕಟ್ಟುತ್ತೇವೆ ಬೇಕಿದ್ದರೆ. ನಿಮಗೆ ಗೊತ್ತಿರಲಿ, ಬೆಂಗಳೂರಿನಲ್ಲಿ ನಮ್ಮ ಶಿಷ್ಯವಲಯ ಎಷ್ಟಿದೆಯೋ ಅದಕ್ಕಿಂತಲೂ ದೊಡ್ಡ ವಲಯ ಕೊಲ್ಕತ್ತಾದಲ್ಲಿದೆ ಇವತ್ತು. ಸಾಮರ್ಥ್ಯ ಕಡಿಮೆ ಆಗಿ ಅಧೀರನಾಗಿ ಆಡುತ್ತಿರುವ ಮಾತಲ್ಲ ಇದು. ನಿಮಗೆ ಬೇಕಾ ಅಂತ."

ರಾಘುನ ಈ ಪ್ರಲಾಪಕ್ಕೆ ಹಿಂಬಾಲಕನೊಬ್ಬ "ಶ್ರೀಗಳು ಕ್ಷಮಿಸಬೇಕು. ನಮಗೆ ಅರ್ಥ ಆಯಿತು ಧಣಿ, ಅರ್ಥ ಆಯಿತು ಧಣಿ" ಎಂದು ಉತ್ತರಿಸುವುದೂ ರೆಕಾರ್ಡ್ ಆಗಿದೆ.

ಇದೆಲ್ಲದರ ಅರ್ಥವೇನು ಗೊತ್ತಾ?

ಈ ಹಿಂದೆ ಗೋಕರ್ಣದ ದೇವಸ್ಥಾನವನ್ನು ನುಂಗಿ ಹಾಕಿದ ರಾಘು ತನ್ನ ತೆವಲಿಗೆ ಮಲ್ಲಿಕಾ ಶರಾವತ್ ಎಂಬ ಬಾಲಿವುಡ್ ಬಿಚ್ಚಮ್ಮನನ್ನು ತನ್ನ ಮಠಕ್ಕೆ ಕರೆಸಿಕೊಂಡಿದ್ದಾಗ ನಾವು ಒಂದು ವರದಿಯನ್ನು ಪ್ರಕಟಿಸಿದ್ದೆವು. ಅದರಿಂದ ಕೆಂಡಮಂಡಲವಾಗಿದ್ದ ರಾಘು ತನ್ನ ಹಿಂಬಾಲಕರಿಂದ ಪತ್ರಿಕೆ ವಿರುದ್ಧ ರಾಜ್ಯದ ನಾನಾ ಕಡೆ ಕೇಸುಗಳು ದಾಖಲಾಗುವಂತೆ ತಂತ್ರ ರೂಪಿಸಿದ್ದ. ಆತನ ಹಿಂಬಾಲಕರು ಶಿವಮೊಗ್ಗ, ಸಾಗರ ಮತ್ತು ಸಿದ್ದಾಪುರದ ನ್ಯಾಯಾಲಯಗಳಲ್ಲಿ ದೂರುಗಳನ್ನು ದಾಖಲಿಸಿದ್ದರು. ಪ್ರೇಮಲತಾ ಪ್ರಕರಣ ಹೊರಬಿದ್ದನಂತರ ಸಿದ್ದಾಪುರದ ಭಕ್ತ ನಮ್ಮೊಂದಿಗೆ ರಾಜಿಯಾಗಿ, ನಮ್ಮ ಉದ್ದೇಶ ಭಕ್ತರಿಗೆ ನೋವುಂಟು ಮಾಡುವುದಾಗಿರಲಿಲ್ಲ ಎಂಬ ಸ್ಪಷ್ಟನೆಯ ಜೊತೆಗೆ ತಮ್ಮ ದೂರನ್ನು ವಾಪಸ್ ತೆಗೆದುಕೊಂಡರು. ಇನ್ನು ಶಿವಮೊಗ್ಗ ಮತ್ತು ಸಾಗರದಲ್ಲಿ ದೂರು ದಾಖಲಿಸಿರುವವರು 'ಪ್ರಬಲಾ'ಳ ಅತ್ಯಾಚಾರದ ದೂರಿನ ನಂತರ ಏನು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದು ಅವರ ವಿವೇಕಕ್ಕೆ ಬಿಟ್ಟದ್ದು.

ಇರಲಿ, ಮೇಲಿನ ಆಡಿಯೋ ರೆಕಾರ್ಡಿಂಗ್ ಸ್ಪಷ್ಟಪಡಿಸುವಂತೆ ಈ ಕೊಳಕ ಸ್ವಾಮಿ ಈಗ ತನ್ನ ಹಿಂಬಾಲಕರನ್ನು ನಮ್ಮ ವಿರುದ್ಧ ಎತ್ತಿ ಕಟ್ಟಿದ್ದಾನೆ. ಅವರು ಎಂತಹ ಕೆಲಸಕ್ಕೆ ಮುಂದಾಗುತ್ತಾರೋ ಗೊತ್ತಿಲ್ಲ. ಅದು ದೈಹಿಕ ದಾಳಿಯಾಗಬಹುದು, ಕಚೇರಿ ಮೇಲಿನ ದಾಳಿಯೂ ಆಗಬಹುದು, ಕಾನೂನಿನ ಕಿರಿಕ್ ಆಗಬಹುದು.

ಆದ್ದರಿಂದ ಮುಂಜಾಗ್ರತಾ ಕ್ರಮವಾಗಿ ನಾಳೆ ಗುರುವಾರ ಈ ಆಡಿಯೋ ರೆಕಾರ್ಡಿಂಗ್ ಅನ್ನು ಆಧರಿಸಿ, ರಾಘು ನಮಗೆ ಬೆದರಿಕೆ ಹಾಕಿದ್ದಾನೆ ಮತ್ತು ಆತನ ಶಿಷ್ಯರಿಂದ ನಮಗೆ ಬೆದರಿಕೆ ಇದೆ ಎಂದು ಪೊಲೀಸರಿಗೆ ದೂರು ನೀಡಲಿದ್ದೇವೆ!! ■

ಕಂಡಹಾಗೆ





• ಗೌರಿ ಲಂಕೇಶ್
editorlankesh@gmail.com

ಸಂದರ್ಶನ

‘ಸಮಾಜ ವಿರೋಧಿಯಾದ ಸಿದ್ಧಾಂತದಲ್ಲಿ ಶರಣರು ಹೋಗೋದು ತಪ್ಪು’

- ಎಂ.ಎಂ.ಕಲಬುರ್ಗಿ





** ನಿಮ್ಮ ಸಂಶೋಧನೆಯಲ್ಲಿ ಶ್ರಮವನ್ನು ಒಂದು ಮೌಲ್ಯದ ತರಹ ಪ್ರತಿಪಾದನೆ ಮಾಡ್ತೀರಿ. ಇದರ ಹಿನ್ನೆಲೆ ಏನು?*

ಇದು ನನ್ನ ತಂದಿಯಿಂದ ಬಂದಿದ್ದು. ನಮ್ಮದೊಂದು ಕೂಡುಕುಟುಂಬ. ತಂದಿಗೆ ಸಣ್ಣದೊಂದು ವ್ಯಾಪಾರ ಇತ್ತು. ಒಕ್ಕಲುತನ ಮಾಡಿಸ್ತಾ ಇದ್ರ. ನಾವು ಅಷ್ಟು ಶ್ರೀಮಂತರೂ ಅಲ್ಲ, ಬಡವರೂ ಅಲ್ಲ. ಆದರೆ ಊರೊಳಗೆ ಘನತೆ ಗೌರವ ಇಟ್ಟುಕೊಂಡಂತಹ ಸಂಪ್ರದಾಯಸ್ಥ ಕುಟುಂಬ. ನಮ್ಮದು ಪಿತೃಪ್ರಧಾನ ಕುಟುಂಬ. ನನ್ನನ್ನು ಶ್ರಮಸಂಸ್ಕೃತಿಯ ವ್ಯಕ್ತಿ ಮಾಡಿದ್ದೂ ಅಂತಂದ್ರೆ ನಮ್ತಂದೇನ ಅನಿಸ್ತದ. ಭಯಂಕರ ದುಡೀತಿದ್ರ. ಮನ್ಯಾಗ ಯಾರನ್ನು ಸುಮ್ಮಗ ಕೂಡಿಸ ಕೊಡತಿದ್ದಿಲ್ಲ, ಕುಟುಂಬ ಹೆಂಗ್ ಕಟ್ಟಬೇಕು ಅನ್ನೋದು ಇತ್ತು ಅವಗ. ನನಗ ವಿಶಾಲ ಬೆಳೀಲಿಕ್ಕೆ ಜೀವನದೊಂದು ಹೋರಾಟ ಮಾಡಲಿಕ್ಕೆ ಶ್ರಮ ಅಂದ್ರೇನು, ಸಂಬಂಧಗಳೆಂದರೆ ಏನು, ಇವನ್ನೆಲ್ಲ ತಿಳಿಸಿಕೊಟ್ಟದ್ದು ಅವನೆ. ನಮ್ಮ ಕುಟುಂಬದ ಮುಖ್ಯ ಲಕ್ಷಣ ಅಂತೆಂದರೆ ದುಡಿದು ಕೂಡಿ ಬಾಳಬೇಕು. ಆದಕಾರಣ, ನಾನು ‘ಶ್ರಮಸಂಸ್ಕೃತಿ’ ಮತ್ತು ‘ಅವಿಭಕ್ತಪ್ರಜ್ಞೆ’ ಅನ್ನೋ ಪದಗಳನ್ನ ಬಳಸ್ತಾ ಇರತೀನಿ.

** ಸಾಹಿತ್ಯ ಕ್ಷೇತ್ರಕ್ಕೆ ಬರಲು ನಿಮಗೆ ಏನು ಪ್ರೇರಣೆ?*

ನಾನು ಕಲ್ತ ಮೊಟ್ಟಮೊದಲ ಪದ್ಯ ಯಾವುದು ಗೊತ್ತದ? ‘ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗಾರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ’ ಅನ್ನೊ ಮಹಲಿಂಗರಂಗನ ಪದ್ಯ; ನಮ್ಮನೆ ಸ್ವಲ್ಪ ದೊಡ್ಡದಿತ್ತು, ನಮ್ಮಣ್ಣ ಪ್ರೈಮರಿ ಸ್ಕೂಲ್ ಟೀಚರಿದ್ರ. ಎಲ್ಲ ಹುಡುಗ್ರು ರಾತ್ರಿ ಓದೋಕೆ ನಮ್ಮನೆಗೆ ಬರ್ತಿದ್ರು. ದೀಪ ಹಚಕೊಂಡು ಕೂಡ್ತಿದ್ರು. ಅವರು ಗಂಟೆಗಟ್ಟಲೆ ಪದ್ಯ ಓದತಿದ್ರಲ್ಲ, ನಾನು ಕಲ್ತುಬಿಟ್ಟೆ. ಮುಂದ ಸಾಲ್ಯಾಗ ಮಾಸ್ತರು ನನ್ನ ಕಡಿಂದ ಪದ್ಯಗಳನ್ನು ಹಾಡಿಸಿದ್ರು, ಸಾಹಿತ್ಯದ ಬಗ್ಗೆ ನನಗೆ ಆಸಕ್ತಿ ಬೆಳೆದು ಬಂದಿದ್ದು ಹೀಂಗ.

** ನಿಮ್ಮ ವ್ಯಕ್ತಿತ್ವದ ಮೇಲೆ ಆಳವಾದ ಪ್ರಭಾವ ಬೀರಿದ ವ್ಯಕ್ತಿಗಳು ಅಂದ್ರೆ?*

ನನ್ನ ತಂದೇನೆ. ಅವನ ಬಿಟ್ಟರೆ ನನ್ನ ಗುರುಗಳಾದ ಬಿ.ಟಿ. ಸಾಸನೂರರದೊಂದು ಆದರ್ಶ; ಆರ್.ಸಿ. ಹಿರೇಮಠರದೊಂದು ಆದರ್ಶ. ಸಾಸನೂರು ವಿಜಾಪುರ ವಿಜಯ ಕಾಲೇಜಕ್ಕ ಇದ್ರು. ಅವರ ವಿದ್ವತ್ತು ಮತ್ತು ಬೋಧನ ಇತ್ತಲ್ಲ ಅದು ಬಹಳ ದೊಡ್ಡದು. ಅವರು ಯೂನಿವರ್ಸಿಟಿಗೆ ಬಂದಿದ್ರೆ, ಯೂನಿವರ್ಸಿಟಿ ಚರಿತ್ರೆ ಬೇರೆ ಆಗಿತ್ತು; ನಮ್ಮ ಕನ್ನಡ ಡಿಪಾರ್ಟಮೆಂಟ್ ಚರಿತ್ರೆ ಬೇರೆ ಆಗ್ತಿತ್ತು, ಅಷ್ಟು ದೊಡ್ಡ ವಿದ್ವಾಂಸರು. ಅವರಿಗೆ ಇಂಗ್ಲಿಷು, ಮರಾಠಿ, ಹಿಂದಿ, ಸಂಸ್ಕೃತ ಗೊತ್ತಿತ್ತು, ಬೋಧನೆ ಬಗ್ಗೆ ಎಂಥಾ ಕಳಕಳಿ ಇತ್ತಂದ್ರೆ, ಅವರು ನಮಗ ಗೋವಿಂದಪೈ ಅವರ ‘ಗೊಲ್ಗೊಥಾ’ ಹೇಳಬೇಕಾಗಿತ್ತು, ಬೈಬಲ್ ಅಭ್ಯಾಸ ಮಾಡಿ ಬರ್ತಿದ್ರು. ಕ್ರಿಶ್ಚಿಯನ್ ಪ್ರೊಫೆಸರ್ ಗೂಢ ಚರ್ಚೆ ಮಾಡಿ ಬರ್ತಿದ್ರು. ಮತ್ತ ಯಾವುದೇ ಒಂದು ವಿಷಯ ಹೇಳಬೇಕಾದ್ರೆ ಸ್ಪಷ್ಟವಾಗಿ ನಿಖರವಾಗಿ ಹೇಳೋರು. ವಿದ್ವತ್ತು ಮತ್ತು ಶಿಸ್ತು ಅಂದ್ರೆ ಏನು ಅನ್ನೋದನ್ನ ನಾನು ಅವರಿಂದ ಭಾಳವಾಗಿ ಕಲಿತೆ. ಆರ್‌ಸಿ ಅವರದು ಬಹಳ ದೊಡ್ಡ ವಿದ್ವತ್ತು, ಆದರೆ ಶಿಸ್ತಿರಲಿಲ್ಲ, ಬರೀವಾಗ ಒಂದು ಸಿಸ್ಟಮ್ಯಾಟಿಕ್ಕಾಗಿ ಬರೆಯೋದಾಗಲಿ, ಮಾತಾಡುವಾಗ ಒಂದು ಸಿಸ್ಟಮ್ಯಾಟಿಕ್ಕಾಗಿ ಮಾತಾಡೋದಾಗಲಿ ಇರಲಿಲ್ಲ, ಒಂದು ರೀತಿ ಅಸ್ತವ್ಯಸ್ತ ಎರಡನೆದು ಶ್ರಮ. ಅವರಷ್ಟು ದುಡಿಯೋರನ್ನ ನಾನು ನೋಡೇ ಇರಲಿಲ್ಲ.

** ಸಂಶೋಧನೆಯಲ್ಲಿ ನಿಮಗೆ ಮಾದರಿ?*

ಇವತ್ತಿಗೂ ಆದರ್ಶ ಅಂತಂದ್ರೆ ಆರ್. ನರಸಿಂಹಾಚಾರ್. ಅವರ ‘ಕರ್ನಾಟಕ ಕವಿಚರಿತೆ’ಯ ಮೂರು ಸಂಪುಟಗಳು. ಆಗಿನ ಕಾಲಕ್ಕ, ತಾಡೋಲೆಯಿಂದ ಹೊರಗ ತರೋದು, ಅಂಥ ಸಂಪುಟಗಳ ತರೋದು ಭಾಳದೊಡ್ಡ ಕೆಲಸ ಅದು. ಅವರಿಗೆ ಕನ್ನಡ ಬರ್ತಿತ್ತು, ತಮಿಳು ಬರ್ತಿತ್ತು, ತೆಲುಗು ಬರ್ತಿತ್ತು, ಸಂಸ್ಕೃತ ಬರ್ತಿತ್ತು, ಕವಿಚರಿತೆ ಸಂಪುಟಗಳನ್ನ ನಾನು ನೂರಾರು ಸಲ ಓದಿರಬೇಕು. ಪ್ರತಿಸಲ ಓದ್ದಾಗಲೂ ಹೊಸದೇ. ‘ಕರ್ನಾಟಕ ಕವಿಚರಿತೆ’ ಪರಿಷ್ಕಾರ ಮಾಡಬೇಕು ಅಂತ ನನಗ ಪ್ಲಾನಿತ್ತು. ಆಗಲಿಲ್ಲ. ಇವತ್ತಿಗೂ ನರಸಿಂಹಾಚಾರರು ನನಗ ಒಂದು ಆಶ್ಚರ್ಯ.

** ಸಂಶೋಧನೆಯ ನಿಮ್ಮ ಪರಿಕಲ್ಪನೆ ಯಾವುದು?*

ಆಕರ ಶೋಧ, ಆಕರ ವಿಶ್ಲೇಷಣೆ, ಆಕರ ವ್ಯಾಖ್ಯಾನ. ಈಗ ಇನ್ನೊಂದು ಮಾಡ್ತಾ ಇದ್ದೀನಿ. ಆಕರ ಅನ್ವಯಿಕತೆ. ಮೊದಲ್ನೇದು ಆಕರಮುಖಿ ಸಂಶೋಧನೆ. ಬಹಳ ಮುಖ್ಯ ಇದು. ಹಂಪಿ ಯೂನಿವರ್ಸಿಟಿ ಒಳಗಿದ್ದಾಗ, ಮಹಿಳಾ ಲೇಖಕಿಯಾಗ ಸೂಚಿ ಮಾಡಾಕೆ ಹಚ್ಚಿದ್ದೆ. ಕೆಲವರು ಸೂಚಿ ಮಾಡದೇನು ದೊಡ್ಡ ಕೆಲಸ ಅಂದ್ರು. ಆದರೆ ಎರಡನೇ ವರ್ಷ ಮಹಿಳಾ ಸಾಹಿತ್ಯ ಚರಿತ್ರೆ ಬರೀಲಿಕ್ಕೆ ಹಚ್ಚಿದೆ. ಆಕರ ಮಾಡದೇ ಹೋದ್ರೆ ಚರಿತ್ರೆ ಹೆಂಗ ಬರೀತಿರಿ? ಮತ್ತ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ನನ್ನ ಶಾಸನಗಳು ಹೊರತಂದೆವು. ಇವು ಎಂಥಾ ಸೇರ್ಪಡೆ! ಎರಡ್ನೇದು ಆಕರ ವಿಶ್ಲೇಷಣೆ. ವಿಶ್ಲೇಷಣಾಮುಖಿ ಸಂಶೋಧನೆ ಇದು. ಇಲ್ಲಿ ಚರಿತ್ರೆಯ ಶೋಧ ಆಗ್ತದೆ. ನಮ್ಮಲ್ಲಿ ಚರಿತ್ರೆ ಅಸ್ತವ್ಯಸ್ತ ಆಗದ. ಇದು ನವೋದಯ ಕಾಲದ ದೊಡ್ಡ ಛಾಲೆಂಜಿತ್ತು, ಅದನ್ನು ಮಾಡಿದಿವಿ. ಮೂರನೇದು ವಾಖ್ಯಾನಮುಖಿ ಸಂಶೋಧನೆ. ಇಲ್ಲಿ ಅರ್ಥಶೋಧ ನಡೀತದ. ಚರಿತ್ರೆಯನ್ನ ಹುಡಕೋದು ಬ್ಯಾರೆ. ವ್ಯಾಖ್ಯಾನದ ಮೂಲಕ ಅದರ ಅರ್ಥ ಹುಡುಕೋದು ಬ್ಯಾರೆ. ಇಬ್ಬರ ವಿಶ್ಲೇಷಣೆ ಮಾಡದಾಗ ಒಂದೇ ರಿಜಲ್ಟ ಸಿಗಬಹುದು. ಆದರೆ ವ್ಯಾಖ್ಯಾನ ಮಾಡುವಾಗ ನಾಬ್ಯಾರೆ ನೀಬ್ಯಾರೆ ಆಗ್ತೀವಿ. ಇಲ್ಲಿ ನಮ್ನಮ್ಮ ದೃಷ್ಟಿಕೋನ ಸೇರ್ತವೆ. ಕೊನೆಯದು ಅನ್ವಯಮುಖಿ ಸಂಶೋಧನೆ. ಈಗ ‘ಪಂಚಾಚಾರ್ಯರು ಜಗದ್ಗುರುಗಳಲ್ಲ ಜಗಾದಾಚಾರ್ಯರು’ ಅನ್ನೊವಂತಹ ಲೇಖನ ಬರ್ದಿದೀನಿ. ಸಣ್ಣಮಾತಲ್ಲ ಇದು. ಇದು ಸಾಮಾಜಿಕವಾಗಿ ಪರಿವರ್ತನೆಗೆ ಕಾರಣವಾಗ್ತದೆ.

** ನಿಮ್ಮ ಮಾರ್ಗ ಸಂಪುಟಗಳ ಮುನ್ನುಡಿಯಲ್ಲಿ ವೇದನೆಯ ಮಾತುಗಳಿವೆ. ‘ಸಂಶೋಧಕ ಸಣ್ಣ ಶಿಲುಬೆ ಏರಬೇಕಾಗುತ್ತದೆ ಅಗ್ನಿಕುಂಡಗಳನ್ನ ಹಾಯಬೇಕಾಗ್ತದೆ’ ಅಂದಿದ್ದೀರಿ. ನನ್ನ ಸಮಕಾಲೀನರಿಗೆ ಹೋಲಿಸಿದರೆ ನಾನು ಹೆಚ್ಚು ಇದನ್ನು ಅನುಭವಿಸಿದೆ ಅಂತ ಬರೀತೀರಿ. ಯಾಕೆ?*

ನನ್ನ ಸಮಕಾಲೀನರಲ್ಲಿ ಇಬ್ಬರು. ಒಬ್ಬರು ಎಂ. ಚಿದಾನಂದಮೂರ್ತಿ. ಮತ್ತೊಬ್ಬರು ಟಿ.ವಿ.ವೆಂಕಟಾಚಲಶಾಸ್ತ್ರಿ. ಶಾಸ್ತ್ರಿಗೆ ಅಂಥ ಶಿಲುಬೆ ಏರೋ ಪ್ರಸಂಗ ಬರಲಿಲ್ಲ. ಚಿದಾನಂದಮೂರ್ತಿಗೆ ಸ್ವಲ್ಪ ಬಂತು. ನಮ್ಮಿಬ್ಬರ ಸಂಶೋಧನೆ ಬರೀ ಅಕಾಡೆಮಿಕ್ ಅಲ್ಲ, ಬರೀ ಅಕಡೆಮಿಕ್ ಆದ್ರೆ ಅಂಥ ತೊಂದರೆ ಇರಲ್ಲ, ಸಂಶೋಧನೆ ಸ್ವಲ್ಪ ಸಾಮಾಜಿಕ ಆದಕೂಡ್ಲೆ ತೊಂದ್ರೆ ಸುರು ಆಗ್ತವೆ. ಚಿದಾನಂದಮೂರ್ತಿ ಕೂಡ ನನ್ನಂತೆ ಅನ್ವಯಿಕ ಸಂಶೋಧನೆ ಮಾಡಿದೋರು. ಆದರೆ ಮೂರ್ತಿಯವರಿಗಿಂತ ನನಗೆ ಹೆಚ್ಚು ವಿರೋಧ ಬಂತು. ನನ್ನ ವೃತ್ತಿಜೀವನದಲ್ಲಿರೋ ವಿರೋಧಿಗಳು ಅಕಡೆಮಿಕ್ ಪ್ರಶ್ನೆಗಳನ್ನ ಸಮಾಜಕ್ಕೆ ಒಯ್ದರು. ಸಮಾಜದ ತಲಿ ಕೆಡಿಸಿದ್ರು. ಮಠಗಳು ನನ್ನ ವಿರುದ್ಧವಾಗೊ ಹಾಗೆ ಮಾಡಿದ್ರು.

** ಇದಕ್ಕೆ ನಿಮ್ಮ ಸಂಶೋಧನೆಯಲ್ಲಿರೊ ಒಂದು ಗುಣವೂ ಕಾರಣ ಇರಬಹುದಾ? ಆ ವಿಷಯದಲ್ಲಿ ಇನ್ನೊ ಹುಡುಕಾಟ ಸಾಧ್ಯ ಇದೆ ಅನ್ನೋವಾಗಲೇ, ಅವಸರದಲ್ಲಿ ತೀರ್ಮಾನಗಳಿಗೆ ಬರೋದು. ದಿಟ್ಟವಾದ ಹೇಳಿಕೆ ಕೊಡೋದು.*

ಇಲ್ಲ, ನನಗ ಖಾತ್ರಿ ಅನಸದಾಗ ಹೇಳಬೇಕು ಅನ್ನಾಂವ ನಾ..

** ವಿಜಯನಗರದ ಬಗ್ಗೆ ನಿಮ್ಮ ಈಚಿನ ಸಂಶೋಧನೆಯಲ್ಲಿ ಕೃಷ್ಣದೇವರಾಯ ಕನ್ನಡ ವಿರೋಧಿ ಅಂತೀರಿ. ಅದಕ್ಕೆ ಏನು ಆಧಾರ?*

ನೋಡಿ. ಕರ್ನಾಟಕದಲ್ಲಿ ವಿಜಯನಗರದ ಇತಿಹಾಸ ಬರದೋರೆಲ್ಲ ಶ್ರೀವೈಷ್ಣವರು. ತಿರುಪತಿ ಭಕ್ತರು. ಅವರಿಗೆಲ್ಲ ಕೃಷ್ಣದೇವರಾಯ ಆಶ್ರಯಕೊಟ್ಟಿದ್ದ. ಹಿಂಗಾಗಿ ಅವನ್ನ ಅವರು ವೈಭವೀಕರಿಸಿ ಬರದಬಿಟ್ರು. ನಾ ಎತ್ತಿದ ಪ್ರಶ್ನೆಗೆ ಉತ್ತರ ಕೊಡ್ರಲ್ಲ ಮತ್ತ. ಅವನ ಆಸ್ಥಾನದೊಳಗ ಎಷ್ಟು ಜನ ಕನ್ನಡ ಕವಿಗಳಿದ್ರು? ತೆಲುಗು ಕವಿಗಳು ಎಷ್ಟು ಜನ ಇದ್ರು? ಮತ್ತ ಸ್ವತಃ ಕೃಷ್ಣದೇವರಾಯನೇ ತೆಲುಗಿನೊಳಗ ಬರದ. ಕನ್ನಡದೊಳಗ ಯಾಕ್ ಬರೀಲಿಲ್ಲ? ಅವನ ಆಸ್ಥಾನದೊಳಗ ಕನ್ನಡಿಗರು ಎಷ್ಟು ಜನ ಇದ್ರು? ಅಂವ ಬಂದ ಬಳಿಕ ಅಲ್ಲಿದ್ದ ಶೈವಸಂಸ್ಕೃತಿಯ ವಾತಾವರಣ ಏನಾತು? ವೈಷ್ಣವ ಸಂಸ್ಕೃತಿ ಎಷ್ಟು ಬೆಳೀತು? ಇವೆಲ್ಲ ನೋಡಿದರೆ ಅಂವ ಹಂಪೀ ಕ್ಷೇತ್ರಕ್ಕೇ ಅನ್ಯಾಯ ಮಾಡ್ಯಾನ ಅನಿಸ್ತದ. ಕನ್ನಡಿಗರಿಗೇ ಅನ್ಯಾಯ ಮಾಡ್ಯಾನ ಅನಿಸ್ತದ.

** ವಿಜಯನಗರದ ಬಗ್ಗೆ ಕಟ್ಟಿರೊ ಬಹುತೇಕ ಇತಿಹಾಸಾನೇ ವೈಭವೀಕರಣದ್ದು..*

ಅಷ್ಟೇ ಅಲ್ಲ, ಮುಸಲ್ಮಾನ ವಿರೋಧಿ ಧೋರಣೇದು. ನನಗ ತಾಳಿಕೋಟ ಯುದ್ಧ ಅದೆಯಲ್ಲ, ಅದು ಹಿಂದೂ ಮುಸಲ್ಮಾನರ ನಡುವೆ ನಡೆದ ಯುದ್ಧವಲ್ಲ, ಅದು ತೆಲುಗರು ಮತ್ತು ಕನ್ನಡಿಗರ ನಡುವ ನಡೆದ ಯುದ್ಧ. ಕನ್ನಡಿಗರು ಮುಸಲ್ಮಾನ್ ಸೈನಿಕರ ಸಹಾಯ ತೆಗೆದುಕೊಂಡು ತೆಲುಗರನ್ನ ಸೋಲಿಸಿದ ಕಥೆಯದು. ಮತ್ತ ಇನ್ನೊಂದು ಪ್ರಶ್ನೆ ಅದೆಯಲ್ಲ, ಹಂಪಿಯಾಗ ವೈಷ್ಣವ ದೇವಾಲಯವೆಲ್ಲ ಒಡದಾವ. ಶೈವದೇವಾಲಯಗಳು ಒಡದಿಲ್ಲ, ಇದ ನೋಡುವಾಗ ವೈಷ್ಣವ ಮತ್ತ ಶೈವರ ನಡುವಿನ ಯುದ್ಧ ಅದು. ಇದು ನನ್ನ ಥೀಸಿಸ್ಸು. ಇದಕ್ಕ ಇನ್ನೂ ಹೆಚ್ಚು ಗಟ್ಟಿ ಆಧಾರಗಳು ಸಿಗ್ತಾ ಇದಾವೆ. ನಾನು ಇದನ್ನ ಹೇಳಿದ ಮ್ಯಾಲೆ ಒಬ್ರೂ ಉತ್ತರ ಬರದಿಲ್ಲ.

** ಸಂಶೋಧಕರಾಗಿ ಸಂಸ್ಥೆಗಳನ್ನು ಕಟ್ಟುವ ಕೆಲಸ ಮಾಡಿದಿರಿ. ನಿಮ್ಮ ಈ ಅನುಭವದ ಮುಖ್ಯ ಸಂಗತಿ ಯಾವುದು?*

ನನಗ ನನ್ನ ಕುಟುಂಬದಿಂದ ಬಂದ ಅವಿಭಕ್ತ ಪ್ರಜ್ಞೆ ಅದೆಯಲ್ಲ, ಅದು ಈ ಸಂಸ್ಥೆಗಳನ್ನ ಕಟ್ಟೋದಕ್ಕೆ ಸಹಾಯಕವಾಗಿದೆ. ಒಬ್ಬ ಬೆಳೆಯೋದಕ್ಕಿಂತ ಕೂಡಿ ಹತ್ತುಮಂದಿ ಬೆಳೀಬೇಕು. ವ್ಯಕ್ತಿ ಮತ್ತು ಸಂಸ್ಥೆಗಳ ಆಯ್ಕೆ ಬಂದಾಗ, ವ್ಯಕ್ತಿಗೆ ಸುಖ ಮಾಡೋಕೆ ಹೋದರೆ ಸಂಸ್ಥಾ ಹಾಳಾಗ್ತದ. ಸಂಸ್ಥೆಗೆ ಸುಖ ಮಾಡೋಕೆ ಹೋದರೆ ವ್ಯಕ್ತಿ ಸಿಟ್ಟಿಗೇಳ್ತಾನ. ಇಂತಹ ಪ್ರಸಂಗದೊಳಗ ನಾನು ಸಂಸ್ಥೆ ಪರವಾಗಿ ಇರೋನು.

** ಆದರೂ, ಬೆಂಗಳೂರು ವಿವಿಯಲ್ಲಿ ಜಿ.ಎಸ್.ಎಸ್ ನೇತೃತ್ವದಲ್ಲಿ ನಡೆದ ಸೆಮಿನಾರುಗಳು ಆಧುನಿಕ ಸಾಹಿತ್ಯ ವಿಮರ್ಶೆಗೆ ಕೊಟ್ಟ ಕೊಡುಗೆ, ಬೆಳೆಸಿದ ವೈಚಾರಿಕ ದೊಡ್ಡದು. ನಿಮ್ಮಲ್ಲಿ ಕೊಂಚ ಪ್ರಾಚೀನ ಸಾಹಿ ಸಂಪಾದನೆಗೆ ಹೆಚ್ಚು ಒತ್ತುಕೊಟ್ಟಿರಿ. ಹೀಗಾಗಿ ಬ ಬಗೆಯ ಸಾಂಪ್ರದಾಯಿಕ ಕೆಲಸ ಆಯ್ತು ಅನಿಸೋಲ*

ಅದು ಹಿಂಗಾಗ್ತದ. ರಾಜಕೀಯವಾಗಿ ರಾಜ ಎಲ್ಲಿರ್ತದ ಅಲ್ಲಿ ಅಸಾಂಪ್ರದಾಯಕ ಚಟುವಟಿಕೆ ಹೆಚ್ಚ ನಮ್ಮದು ಸ್ವಲ್ಪ ಸಾಂಪ್ರದಾಯಕ ಒಪ್ತೇನಿ. ಆದರ ಸಾಮಗ್ರಿ ವಿಷಯದಲ್ಲಿ ನಮಲ್ಲಿ ಭಾಳ ದೊಡ್ಡ ಆಯ್ತು

** ಹಂಪಿಯ ವಿಶ್ವವಿದ್ಯಾಲಯದಲ್ಲಿ ಕುಲಪತಿ ಮಾಡಿದ ಕೆಲಸದ ವಿಶೇಷತೆ ಏನು ಅಂತ ತಿಳೀ*

ನನ್ನ ಜೀವನದೊಳಗ ಕರ್ನಾಟಕ ಕಾಲೇಜದ ಇದ್ದ ಕಾಲ ಬಿಟ್ರೆ ನಾನು ಸಮಾಧಾನವಾಗಿ ಕೆಲಸ ಮ ಸಂಸ್ಥಾ ಅಂದರ ಕನ್ನಡ ವಿಶ್ವವಿದ್ಯಾಲಯ. ಮೂರು ಅಲ್ಲಿ ನಾನು ಸಾರ್ಥಕವಾಗಿ ಕಳೆದಿದೀನಿ. ಅಲ್ಲಿನ ಸಹಕಾರದಿಂದ ಅಲ್ಲಿ ಅಕೆಡಮಿಕ್ ಸಂಚ ಉಂಟುಮಾಡೋಕೆ ನನಗೆ ಸಾಧ್ಯವಾಯ್ತು, ಒಮ್ಮೆ ಅನಿಸ್ತದ. ಕನ್ನಡ ವಿವಿಗೆ ನೇಮಕ ಮಾಡುವಾಗ್ಲೇನೆ, ಜನರನ್ನ ಎರಡು ಮೂರು ಭಾಷೆ ಗೊತ್ತಿರೋ ಮಾಡಬೇಕಾಗಿತ್ತು ಅಂತ.

** ಕನ್ನಡ ವಿವಿಗೆ ನೀವು ಕೊಟ್ಟ ಆಯಾಮದ ಹೇಳಿದಿರಿ. ಅದು ನಿಮ್ಮ ಸಂಶೋಧನ ವ್ಯಕ್ತಿತ್ವಕ್ಕೆ ಏನಾ ಆಯಾಮ ಕೊಟ್ಟಿತಾ?*

ಯಾಕಿಲ್ಲ, ನನ್ನ ದೇಶೀಯತೆ ಬಗೆಗಿನ ಒಲವು ಏನ ಅದು ಅಲ್ಲಿ ಮತ್ತಷ್ಟು ಬೆಳೀತು. ದಲಿತ, ಸೂಫಿ, ಬುಡ ಮಹಿಳಾ ಮತ್ತ ಬೇರೆಬೇರೆ ಜನಾಂಗದ ಅಧ್ಯಯನ ಹಿ ಬೇರೆಬೇರೆ ವಿಷಯಗಳಲ್ಲಿ ಕೆಲಸ ಮಾಡಿದವರ ಜತೆ ಬೇರೆ ಆಯಾಮ ಸಿಕ್ತು.

** ಸಂಶೋಧನೆ ಕೆಲಸ ಸರ್ಕಾರದ ಸಂಸ್ಥೆ ಮಾಡೋಕೂ ಮಠಗಳಲ್ಲಿ ಮಾಡೋಕೂ ವ್ಯ ಇರಬಹುದು. ಮಠಗಳಲ್ಲಿ ಸೀಮಿತವಾದ ಚೌಕಟ ಕೆಲಸ ಮಾಡಬೇಕಾಗುತ್ತದೆ. ಅದನ್ನು ಮೀರ ಆಗಿದೆಯಾ?*

ಅದರೊಳಗೂ ಎಷ್ಟು ಸಾಧ್ಯ ಅದ, ಅಷ್ಟ ಮಾಡ್ಲಿಕ್ಕೆ ಪ್ರಯತ್ನ ಮಾಡ್ತೀನಿ. ಈಗ ಗದ ತೋಂಟದಾರ್ಯ ಮಠದಿಂದ ತಿಂತಿಣಿ ಮೊನ್ನಪ್ಪ ಬಗ್ಗೆ ಆತು, ಗರೂಡ ಸದಾಶಿವರಾಯನ ಬಗ್ಗೆ ಮೋಟ್ನಳ್ಳಿ ಹಸನಸಾಬರ ಬಗ್ಗೆ ಆತು, ಪುಸ್ತಕ ಬಂ ಎಲ್ಲರು ಕೂಡಿ ಬದುಕು ಮಾಡೋ ಸಂಸ್ಕೃತಿಯಲ್ಲಿ ಇರ್ತದ ಅಂತಿಳಕೊಂಡು ಪ್ರಕಟ ಮಾಡ್ಲಿಕ್ಕೆ ಅವ ಕೊಟ್ಟೆವು. ಕೆಲವು ಕಡೆ ಗುಜುಗುಜು ಆತು. ಗದಗಿನ ಸ್ವಾಮಿಗಳು ನನಗೆ ಬೆಂಬಲವಾಗಿ ನಿಂತ್ರು. ಅ ನನ್ನ ವಿದ್ಯಾರ್ಥಿ ಇದ್ರು. ತರಗತಿಯೊಳಗ ನಾನು ಸಾಹಿತ ಸಮಾಜದ ಬಗ್ಗೆ ಭಾಳ ಮಾತಾಡ್ತಿದ್ದೆ. ಅದರ ಪ್ರ ಸ್ವಲ್ಪು ಅವರ ಮೇಲೆ ಆಗಿರಬಹುದು. ಆದರೆ ಇದ ಅವರ ಓದೇ ಭಾಳ ದೊಡ್ಡದು. ತಾನಾಗಿಯೇ ಅ ಮಾಡಿಕೊಳ್ಳೋದು, ಯಾವುದಾದರೂ ಹೊಸ ವಿ ಬಂತಂದ್ರ, ಆ ಬುಕ್ಕಾ ತರಸ್ಕೊಂಡು ಓದೋ ಚರ್ಚಿಸೋದು ಅವರಲ್ಲದ. ಅವರ ಕಾರಿನಾಗ ಯಾವ ಹೊಸ ಪುಸ್ತಕ ಇದ್ದೇ ಇರ್ತಾವ.

** ನೀವು ಮರಾಠಿಯ ದೊಡ್ಡ ಸಂಶೊ ರಾ.ಚಿಂ.ಢೇರೆಯವರ ಸಂಶೋಧನೆಗಳನ್ನ ಕನ್ನಡಕ್ಕೆ ಅನು ಮಾಡಿಸಿ ಪ್ರಕಟ ಮಾಡಿಸಿದಿರಿ. ಢೇರೆಯವರ ಬಗ್ಗೆ ಎಲ್ಲೂ ನಿಮ್ಮ ಬರೆಹದಲ್ಲಿ ಪ್ರಸ್ತಾಪ ಇಲ್ಲ. ಇದು ಸಾಧ್ಯವಾಯ್ತು?*

ಏನಾಯ್ತು, ನನ್ನ ಮಗ ಪುಣೇಕಿದ್ನಲ್ಲ, ಹ್ವಾದೆ. ಹ್ವಾ ನನಗ ಯಾರೋ ಒಬ್ಬರು ಢೇರೆಯವರ ಪರಿ ಮಾಡಿಸಿದ್ರು. ಢೇರೆಯವರ ಕೆಲಸಗಳೆಲ್ಲ ಗಮನಕ್ಕ ಬಂ ಈ ಖಂಡೋಬಾ ಆಯ್ತು, ಲಜ್ಜಾಗೌರಿ ಆ ದತ್ತಸಂಪ್ರದಾಯ ಆಯ್ತು, ಶ್ರೀವಿಠಲ ಆ ನಾಥಸಂಪ್ರದಾಯ ಆಯ್ತು, ಈ ಪುಸ್ತಕಗಳಲ್ಲಿ ಕನಾ ಸಂಸ್ಕೃತಿಗೆ ಬಾಗಲ ತಗ್ಗೀತಾವೆ ಅನುಸ್ತು, ಕನ್ನಡಕ್ಕೆ ಅನು ಮಾಡಸ್ತೀನಿ ಅಂದೆ. ಅವರೂ ಒಪ್ಪಿದ್ರು. ಸಾಂಸ್ಕೃತಿಕ ಆದಾನ ಪ್ರದಾನ ನಡೀಬೇಕು ಅನ್ನೊ ನನ್ನ ಉ ಈಡೇರ್‍ತು, ಢೇರೆ ದೊಡ್ಡ ವಿದ್ವಾಂಸ. ಗೊತ್ತಿರದ ಇ ವಿಷಯಗಳನ್ನ ಗೊತ್ತು ಮಾಡಿಕೊಟ್ಟ. ಅಕೆಡಮಿಕ್ ಆದರೆ ಕಟುವಾದ ಸತ್ಯವನ್ನ ಧೈರ್ಯವಾಗಿ ಹೇ ಇದು ಭಾಳ ದೊಡ್ಡ ವಿಷಯ.

* ನಿಮ್ಮ ಆಧುನಿಕ ಸಾಹಿತ್ಯದ ಓದಿನ ಬಗ್ಗೆ ಕೇಳೋಕೆ ಸ್ತಯಿದೆ. ಯಾರು ನಿಮ್ಮ ಆಯ್ಕೆ?

ಮಾಡರ್ನ್‌ದೊಳಗ ನಾನು ಕಾದಂಬರಿ, ಕತೆ ಕಡೆ ಕ್ಕ ಲಕ್ಷ್ಯ ಕೊಡಲಿಲ್ಲ. ಮುಖ್ಯವಾಗಿ ಕಾವ್ಯ ಮತ್ತು ರ್ಶೆ ಲೈಕ್ ಮಾಡ್ತೇನೆ. ವಿಮರ್ಶೆಯೊಳಗ ನಮ್ಮ ಕೋಟಿ. ಕಾವ್ಯದ ಬಗ್ಗೆ ಬೇಂದ್ರೇನೆ. ಯಾಕಂದ್ರ ಕೋಟಿ ಬಳಸುವಂಥ ಭಾಷೆ ಕನ್ನಡಕ್ಕೆ ಹೊಸತು. ಬೇಂದ್ರೇದು. ನನ್ನ ದೃಷ್ಟಿಯೊಳಗ ಹೆಚ್ಚಿನ ಕವಿಗಳು ರ್ಗೀಕರಣದ ಕಡೆ ಹೋದ್ರು. ಸೃಜನದಲ್ಲಿ ಧಾರವಾಡದ ದರಿಗೆ ಬೇಂದ್ರೆ. ಮೈಸೂರು ಮಾದರಿಗೆ ಕುವೆಂಪು. ದು ದೇಶೀ ಮಾದರಿ. ಇನ್ನೊಂದು ಮಾರ್ಗಿಯ ಮಾದರಿ. ರ್ಗಿಯ ಮಾದರೀದು ಗ್ರಂಥಸ್ಥ ಭಾಷೆ. ಕಣವಿ ದಲಾದ ಉತ್ತರ ಕರ್ನಾಟಕದವರು ಕೂಡ ಮೈಸೂರು ಡೆಗೆ ಹೋಗಿಬಿಟ್ಟರು. ಆದರೆ ಬೇಂದ್ರೆ ಮಾತ್ರ ಕಂಠಸ್ಥ ಲಿ ನಿಂತ್ರು. ನಮ್ಮ ಈ ದೇಶೀ ಪರಂಪರೆ ಅದೆಯಲ್ಲ, ದೊಳಗ ಅವರೊಬ್ಬರೇ ಬರದೋರು. ಬೇಂದ್ರೆ ಕಾವ್ಯ ಕೂಡಲೇ ನಮ್ಮ ಒಂದು ಪರಂಪರೇನೇ ಮಾತಾಡ್ತದ, ತ್ತದ ಅನಸ್ತದ.

** ಸಂಶೋಧನೆ ವಿಷಯದಲ್ಲಿ ಮೈಸೂರು ಮಾದರಿಯ ಕರಣೆ ಆಯ್ತಾ?

ಆಯ್ತಲ್ಲ. ಸಂಶೋಧನೆಯೊಳಗ ಧಾರವಾಡ ಮಾದರಿ ಶಂಭಾ. ಆ ಕಡೆ ಆರ್.ನರಸಿಂಹಾಚಾರ್ ಮೈಸೂರು ದರಿ. ಶಂಭಾ ಅವರದ್ದು ದೇಶೀ ಮಾದರಿ. ಸಿಂಹಾಚಾರ್‌ದು ಮಾರ್ಗೀಯ ಮಾದರಿ. ಶಂಭಾ ಕ್ಷಿತಿಶೋಧದ ಮಾದರಿ. ನರಸಿಂಹಾಚಾರ್‌ದು ಚರಿತ್ರೆ ಧದ ಮಾದರಿ. ನಾನು ಶಂಭಾ ಮಾದರಿಯನ್ನ ದುವರೆಸಬಹುದಿತ್ತು, ಕಣವಿಯವರು ಬೇಂದ್ರೆಯವರ ದರಿಯನ್ನ ಮುಂದುವರೆಸಬಹುದಿತ್ತು. ನಾವೇನು ದಿವಿ. ರಾಜಧಾನಿಯೊಳಗ ಇರೋದನ್ನ ಶ್ರೇಷ್ಠ ತಿಳಕೊಂಡು ಬಿಟ್ವಿವಿ. ನಮ್ಮ ಶಂಭಾ ಮತ್ತು ದ್ರೆ ಅನುಯಾಯಿಗಳಿಲ್ಲದ ನಾಯಕರಾಗಿ ಹೋಗಿಬಿಟ್ರು.

* ಇದಕ್ಕೆ ಇನ್ನೂ ಆಳವಾದ ಸಾಂಸ್ಕೃತಿಕ ಣಗಳಿರಬಹುದು ಅನಿಸುತ್ತೆ. ಕಣವಿ, ಕಟ್ಟೀಮನಿ, ಮಾಳವಾಡ, ವೃಷಭೇಂದ್ರಸ್ವಾಮಿ, ನೀಲಗಂಗಯ್ಯ ಜಾರ ಇವರೆಲ್ಲಾ ಕುವೆಂಪು ಪ್ರಭಾವಕ್ಕೆ ಒಳಗಾದರು. ವಾಡದಲ್ಲಿ ಮೊದಲಿಂದಲೂ ಇರುವ ಬ್ರಾಹ್ಮಣ ನಾಯತರ ನಡುವಣ ಸುಪ್ತ ಸಂಘರ್ಷಗಳೂ ಣವಾಗಿರಬಹುದಾ?

ಇದೂ ಒಂದು ಕಾರಣ ಅದ ಅನಿಸ್ತದ. ಯಾಕಂದ್ರ ಕ ಬ್ರಾಹ್ಮಣ ಲೇಖಕರು ಶೂದ್ರರನ್ನ ಭಾಳ ಯೋತಿದ್ದಿಲ್ಲ. ಅದಕ್ಕ ಇವರೇನು ಮಾಡಿದರೂ, ಕುವೆಂಪು ತಾನೇ, ಆ ಕಡೆ ಹೋಗಿಬಿಟ್ಟರು. ಈ ಒಳಸೆಳೆತಗಳೂ ಮಾಡ್ಯಾವೆ.

* ಪ್ರಾಚೀನ ಲೇಖಕರಲ್ಲಿ ನಿಮ್ಮ ಆಯ್ಕೆ ಯಾರು?

ಒಬ್ಬ ಬಸವಣ್ಣ, ಒಬ್ಬ ಹರಿಹರ, ಒಬ್ಬ ಕುಮಾರವ್ಯಾಸ. ಮಾರವ್ಯಾಸನ ಬೀಸಿದೆಯಲ್ಲ ಭಾಳದೊಡ್ಡದು. ಅಂವ ಟಕದೊಳಗ ಮಾತಾಡೊ ಕ್ರಮ, ಹೇಳೋ ರೀತಿ, ನಾನುಭವ ಭಾಳ ದೊಡ್ಡದು. ಕನ್ನಡ ಭಾಷೆಯನ್ನ ಹಂಗ ಹಣ್‌ಹಣ್ ಮಾಡಿ ಅಭಿವ್ಯಕ್ತಿ ಮಾಡದೋರೇ ಇಷ್ಟೆಲ್ಲ ಅಭಿವ್ಯಕ್ತಿ ದೃಷ್ಟಿಯಿಂದ ಮಾತಾಡ್ತಿದೀನಿ. ವುದ ದೃಷ್ಟಿಯಿಂದಲ್ಲ. ಅವನು ವೈದಿಕತೆ ಪ್ರತಿಪಾದನೆ ತ್ತಾನೆ.

* ಹರಿಹರನ ಆಯ್ಕೆಗೆ ಕಾರಣ?

ಅವನ ವಸ್ತುವಿನ ಆಯ್ಕೆ ಮತ್ತು ಅದರೊಳಗಿನ ರ್ಷ ಕಾರಣ. ಕನ್ನಡದ ಮೊಟ್ಟಮೊದಲ ಸಂಘರ್ಷ ಅಂವ. ಶರಣರ ಆಶಯಗಳಿಗೆ ಕವಿತ್ವದ ಅಭಿವ್ಯಕ್ತಿ ಅಂವ ಹರಿಹರ. ಅಲ್ಲಿ ಬರುವಂತಹ ಸಂಘರ್ಷಗಳು ವಲ್ಲ, ಧಾರ್ಮಿಕ ಪುರೋಹಿತಶಾಹಿ ಜತೆ ಸಂಘರ್ಷ, ಶಾಹಿ ಜತೆ ಸಂಘರ್ಷ, ಕನ್ನಡದಲ್ಲಿ ಅಷ್ಟು ಧೈರ್ಯವಾಗಿ ಡಿದ್ದು ಹರಿಹರನೇ.

* ಪಂಪನೂ ವಿರೋಧ ಇದ್ದ.

ಇದ್ದ. ಆದರೆ 'ಒಲಗಿಸಿ ಬಾಳ್ವುದೇ ಳಾಧಿನಾಥರಂ' ಅಂತಿಳಕೊಂಡು ಒಂದ ರೀತೀಲಿ ವಾಗಿ ಹೇಳ್ತಾನೆ. ಆದರೆ ಹರಿಹರನ ಧೈರ್ಯ ಭಾಳ ದು. ಮತ್ತ ಕಾವ್ಯದಲ್ಲಿ ದೇಸೀ ಬಳಸುವಂಥ ಬೆಯಲ್ಲಾ, ರಳಕುಳಕ್ಷಳ ನಿರಾಕರಣೆ ಮಾಡಿದ್ದು, ಫಾರ್ಮ ಕೈಬಿಟ್ಟದ್ದು, ನೋಡಿ ಹಿಂಗದ. ಈ ಟಿಟನ್ ಜನ ಇದ್ರಲ್ಲಾ, ಅವರಿಗೂ ಈ ದೇಸಿಗೂ ಒಂದು ಸಂಬಂಧ ಇದ್ದಂಗ ಕಾಣಿಸ್ತದ. ಕನ್ನಡದಲ್ಲಿ ಶುರುಮಾಡಿದ್ದ ಹರಿಹರ. ತೆಲುಗಿನೊಳಗ ಪಾಲ್ಕುರಿಕೆ ಸೋಮೇಶ್ವರ. ತಮಿಳಿನೊಳಗ 63 ಪುರಾತನರ ಮೇಲೆ ಪುರಾಣ' ಬರದ್ನಲ್ಲ, ಶೇಕ್ಕಿಳಾರ್ ಎಲ್ಲ ಶೈವರೆ.

* ಕನ್ನಡದಲ್ಲಿ ಈಗ ನಡೆಯುತ್ತಿರುವ ಸಾಂಸ್ಕೃತಿಕ ಯನಗಳ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಯಬೇಕಿದೆ.

ನನದೊಳಗ ಪ್ರತಿಷ್ಠಿತರ ನೆಲೆಯಿಂದ ಮಾಡೋ ಸಾಂಸ್ಕೃತಿಕ ಅಧ್ಯಯನಗಳೂ ಆದಾವ. ಮತ್ತ ಕೆಳನೆಲೆಯಿಂದ ಮಾಡೋ ಸಾಂಸ್ಕೃತಿಕ ಅಧ್ಯಯನಗಳೂ ಆದಾವ. ಮೊದಲನೆಯವು ವೈದಿಕಮುಖಿಯಾಗಿ ನಡದಾವ. ಇದು ಅವರು ಮಾಡೋ ದೋಷ. ಕೆಳಗಿನವರು ಮಾಡೋ ಸಂಶೋಧನೆಯೊಳಗ ದೃಷ್ಟಿಕೋನ ಬರೋಬ್ಬರಿ ಅದ. ಆದರೆ ಅಭ್ಯಾಸದ ಕೊರತೆ ಅದ. ಹಿಂಗಾಗಿ ಎರಡೂ ಕಡೆ ಫಲ ಸರಿ ಬರತಿಲ್ಲ. ಇದರಿಂದಾಗಿ ನಿಜವಾದಂಥ ಸಾಂಸ್ಕೃತಿಕ ಅಧ್ಯಯನ ಈ ಎರಡೂ ಮಿತಿಗಳನ್ನ ಮೀರಿ ಬರಬೇಕಾಗ್ತದ. ಇಲ್ಲಿ ನಾನು ಕೃತಿ, ಆಕೃತಿ, ಸಂಸ್ಕೃತಿ, ವಿಕೃತಿ ಅಂತ ನಾಲ್ಕು ಪರಿಕಲ್ಪನೆ ಬಳಸ್ತೀನಿ. ಕೃತಿ ವೈಯಕ್ತಿಕ. ಅದು ಎಲ್ಲರಿಂದ ಸ್ವೀಕೃತ ಆದ್ರೆ ಅದು ಆಕೃತಿ. ಈ ಆಕೃತಿ ಸಾಮಾಜಿಕ ನ್ಯಾಯದ ಪರವಾಗಿದ್ರೆ ಸಂಸ್ಕೃತಿ. ಸಾಮಾಜಿಕ ನ್ಯಾಯದ ವಿರೋಧವಾಗಿದ್ರೆ ವಿಕೃತಿ. ಈ ಬಗ್ಗೆ ನಾನು ಒಂದ ಲೇಖನ ಬರೆಯೋನಿದ್ದೀನಿ.

* ನೀವು ವೈಯಕ್ತಿಕವಾಗಿ ಸಂಶೋಧನೆ ಮಾತ್ರ ಮಾಡದೋರಲ್ಲ, ಹಲವಾರು ಜನರ ಕೈಲಿ ಮಾಡಿಸಿದೋರು ಕೂಡ. ಸುಮಾರು ಒಂದು ಸಾವಿರ ಪುಸ್ತಕಗಳ ಹಿಂದೆ ನಿಮ್ಮ ಪ್ರೇರಣೆ ಒಂದಲ್ಲ ಒಂದು ರೀತೀಲಿ ಇದೆ. ಈ ಪುಸ್ತಕ ಶ್ರದ್ಧೆಗೆ ಕಾರಣ ಏನು?

ನನ್ನ ಪ್ರೀತಿಗಳು ಎರಡೇ. ಒಂದು ಬಸವಣ್ಣ, ಎರಡು ಕನ್ನಡ. ಇದು ಕನ್ನಡದ ಕೆಲಸ ಅನ್ನೋದೆ ಪುಸ್ತಕಗಳನ್ನ ಹೊರತರೋದಕ್ಕೆ ಕಾರಣ. ಕರ್ನಾಟಕ ಸಂಸ್ಕೃತಿಯಲ್ಲಿ ಯಾವ್ಯಾವು ಕ್ಷೇತ್ರ ಉಪೇಕ್ಷವಾಗಿದಾವೆ, ಅವನ್ನ ಗುರುತಿಸೋದು, ಅದರೊಳಗ ಕೆಲಸ ಮಾಡಸೋದು, ನನ್ನ ಸ್ವಭಾವ. ಒಬ್ಬನೇ ಮಾಡೋ ಕೆಲಸ ಅಲ್ಲಿದು. ಹತ್ತು ಜನ ಸೇರಿ ಮಾಡೋ ಕೆಲಸ ಇದು. ನೋಡಿ. ಪುಣೆಗೆ ಹೋಗಿದ್ದೆ. ಲೊರಂಜೈನನ ಕಾಳಾಮುಖಾಸ್ ಅಂಡ್ ಕಾಪಾಲಿಕಾಸ್ ಪುಸ್ತಕ ಭಂಡಾರ್ಕರ್ಸ್‌ನಿಂದ ಜೆರಾಕ್ಸ್ ಮಾಡಿ, ಅಲ್ಲೇ ಇದ್ದ ವಿರೂಪಾಕ್ಷ ಕುಲಕರ್ಣಿ ಹಿಡಿದು ಅನುವಾದ ಮಾಡಿಸ್ಲೆ. ಪುಸ್ತಕ ಪ್ರಾಧಿಕಾರದಿಂದ ಅದು ಬಂತು. ಕನ್ನಡ ಕೆಲಸಕ್ಕ ನನಗ ಇಂಥವೇ ಸಂಸ್ಥೆ ಅಂತಿಲ್ಲ. ಯೂನಿವರ್ಸಿಟಿ ಬೇಕು. ಸರ್ಕಾರವೂ ಬೇಕು. ಮಠಗಳೂ ಬೇಕು.

* ಕನ್ನಡದಲ್ಲಿ ವರ್ಷಕ್ಕೆ 3000 ಪುಸ್ತಕಗಳು ಬರ್ತಾಯಿವೆ. ಅಷ್ಟರಮಟ್ಟಿಗೆ ಓದುವಿಕೆ ಇದೆ ಅನಿಸುತ್ತಾ?

ಈ ಟೀವಿ ಬಂದ ಬಳಿಕ ಅದನ್ನ ನೋಡೋರು ಹೆಚ್ಚಾಗಿರಬಹುದು. ಆದ್ರೆ ಪುಸ್ತಕ ಓದೋರ ಸಂಖ್ಯೆ ಕಡಿಮೆಯಾಗಿಲ್ಲ. ಯಾಕಂದರೆ ಪುಸ್ತಕ ನಮಗ ಸಂಗಾತಿಯಾಗಿ ಕೆಲಸ ಮಾಡುವಂತಹ ಒಂದು ಸರಳ ಮಾಧ್ಯಮ. ನಿಧಾನವಾಗಿ ಓದಬಹುದು. ತಿರಗಿತಿರಗಿ ಓದಬಹುದು. ಓದಿ ವಿಚಾರ ಮಾಡ್ಲಿಕ್ಕೆ ಹಚ್ತದೆ. ಇದು ಟೀವ್ಯಾಗೆಲ್ಲಿ ಸಾಧ್ಯವಾಗತದ? ಆದ್ರ ಒಂದ ಮಾತ ಹೇಳ್ತೀನಿ. ನಮ್ಮ ಕಾಲಕ್ಕಿಂತ ಈಗ ಪುಸ್ತಕದ ಸೌಂದರ್ಯ, ಗುಣಮಟ್ಟ ಹೆಚ್ಚಾಗಿದೆ. ವೇಗಾನೂ ಹೆಚ್ಚಾಗಿದೆ. ಆದ್ರ ಈ ವೇಗದಿಂದ ಪುಸ್ತಕಗಳಲ್ಲಿ ಅಚ್ಚಿನದೋಷಗಳ ಕಡೆ ಯಾರೂ ಗಮನ ಕೊಡ್ತಿಲ್ಲ. ಈ ವೇಗಾನೆ ಒಂದು ರೀತೀಲಿ ಶಾಪ ಆಗೇದ.

* ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್ ಕಲಿಕೆಯ ಪ್ರಶ್ನೆ ಈಗ ವಾಗ್ವಾದಕ್ಕೆ ಕಾರಣವಾಗಿದೆ. ನೀವು ಕಲಿಸಬಾರದು ಅಂತ ನಿಲುವು ತೆಗೆದುಕೊಂಡಿರಿ. ಯಾಕೆ?

ನೋಡಿ. ಇಂಗ್ಲಿಷು ಅಂತಾರಾಷ್ಟ್ರೀಯವಾಗಿ ದೊಡ್ಡ ಭಾಷೆ. ಕನ್ನಡ ಒಂದು ಪ್ರಾಂತಿಯ ಭಾಷೆ. ಪ್ರಾಂತೀಯ ಭಾಷೆ ಜತೆ ಅಂತಾರಾಷ್ಟ್ರೀಯ ಭಾಷೇನ ಕಲಿಸೋಕೆ ಶುರುಮಾಡಿದ್ರೆ, ಒಂದು ಸಣ್ಣಂಗಡಿ ಮಗ್ಗುಲಿಗೆ ಒಂದು ದೊಡ್ಡಂಗಡಿ ತಂದಿಟ್ಟಂಗ ಆಗ್ತದೆ. ಸಣ್ಣಂಗಡಿ ಕೆಲ ದಿವಸದೊಳಗೆ ಮುಚ್ಚಹೋಗ್ ಬಿಡ್ತದೆ.

* ನೀವು ನಿಮ್ಮ ಪ್ರೀತಿಯ ಎರಡು ಸಂಗತಿಗಳಲ್ಲಿ ಮೊದಲನೇದು ಬಸವಣ್ಣ ಎರಡ್ನೇದು ಕನ್ನಡ ಅಂದ್ರಿ ಬಸವಣ್ಣನ ಆಯ್ಕೆಯ ಹಿನ್ನೆಲೆ ಏನು?


ಒಂದ ಮಾತು ಹೇಳ್ತೀನಿ. ಇಡೀ ಕರ್ನಾಟಕದ ಧಾರ್ಮಿಕ ಮುಖಂಡರೊಳಗ ಬಸವಣ್ಣನಷ್ಟು ಪ್ರಭಾವವನ್ನು ಉಳಿದವರು ಯಾರೂ ಮಾಡಿಲ್ಲ. ಜನಸಾಮಾನ್ಯರ ಮೇಲೆ ದೊಡ್ಡ ಪ್ರಭಾವ ಬೀರಿದಂತಹ ಕರ್ನಾಟಕ ಸಂಸ್ಕೃತಿಯ ಮಹಾಪುರುಷ ಅಂತಂದ್ರ ಬಸವಣ್ಣ ಒಬ್ಬನೇ. ಇಷ್ಟೆ. ಅವನಿಗೆ ಲಿಂಗಾಯತರ ಟಚ್ ಸ್ವಲ್ಪ ಕಡಿಮೆಯಾಗಬೇಕು. ಅವನ ಸೋಶಿಯಲ್ ಫಿಲಾಸಫಿ ಮುಖ್ಯ ಇಟ್ಟಗೋಬೇಕು. ನನಗ ಒಮ್ಮ ಗುಲಬರ್ಗ ವಿಶ್ವವಿದ್ಯಾಲಯದೊಳಗ ಬಸವ ಪೀಠದಲ್ಲಿ ಲೆಕ್ಚರ್ ಕೊಡಲಿಕ್ಕೆ ಕರಸಿದ್ರು. ದಲಿತಕವಿ ಸಿದ್ದಲಿಂಗಯ್ಯ 'ಶರಣರ ಸಾಮಾಜಿಕ ನ್ಯಾಯ' ಅಂತ ಲೆಕ್ಚರ್ ಕೊಟ್ಟಿದ್ದರು. ನಾನು 'ಶರಣರಿಗಾದ ಸಾಮಾಜಿಕ ಅನ್ಯಾಯ' ಅಂತ ಲೆಕ್ಚರ್ ಕೊಟ್ಟೆ. 12ನೇ ಶತಮಾನದ ತರುವಾಯ ಶರಣರಿಗೆ ಸಾಮಾಜಿಕ ಅನ್ಯಾಯ ಭಾಳಾಗೇದ. ನಮ್ಮಲ್ಲಿ ಪುರೋಹಿತಶಾಹಿ ಬೆಳೆದುಬಂತು. ಎಲ್ಲ ಕಡೆ ಈ ಪುರೋಹಿತಶಾಹೀನೆ ಧರ್ಮವನ್ನ ಹಾಳು ಮಾಡೋದು. ಬಸವಣ್ಣ ಪುರೋಹಿತಶಾಹಿ ತೆಗೆದು ಹಾಕಿದ್ರ ಅದು ಮತ್ತೆ ಸೇರಕೊಂಡುಬಿಡ್ತು. ಅಲ್ಲದು ಧರ್ಮದೊಳಗಿರೊ ಸಾಮಾಜಿಕ ಸ್ಟಕ್ಚರನ್ನ ಟಚ್ ಮಾಡೋದಿಲ್ಲ. ಬಸವಣ್ಣ ಸಾಮಾಜಿಕವನ್ನ ಟಚ್ ಮಾಡ್ತಾನೆ; ಸಮಸಮಾಜ ಮತ್ತು ಶ್ರಮಸಮಾಜ ಇವೆರಡರ ಬಗ್ಗೆ ಶರಣರು ಏನು ಹೇಳ್ಯಾರ ಅದು ದೊಡ್ಡದು.

* ಮಾರ್ಗ-4ರ ಲೇಖನಗಳಲ್ಲಿ ಎರಡು ಆಯಾಮಗಳಿವೆ. ಮೊದಲನೆಯದು-ಶರಣ ಸಂಸ್ಕೃತಿಯನ್ನು ಪ್ರತಿಷ್ಠಾಪನೆಯ ಹಟ. ಎರಡನೆಯದು- ಅದಕ್ಕೆ ತೊಡಕಾಗಿರುವ ಸಂಗತಿಗಳ ಮೇಲಿನ ಪ್ರತಿರೋಧ. ಈ ಹಟ ಮತ್ತು ಪ್ರತಿರೋಧಗಳಿಗೆ ಏನು ಕಾರಣ?

ದುರ್ದೈವದ ಸಂಗತಿ ಅಂದ್ರ, ಬಸವಣ್ಣ ಯಾವ ಒಂದು ವೈದಿಕತೆಯನ್ನ ವಿರೋಧಿಸಿ ಹೊರಗ ಬಂದಿದ್ದನೊ, ಅದೇ ವೈದಿಕತೆಯ ಬುಟ್ಟಿಯೊಳಗ ಲಿಂಗಾಯತ ಸಮಾಜ ಹೊಂಟಾದ; ಲಿಂಗಾಯತ ಸಮಾಜದೊಳಗ ಇರೋ ಪುರೋಹಿತಶಾಹಿಗಳು ಬಸವಣ್ಣನ ಸಮಾಜವನ್ನ ಎಳಕೊಂಡು ಹೊಂಟಾರ. ಇದಾ ಒಂದುದೊಡ್ಡ ಅಪಾಯಕ್ಕ ಒಯ್ದು ಮುಟ್ಟಿಸ್ತದ ಅಂತನ್ನೊ ಆತಂಕ ಆಗೇದ ನನಗ. ಸಮಾಜ ವಿರೋಧಿಯಾದ ಯಾವುದೇ ಸಿದ್ಧಾಂತದಲ್ಲಿ ಶರಣರು ಹೋಗೋದು ತಪ್ಪು ಅಂತ ನನಗೆ ಹೇಳಬೇಕಾಗದ. ಎರಡನೇದ್ದಾಗಿ ಸುಳ್ಳು ಇತಿಹಾಸ ಹೇಳಿ ಪುರೋಹಿತಶಾಹಿಗಳು ಸಮಾಜದ ಮೇಲೆ ತಮ್ಮ ಅಧಿಕಾರವನ್ನ ಪ್ರತಿಷ್ಠಾಪಿಸಲಿಕ್ಕ ಯತ್ನ ನಡಸ್ಯಾರ. ಅದಕ್ಕಾಗಿ ಜನರ ಕಣ್ಣ ತಗಸಬೇಕು. ಅಪಾಯದಿಂದ ಸಮಾಜವನ್ನ ದೂರ ಮಾಡಬೇಕು. ಈ ಉದ್ದೇಶದಿಂದ ನಾನು ಏಕಕಾಲಕ್ಕ ಶೈವ ಪುರೋಹಿತಶಾಹಿಯನ್ನ ಕೆಡಹುವ ಮತ್ತ ಶರಣ ಪರಂಪರೆಯ ಗುಣಾತ್ಮಕ ಅಂಶಗಳನ್ನ ಕಟ್ಟುವ ಕೆಲಸ ಮಾಡಬೇಕಾಯಿತು. ಮುಂದೆ ಕೂಡ ಮಾಡೋನಿದ್ದೀನಿ.

■ ಸಂದರ್ಶಕರು : ರಹಮತ್ ತರೀಕೆರೆ

(ಶ್ರೀ ಕಲಬುರ್ಗಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಮಾಡಿದ ಸಂದರ್ಶನದ ಆಯ್ದ ಭಾಗಗಳು.)



ಪ್ರೊ. ಕಲಬುರ್ಗಿಯವರೊಂದಿಗೆ ಸಂದರ್ಶಿಸಿದ ರಹಮತ್ ತರೀಕೆರೆ

ಮಾರ್ಗದಲಿ ಹೆಜ್ಜೆಯಾಗಿ..

ಸತ್ಯ ಉಳಿಸುವೆವು ಹತ್ಯೆಗಳ ಸರದಿಯಲಿ ಸಿಡಿದು ನಿಲ್ಲುತ್ತಾ..
ಹುಡುಕುವುದು ಬಿಡೆವು ನಿಮ ತುಪಾಕಿಯ ಗುಂಡಿಗೆ ಗುಂಡಿಗೆಯ ಒಡ್ಡುತ್ತಾ..

ಸಾವನ್ನು ಬೆನ್ನಿಗಟ್ಟುಕೊಂಡು ಬರುವೆವು ನಿಮ ಕೋವಿಯಲಿ ಗೂಡು ಕಟ್ಟುತ್ತಾ..
ಮತಮೌಢ್ಯದ ಹಾವನ್ನು ಹಿಡಿಯದೆ ಬಿಡೆವು ವಿಚಾರದ ಬುಟ್ಟಿ ಹೆಣೆಯುತ್ತಾ..

ನನ್ನ ಸುಟ್ಟರೂ ನನ್ನೊಳಗಿನ ಸತ್ಯ ಸುಡಲಾಗದು ಹೆದರದೆ ನಿಮ್ಮ ತುಕ್ಕು ಹಿಡಿದ ತುಪಾಕಿಗೆ ಉತ್ತರಿಸುತ್ತಾ..
ಸಾವಿನ ಜೊತೆ ಕ್ರಾಂತಿಯ ಸಂಗೀತ ಹಾಡುತ್ತಾ ಜನರ ಹಾಡು ಬರೆಯುತ್ತಾ..

ನಿಮ್ಮ ಹೊಗಳುವ ಹೂಹಾರ ತುರಾಯಿ ನಗ ನಾಣ್ಯಗಳ ಸಮಾಧಿ ಮಾಡುತ್ತಾ..
ಸತ್ಯವನೆ ಹೇಳುವೆನು ಸತ್ಯ ಮಾರ್ಗವ ಬಿಡೆನು ನಿಮ ಪರಿವಾರದ ಬಿಡಾರಕ್ಕೆ ಸತ್ಯವನು ಶಕ್ತಿಯಾಗಿಸುತ್ತಾ..

■ ರಮೇಶ ಗಬ್ಬೂರು

ರಕ್ತದ ಕಲೆಗಳು

1
ಕೊಲೆಗಡುಕರು ಕೊಂದು
ಕಾಲ್ಕಿತ್ತರು
ಉಳಿದುಕೊಂಡಿದೆ ದಿಗ್ಭ್ರಮೆ
ದಿಕ್ಕು ಕಾಣದೆ!

2
ವಿಚಾರವಂತರ ನೆತ್ತರಿಗೆ
ವಿಶೇಷ ರುಚಿಯಿದೆಯೇನೋ
ಇಲ್ಲವಾದಲ್ಲಿ-
ಕಲ್ಲ ದೇವರ ನಾಲಗೆಗಳಿಗೂ
ಇದರ ದಾಹವೇತಕ್ಕೆ?

3
ನಾಸ್ತಿಕರ ರಕ್ತ ಹೀರದೆ
ಬದುಕಲಾಗದಷ್ಟು ನಿತ್ರಾಣನೇ
ಈ ದೇವರು?!


4
ಜೀವವಿಲ್ಲದ ದೇವರು
ಉಸಿರಾಡುತ್ತಾನೆಂದು ನಂಬಿಸಲು
ಕೆಲವರಿಗೆ ಆಗಾಗ
ನಾಸ್ತಿಕರ ಪ್ರಾಣ ಬೇಕಾಗುತ್ತದೆ!

5
ಕೊಂದ ಕೊಲೆಗಡುಕರು
ಪರಾರಿಯಾಗಲೇಬೇಕಿತ್ತು.
ವಿಚಾರವಂತರ ಮಿದುಳನ್ನು ಹೊಕ್ಕ
ಬುಲೆಟ್ಟನ್ನು ನೋಡಲೂ
ಯೋಗ್ಯರಲ್ಲ ಅವರು!

6
ಎದೆಯಿಂದ ಚಿಮ್ಮಿದ ನೆತ್ತರು
ಗೋಡೆಯಮೇಲೆ ಚಿತ್ರಿಸಿದೆ-
ಕೊಲೆಗಡುಕರ
ಮನೋವಿಕಾರತೆಯನ್ನು!

■ ವಿಲ್ಸನ್ ಕಟೀಲ್

ಪಾನಸಾರೆ, ದಾಬೋಲ್ಕರ್‌ರನ್ನು ಹತ್ಯೆ ಮಾಡಿದ ಧರ್ಮಾಂಧ ಸಿದ್ಧಾಂತವೇ ಕಲಬುರ್ಗಿಯವರನ್ನು ಕೊಂದಿತೆ?



ಕನ್ನಡದ ಖ್ಯಾತ ಸಾಹಿತಿ, ವಿಮರ್ಶಕ ಡಾ. ಎಂ.ಎಂ. ಕಲಬುರ್ಗಿ ಅವರ ಹತ್ಯೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆಯೇ? ಪ್ರಗತಿಪರ ಚಿಂತಕರನ್ನು ಗುರಿಯಾಗಿಸಿಕೊಂಡು ಈ ಹತ್ಯೆ ನಡೆಸಲಾಗಿದೆ ಎಂಬ ಅನುಮಾನ ಈಗ ಎಲ್ಲರನ್ನೂ ಕಾಡುತ್ತಿದೆ.


ಈ ಹಿಂದೆ ಮಹಾರಾಷ್ಟ್ರದಲ್ಲಿ ಇಬ್ಬರು ವಿಚಾರವಾದಿ, ಪ್ರಗತಿಪರ ಚಿಂತಕರನ್ನು ಇದೇ ಮಾದರಿಯಲ್ಲಿ ಹತ್ಯೆ ಮಾಡಲಾಗಿತ್ತು, ಸನಾತನ ಧರ್ಮ ವಿರೋಧಿಗಳನ್ನು ಗುರಿಯಾಗಿಸಿಕೊಂಡು, ವೈಚಾರಿಕ ಹಾಗೂ ವೈಜ್ಞಾನಿಕ ಚಿಂತಕರನ್ನು ಟಾರ್ಗೆಟ್ ಮಾಡಿಕೊಂಡು ಈ ಕೃತ್ಯ ಎಸಗಲಾಗಿದೆ ಎಂಬ ಮಾತು ಈಗ ಸಾಹಿತ್ಯ ವಲಯದಲ್ಲಿ ಕೇಳಿಬರುತ್ತಿದೆ. ಎಂ.ಎಂ. ಕಲಬುರ್ಗಿಯವರು ದೇವರು, ಧರ್ಮದ ಹೆಸರಲ್ಲಿ ನಡೆಯುವ ಮೌಢ್ಯವನ್ನು ಟೀಕೆ ಮಾಡುತ್ತಿದ್ದರು. ನೇರವಾಗಿ ಆರೋಪ ಮಾಡುವುದಕ್ಕೆ ಯಾವಾಗಲೂ ಅಂಜುತ್ತಿರಲಿಲ್ಲ, ಹೀಗಾಗಿ ಕಲಬುರ್ಗಿ ಅವರನ್ನು ಟಾರ್ಗೆಟ್ ಮಾಡಿಕೊಂಡು ಹತ್ಯೆ ಮಾಡಲಾಗಿದೆ ಎಂಬ ಮಾತು ಕೇಳಿಬರುತ್ತಿದೆ.

ಮಾರ್ಚ್ 6, 2015ರಂದು ಗದಗಿನ ತೋಂಟದಾರ್ಯ ಮಠದಲ್ಲಿ ನಡೆದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಕಲಬುರ್ಗಿಯವರು "ಹಿಂದೂ ಎನ್ನುವುದು ಧರ್ಮವೇ ಅಲ್ಲ, ಅದಕ್ಕೊಂದು ಗ್ರಂಥವೂ ಇಲ್ಲ, ಕ್ರಿಶ್ಚಿಯನ್ ಧರ್ಮಕ್ಕೆ ಬೈಬಲ್, ಇಸ್ಲಾಂಗೆ ಕುರಾನ್ ಇವೆ. ಹಿಂದೂ ಧರ್ಮಕ್ಕೆ ಭಗವದ್ಗೀತೆ ಧರ್ಮಗ್ರಂಥ ಎಂದು ವೈದಿಕಶಾಹಿಗಳು ಹೇಳಿಕೊಳ್ಳುತ್ತಾರೆ. ಮಾಂಸ ಸೇವನೆ ವಿರೋಧಿಸುವ ವೈದಿಕಶಾಹಿ, ಮಾಂಸ ತಿನ್ನುವ ಕೆಳಜಾತಿಗಳನ್ನು ಹಿಂದೂ ಎಂದು ಹೇಗೆ ಒಪ್ಪಿಕೊಳ್ಳುತ್ತದೆ? ಶೋಷಣೆಯೇ ಪರಮನೀತಿಯಾಗಿರುವ ವೈದಿಕಶಾಹಿ ತನ್ನ ಸ್ವಾರ್ಥಕ್ಕಾಗಿ ಇಲ್ಲದ ಹಿಂದೂ ಧರ್ಮದ ಘೋಷಣೆ ಮಾಡುತ್ತಿದೆ. ಹಾಗೊಂದು ವೇಳೆ ಅದು ಧರ್ಮವೇ ಆಗಿದ್ದರೆ, ಸಾಮಾಜಿಕ ನ್ಯಾಯ ಎತ್ತಿ ಹಿಡಿಯುವ ವಚನಗಳನ್ನು ಅದು ಧರ್ಮಗ್ರಂಥ ಎಂದು ಸ್ವೀಕರಿಸಲಿ" ಎಂದು ನಿಷ್ಠುರ ಸತ್ಯವನ್ನು ಜನರ ಎದುರು ಇಟ್ಟಿದ್ದರು.

ಇದಾದ ಸ್ವಲ್ಪ ದಿನಗಳ ನಂತರ ಧಾರವಾಡದ ಅವರ ಮನೆ ಮೇಲೆ ಬಾಟಲುಗಳನ್ನು ಎಸೆಯಲಾಗಿತ್ತು, ಅವರ ಮನೆಗೆ ಪೊಲೀಸ್ ರಕ್ಷಣೆ ನೀಡಲಾಗಿತ್ತು, ನಂತರ ಕಲಬುರ್ಗಿಯವರೇ ರಕ್ಷಣೆ ಬೇಡವೆಂದಿದ್ದರು. ಇಂತಹ ಅವಕಾಶಕ್ಕಾಗಿ ಕಾದಿರಬಹುದಾದ ಧರ್ಮಾಂಧರು ಅವರ ಹತ್ಯೆ ಮಾಡಿರುವ ಸಾಧ್ಯತೆಗಳಿವೆ.

ಕೊಲ್ಹಾಪುರದ ಗೋವಿಂದರಾವ್ ಪಾನಸಾರೆ ಎಂಬುವವರನ್ನು ಆ.29, 2014 ರಂದು ಗುಂಡಿಕ್ಕಿ ಕೊಲೆ ಮಾಡಲಾಗಿತ್ತು, ಇವರನ್ನು ಹತ್ಯೆ ಮಾಡಿ ಸರಿಯಾಗಿ ಒಂದು ವರ್ಷದ ನಂತರ, ಅಂದರೆ ಆ.30, 2015 ರಂದು ಡಾ.ಎಂ.ಎಂ. ಕಲಬುರ್ಗಿಯವರನ್ನು ಹತ್ಯೆ ಮಾಡಲಾಗಿದೆ. ಅದೇ ರೀತಿ ಇನ್ನೊಬ್ಬ ವಿಚಾರವಾದಿ ಹಾಗೂ ಚಿಂತಕ ನರೇಂದ್ರ ದಾಬೋಲ್ಕರ್ ಅವರನ್ನು ಪುಣೆಯಲ್ಲಿ ಗುಂಡಿಕ್ಕಿ ಕೊಲೆ ಮಾಡಲಾಗಿತ್ತು, ಇದು ನಡೆದು ಎರಡು ವರ್ಷಗಳಾಗಿವೆ.

ಕೊಲೆಯಾದವರೆಲ್ಲ ಮೌಢ್ಯ, ಅಂಧಶ್ರದ್ಧೆ ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಗಳನ್ನು ವಿರೋಧಿಸುತ್ತ ಬಂದವರೇ ಆಗಿದ್ದಾರೆ. ಹೀಗಾಗಿ ಕಲಬುರ್ಗಿಯವರ ಕೊಲೆಗೂ, ಆ ಕೊಲೆಗಳಿಗೂ ಸಂಬಂಧವಿದೆಯಾ? ಇವೆಲ್ಲ ಹತ್ಯೆಗಳನ್ನು ನಡೆಸಿದ್ದು ಒಂದೇ ಸಂಘಟನೆಯಾ? ಅಥವಾ ಒಬ್ಬನೇ ವ್ಯಕ್ತಿಯಾ? ಅಥವಾ ಕೋಮುವಾದಿ ಸಿದ್ಧಾಂತದಿಂದ ಪ್ರಭಾವಿತರಾದ ಧರ್ಮಾಂಧರಾ? ಎಂಬ ಅನುಮಾನ ಕಾಡುತ್ತಿದೆ.



ನರೇಂದ್ರ ದಾಬೋಲ್ಕರ್ ಅವರು ಪುಣೆಯಲ್ಲಿ 'ಅಂಧಶ್ರದ್ಧಾ ವಿರೋಧಿ ಆಂದೋಲನ್' ಎಂಬ ಸಂಘಟನೆ ಹುಟ್ಟು ಹಾಕಿ, ಮಹಾರಾಷ್ಟ್ರದಾದ್ಯಂತ ಮೌಢ್ಯಗಳ ವಿರುದ್ಧ ಜಾಗೃತಿ ಮೂಡಿಸುತ್ತ ಬಂದಿದ್ದರು. ಸ್ವಯಂಘೋಷಿತ ದೇವಮಾನವರು ಜನರ ಭಾವನೆಗಳನ್ನು ದುರುಪಯೋಗ ಮಾಡಿಕೊಂಡು, ತಮ್ಮ ಬೇಳೆ ಬೇಯಿಸಿಕೊಳ್ಳುವ ದಂಧೆಯನ್ನು ಟೀಕಿಸಿ, ಅದರ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದ್ದರು. ಜ್ಯೋತಿಷಿಗಳು ಮುಗ್ಧ ಜನರನ್ನು ಭಯಗೊಳಿಸಿ ಸುಲಿಗೆ ಮಾಡುವುದನ್ನು ದಾಬೋಲ್ಕರ್ ತಮ್ಮ ಆಂದೋಲನದ ಮೂಲಕ ಖಂಡಿಸುತ್ತ ಬಂದಿದ್ದರು. ಜ್ಯೋತಿಷ್ಯ, ಮಾಟಮಂತ್ರಗಳೆಲ್ಲ ಅವೈಜ್ಞಾನಿಕ ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುತ್ತಿದ್ದರು.

ಇದನ್ನು ತಿರುಚಿದ ಕೆಲವು ಕೋಮುವಾದಿ ಸಂಘಟನೆಗಳು, ದಾಬೋಲ್ಕರ್ ಹಿಂದೂ ಧರ್ಮದ ಆಚರಣೆಗಳನ್ನು ಅವಹೇಳನ ಮಾಡುತ್ತಿದ್ದಾರೆಂದು ಪ್ರಚಾರ ಮಾಡಿ, ಆಕ್ರೋಶ ವ್ಯಕ್ತಪಡಿಸಿದ್ದವು. ಹಲವಾರು ಸಲ ಈ ಸಂಘಟನೆಗಳು ದಾಬೋಲ್ಕರ್ ಅವರ ಕಾರ್ಯಕ್ರಮಗಳ ಮೇಲೆ ದಾಳಿ ನಡೆಸಿದ್ದವು. ಅವರಿಗೆ ಕೊಲೆ ಬೆದರಿಕೆ ಹಾಕಿದ್ದವು.

ಪುಣೆಯ 'ಹಿಂದೂ ಜಾಗೃತಿ ಸಮಿತಿ' ಎಂಬ ಸಂಘಟನೆ ತನ್ನ ವೆಬ್‌ಸೈಟಿನಲ್ಲಿ ದಾಬೋಲ್ಕರ್ ಅವರನ್ನು ಹೀಯಾಳಿಸಿ, ಅವರನ್ನು ಕೊಲೆಗೈಯುವ ಬೆದರಿಕೆ ಹಾಕಿತ್ತು, ದಾಬೋಲ್ಕರ್ ಕೊಲೆಯ ನಂತರ ಆ ಸಂಘಟನೆಯೇ ಭೂಗತವಾಯಿತು. ಈ ಹತ್ಯೆಯ ಕುರಿತು ಈಗ ಸಿಬಿಐ ತನಿಖೆ ನಡೆಯುತ್ತಿದೆ.

ಕೊಲ್ಹಾಪುರದ ಸಿಪಿಐ ನಾಯಕ ಗೋವಿಂದರಾವ್ ಪಾಲಸಾರೆಯವರು ಶ್ರಮಿಕರ ಪರ ಹೋರಾಡಿದವರು. ಅಂತರಜಾತಿ ಮದುವೆಗಳನ್ನು ಬೆಂಬಲಿಸುವ ಸಲುವಾಗಿಯೇ ಒಂದು ಸಂಘಟನೆಯನ್ನು ಕಟ್ಟಿದ್ದರು. ನಕಲಿ ದೇವಮಾನವರು, ಮೌಢ್ಯಗಳಿಂದ ಲಾಭ ಮಾಡಿಕೊಳ್ಳುವವರ ವಿರುದ್ಧ ಕಿಡಿಕಾರುತ್ತ ಬಂದಿದ್ದರು. ಗಾಂಧಿ ಹಂತಕ ನಥುರಾಮ್ ಗೋಡ್ಸೆಯನ್ನು ವೈಭವೀಕರಿಸುವುದನ್ನು ಅವರು ತೀವ್ರವಾಗಿ ಖಂಡಿಸುತ್ತಿದ್ದರು. ಅವರಿಗೂ ಹಿಂದುತ್ವವಾದಿ ಸಂಘಟನೆಗಳಿಂದ ಬೆದರಿಕೆಗಳು ಬಂದಿದ್ದವು. ವಾಕಿಂಗ್‌ಗೆ ಹೋದ ಸಂದರ್ಭದಲ್ಲಿ ಅವರು ಮತ್ತು ಅವರ ಪತ್ನಿಯನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು.

ನಿಮಗೆ ನೆನಪಿರಬಹುದು, ಅಜ್ಮೀರ್, ಹೈದರಾಬಾದ್, ಸಂಜೋತಾ ಎಕ್ಸ್‌ಪ್ರೆಸ್ ಬಾಂಬ್ ಸ್ಫೋಟ ಆರೋಪಿಗಳಾದ ಸಾಧ್ವಿ ಪ್ರಜ್ಞಾ ಸಿಂಗ್, ಕರ್ನಲ್ ಮಹೇಂದ್ರ ಮುಂತಾದವರೆಲ್ಲ ಮೂಲತಃ ಸಂಘ ಪರಿವಾರ ಸಿದ್ಧಾಂತಗಳಿಂದ ಪ್ರಭಾವಿತರಾದವರು. ಇವರೆಲ್ಲ ಪುಣೆಯ ಅಭಿನವ್ ಭಾರತಿ ಎಂಬ ಧರ್ಮಾಂಧ ಸಂಘಟನೆ ಸೇರಿದವರು. ಈ ಸಂಘಟನೆಯನ್ನು ಗೋಡ್ಸೆಯ ಸಂಬಂಧಿಕರಾಗಿರುವ ಪುಣೆಯ ಕೆಲವು ಚಿತ್ಪಾವನ ಬ್ರಾಹ್ಮಣರು ಹುಟ್ಟು ಹಾಕಿದ್ದರು ಎಂದು ಹೇಳಲಾಗಿತ್ತು.


ಈ ಎಲ್ಲವನ್ನೂ ಗಮನಿಸಿದರೆ, ಇಂಥದ್ದೇ ಧರ್ಮಾಂಧ ಸಂಘಟನೆಯೊಂದು ಕಲಬುರ್ಗಿಯವರ ಹತ್ಯೆಯ ಸಂಚು ರೂಪಿಸಿರಬಹುದು ಎಂಬ ಅನುಮಾನ ದಟ್ಟವಾಗುತ್ತಿದೆ.

ಪೊಲೀಸರು ಪುಣೆಯ ಕಡೆಗೂ ಒಂದಿಷ್ಟು ಚಿತ್ತ ಹರಿಸಿದರೆ ಕೆಲವು ಕ್ಲೂಗಳು ಸಿಗಬಹುದೇನೋ?

■ ಪಿ.ಕೆ. ಮಲ್ಲನಗೌಡರ

ಕಲಬುರ್ಗಿ ಹತ್ಯೆಯ ಹಿಂದೆ ಕೋಮುವಾದಿಗಳು

ತೋಂಟದ ಶ್ರೀ ಸಂಶಯ



ಖ್ಯಾತ ಸಾಹಿತಿ, ಚಿಂತಕ, ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಂ.ಎಂ. ಕಲಬುರ್ಗಿ ಅವರ ಕೊಲೆಯ ಕುರಿತು ಸರ್ಕಾರ ಸಮಗ್ರ ತನಿಖೆ ಕೈಗೊಂಡು ಇದರ ಹಿಂದಿರುವ ದುಷ್ಟತನ, ಷಡ್ಯಂತ್ರ, ಕುತಂತ್ರವನ್ನು ಹೊರಹಾಕಬೇಕು. ಈ ಹಿಂದೆಯೂ ಅವರು ಕೋಮುವಾದಿಗಳಿಂದ, ದುಷ್ಟಶಕ್ತಿಗಳಿಂದ ಸಾಕಷ್ಟು ತೊಂದರೆಯನ್ನು ಅನುಭವಿಸಿದ್ದರು. ಹಾಗಾಗಿ ಅವರ ಸಾವಿಗೆ ದುಷ್ಟಶಕ್ತಿಗಳೇ ಕಾರಣವಾಗಿರಬಹುದು ಎಂದು ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ಸಂಶಯ ವ್ಯಕ್ತ ಪಡಿಸಿದ್ದಾರೆ.

ಕಲಬುರ್ಗಿ ಅವರ ಸಾವು ಬಸವ ಪರಂಪರೆಗೆ, ಪ್ರಗತಿ ಹಾಗೂ ಅಭಿವೃದ್ಧಿ ಬಯಸುವ ಮನಸ್ಸುಗಳಿಗೆ ಆಘಾತ ತಂದಿದೆ. ಪ್ರತಿಯೊಬ್ಬರಲ್ಲಿ ವೈಚಾರಿಕ ಭಿನ್ನಾಭಿಪ್ರಾಯಗಳು ಸಹಜ. ಅದಕ್ಕಾಗಿ ಕೊಲೆ ಮಾಡುವಂತಹ ಕೆಟ್ಟ ಮಾರ್ಗಕ್ಕಿಳಿಯುವುದು ಸರಿಯಲ್ಲ ಎಂದು ಶ್ರೀಗಳು ಹೇಳಿದ್ದಾರೆ.

ಈ ನೆಲದ ಇತಿಹಾಸದಲ್ಲಿ ಸಮಾಜಕ್ಕಾಗಿ, ಜನರಿಗೆ ಕೆಲಸ ಮಾಡಿದವರ ಅಂತ್ಯ ಬಹಳಷ್ಟು ಕೆಟ್ಟದಾಗಿರು[illegible] ಉದಾಹರಣೆಗಳಿವೆ. ಗಾಂಧೀಜಿ, ಅಬ್ರಹಾಂ ಲಿಂಕನ್‌ರಂತಹವರ ಅಂತ್ಯ ಕೂಡ ದಾರುಣವಾಗಿತ್ತು, ಈ ಸಾಲಿ[illegible] ಕಲಬುರ್ಗಿ ಅವರ ಸಾವು ಕೂಡ ಸೇರ್ಪಡೆಯಾಗಿದೆ. ಮೂಢನಂಬಿಕೆ, ಮೂಲಭೂತವಾದ, ಮೌಢ್ಯತೆಗಳ ವಿರೋಧಿಯಾಗಿ[illegible] ಕಲಬುರ್ಗಿ ಅವರು, ಕನ್ನಡದ ಖ್ಯಾತ ಸಂಶೋಧಕರಾಗಿದ್ದರು. ಸರ್ಕಾರದ ಸಮಗ್ರ ವಚನಸಂಪುಟದ ಸಂಪಾದಕರ[illegible] ಕಾರ್ಯನಿರ್ವಹಿಸಿದ್ದರು. ಅಂತಹ ಒಬ್ಬ ಮಹಾನ್ ಚಿಂತಕ ಹಾಗೂ ವಚನ ಸಾಹಿತ್ಯದ ದೊಡ್ಡ ಶಕ್ತಿಯಾಗಿ[illegible] ಕಲಬುರ್ಗಿ ಅವರ ದುರಂತ ಸಾವಿನಿಂದಾಗಿ ಬಸವ ಪರಂಪರೆಯ ಯುಗ ಅಂತ್ಯವಾದಂತಾಗಿದೆ.

ಡಾ.ಎಂ.ಎಂ.ಕಲಬುರ್ಗಿ ಅವರು ನನ್ನ ವಿದ್ಯಾಗುರುಗಳು. ಸ್ನಾತಕೋತ್ತರ ಪದವಿಯನ್ನು ನಾನು ಅವರ ಕೈಯಲ್ಲಿ[illegible] ಕಲಿತಿದ್ದು, ಒಬ್ಬ ಉಪನ್ಯಾಸಕರಾಗಿ ಅವರು ನನ್ನ ಮೇಲೆ ಅಪಾರ ಪರಿಣಾಮ ಬೀರಿದ್ದರು. ಹೇಳಬೇಕಾದುದ್ದ[illegible] ನೇರವಾಗಿಯೇ ಹೇಳುವ ಎದೆಗಾರಿಕೆ ಅವರಲ್ಲಿತ್ತು, ಅವರ ಸಾವು ನನ್ನಲ್ಲಿ ಆಘಾತ ತಂದಿದೆ.

ಸಮಾನತೆ, ವರ್ಣ, ವರ್ಗ, ಲಿಂಗ ಸಮಾನತೆಯಲ್ಲಿ ಅವರಿಗೆ ಬದ್ಧತೆಯ ಜೊತೆಗೆ ದಿಟ್ಟತನವೂ ಇತ್ತು, ಶ್ರೀಮ[illegible] ಲಿಂಗಾಯತ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಸಂಸ್ಥೆಯ ಸಂವಿಧಾನವನ್ನು ನಿರ್ಮಿಸಿದವರು ಕಲಬುರ್ಗಿಯವ[illegible] ವಿದ್ವತ್ ಪರಂಪರೆಯ ಒಬ್ಬ ದಿಟ್ಟ ಬರಹಗಾರರಾದ ಕಲಬುರ್ಗಿ ಅವರ ಸಾವಿನ ಕುರಿತಾಗಿ ನಾಡು ಒಕ್ಕಟ್ಟಾ[illegible] ಪ್ರತಿಭಟಿಸಬೇಕು ಎಂದರು.

ದೇಶ-ಧರ್ಮದ ಭಕ್ತನೇ ಹೇಳು..

ದೇಶ-ಧರ್ಮದ ಭಕ್ತನೇ ಹೇಳು,
ಕಣ್ಣೆತ್ತಿ ಒಮ್ಮೆ ಕಣ್ಣಲ್ಲಿ ಕಣ್ಣಿಟ್ಟು ನೋಡು,
ನನಗೂ ಕೇಳುವಂತೆ ಒಮ್ಮೆ ಉತ್ತರಿಸು,
ಇದು ಯಾರ ನೆತ್ತರು, ಇಲ್ಲಿ ಯಾರು ಸತ್ತರು?


ನೆಲದೆದೆಯ ಮೇಲೆ ಉರಿಯುತ್ತಿರುವ
ಕೆಂಡದುಂಡೆಗಳು ಕೇಳುತ್ತಿವೆ
ನಮ್ಮವರಾಗದೆ ಹೋದ ಮಂದಿಯ
ಮೈಯಿಂದ ಹರಿಯುವ ರಕ್ತವು ಕೇಳುತ್ತಿದೆ
ಬೀದಿ-ಹಾದಿಯೂ ಚೀರಾಡುತ್ತಿವೆ
ಸಾಗರ-ದಡವೂ ಪ್ರಶ್ನಿಸುತ್ತಿದೆ
ಇದು ಯಾರ ನೆತ್ತರು, ಇಲ್ಲಿ ಯಾರು ಸತ್ತರು?

ವಿನಾಶಕ್ಕೆ ಕರೆಯ ನೀಡುವವರೇ
ಪ್ರೀತಿಯ ಸಂದೇಶ ರವಾನಿಸುವವರೇ
ಸುಡುಮಳ್ಳಿಗೆ ಯಾಕೆ ಬೆಚ್ಚಿರುವಿರಿ
ಬೆಂಕಿಗೆ ಆಹುತಿ ಸುರಿಯುವವರೇ


ಬಿರುಗಾಳಿಗೆ ಯಾಕೆ ಹೆದರಿರುವಿರಿ
ಅಲೆಗಳ ಅಬ್ಬರ ಹೆಚ್ಚಿಸುವವರೇ
ನಿಮ್ಮ ಧ್ಯೇಯವಾಕ್ಯವ ಮರೆತಿರೇನು?
ಇದು ಯಾರ ನೆತ್ತರು, ಇಲ್ಲಿ ಯಾರು ಸತ್ತರು?

ದೇಶ-ಧರ್ಮದ ಭಕ್ತನೇ ಹೇಳು..
ಎದೆ ಮೇಲೆ ಕೈಯಿಟ್ಟು ಪ್ರತಿಜ್ಞೆ ಮಾಡಿಹೆವು
ಎಲ್ಲಾ ಬಗೆಯ ಕ್ರೌರ್ಯವ ಎದುರಿಸುವೆವು
ನೀ ರಾಜಿಯ ಕನಸು ಕಾಣುತ್ತಿರು
ನಾವು ನಿಲ್ಲದೆ ಹೀಗೆ ಮುನ್ನುಗ್ಗುವೆವು
ಈ ಹಾದಿಯ ಈ ಗುರಿಯ ಮೇಲಾಣೆ
ಗುರಿ ತಲುಪವ ತನಕ ಪ್ರಶ್ನೆಯ ಕೇಳುವೆವು
ಇದು ಯಾರ ನೆತ್ತರು, ಇಲ್ಲಿ ಯಾರು ಸತ್ತರು?

■ ಉರ್ದು ಮೂಲ: ಸಾಹಿರ್ ಲುಧಿಯಾನ್ವಿ
ಕನ್ನಡಕ್ಕೆ: ಸಂವರ್ತ 'ಸಾಹಿಲ್'



ಅಪ್ರತಿಮ ವಿದ್ಯಾಗುರು ಕಲಬುರ್ಗಿ



ಆಗಸ್ಟ್ 30 ಕರ್ನಾಟಕದ ಸಾಂಸ್ಕೃತಿಕ ಬದುಕಿನ ಬಾಳಿಗೆ ಕರಾಳ ದಿನ. ದೊಡ್ಡಮರವೊಂದನ್ನು ಕೊಡೆದುಳಿಸಿದಂತೆ ಹಿರಿಯ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿಯವರ ಹತ್ಯೆ ನಡೆದುಹೋಯಿತು. ಸಂವೇದನಾಶೀಲ ಮನಸ್ಸುಗಳು ಹಿಂದೆಂದೂ ಕಂಡರಿಯದ ದಿಗ್ಭ್ರಮೆ, ತಲ್ಲಣ, ಆತಂಕಗಳಿಂದ ತತ್ತರಿಸಿಹೋಗಿವೆ. ಲೇಖಕರನ್ನು, ವಿಚಾರವಾದಿಗಳನ್ನು, ಕಲಾವಿದರನ್ನು ಬಲಿ ಹಾಕುವ, ಬಂದೂಕಿನ ಮೂಲಕ ಸದೆಬಡಿಯುವ ಪರಂಪರೆ ಅಧಿಕೃತವಾಗಿ ಕರ್ನಾಟಕದಲ್ಲಿ ಆರಂಭವಾಗಿಬಿಟ್ಟಿತೇ ಎಂಬ ಆತಂಕ ಎಲ್ಲೆಡೆ ಆವರಿಸಿದೆ. ಸಾಂಸ್ಕೃತಿಕ ಬದುಕಿನ ಆತ್ಮಸ್ಥೈರ್ಯವೇ ಕುಸಿದುಹೋದಂತಿದೆ. ತೀಕ್ಷ್ಣವಾದ ಪ್ರತಿರೋಧ ಪ್ರಕಟವಾಗುತ್ತಿದೆ. ಭಿನ್ನಾಭಿಪ್ರಾಯಗಳನ್ನು ಸಹಿಸದ ಜನಪರವಾದ ಹೊಸ ಶೋಧಗಳನ್ನು ಒಪ್ಪಿಕೊಳ್ಳದ ಮೂಲಭೂತವಾದಿ ಸರ್ವಾಧಿಕಾರಿ ಸಮಾಜವಾಗಿ ನಾಡು ಬದಲಾಗುತ್ತಿರುವ ಸಾಧ್ಯತೆ ಬಲವಾಗುತ್ತಿದೆ. "ಭಾರತದಂಥ ಜಾತಿನಿಷ್ಠ ಭಾವನಿಷ್ಠ ಸಮಾಜದಲ್ಲಿ ಸಂಶೋಧಕ ಮೇಲಿಂದ ಮೇಲೆ ಸಣ್ಣಸಣ್ಣ ಶಿಲುಬೆಗಳನ್ನೇರಬೇಕಾಗುತ್ತದೆ" ಎಂಬ ಆತಂಕವನ್ನು ವ್ಯಕ್ತಪಡಿಸುತ್ತಲೇ ತಮ್ಮ ಶೋಧಗಳನ್ನು ದಿಟ್ಟತನದಿಂದ ಪ್ರಕಟಪಡಿಸುತ್ತ ಬಂದ ಡಾ. ಎಂ.ಎಂ. ಕಲ್ಬುರ್ಗಿಯವರನ್ನು ದೊಡ್ಡ ಶಿಲುಬೆಗೆ ಏರಿಸಲಾಗಿದೆ. ಸಾಂಸ್ಕೃತಿಕ ಲೋಕವೇ ಶಿಲುಬೆಗೇರಿದ ಹತಾಶೆಯಲ್ಲಿದೆ. ಜೀವಮಾನದುದ್ದಕ್ಕೂ ಸ್ವಜಾತಿಯ ಮೂಲಭೂತವಾದಿಗಳು ಹಾಗೂ ಹಿಂದೂ ಕೋಮುವಾದಿಗಳ ಬೆದರಿಕೆಯ ನಡುವೆಯೇ ತಮ್ಮ 'ಮಾರ್ಗ'ವನ್ನು ಬಿಡದ ಹಠವಾದಿ ಸಂಶೋಧಕನ ಹತ್ಯೆಯೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಒದಗಿದ ಮಹಾ ಆಪತ್ತು ಮತ್ತು ಕರಾಳ ಭವಿಷ್ಯದ ಮುನ್ಸೂಚನೆಯಾಗಿದೆ. "ಭಾರತದಂಥ ಜಾತೀವಾದಿ ರಾಷ್ಟ್ರದಲ್ಲಿ ಜಾತಿಮತಗಳ ವಿಷಯದಲ್ಲಿ ಮಾಡಿದ ಸಂಶೋಧನೆ ಅನೇಕ ಪ್ರತಿಭಟನೆಗಳಿಗೆ ಗುರಿಯಾಗುತ್ತದೆ. ವ್ಯಕ್ತಿ ವಿರೋಧ ಸಾಮಾಜಿಕ ವಿರೋಧ, ಧಾರ್ಮಿಕ ವಿರೋಧ, ರಾಜಕೀಯ ವಿರೋಧಗಳನ್ನು ಸಂಶೋಧಕ ಎದುರಿಸಬೇಕಾಗಿ ಬರುವುದರಿಂದ ಅವನು ಒಂದು ಬಗೆಯ ಸಂರಕ್ಷಣಾತ್ಮಕ ನಿಲುವಿನಲ್ಲಿಯೇ ಮುಂದುವರೆಸುವ ಪರಿಸ್ಥಿತಿ ಇದೆ" ಎಂಬ ಕಲ್ಬುರ್ಗಿಯವರ ಎಚ್ಚರ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೂ ಲೇಖಕ ಅನುಭವಿಸುತ್ತಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಮಿತಿ ಹಾಗೂ ತಳಮಳಗಳನ್ನು ಸೂಚಿಸುತ್ತದೆ. ಹೀಗಾಗಿ ಅವರ ಚಿಂತನೆಗಳು ತಾತ್ವಿಕ ತಳಹದಿಯ ಮೇಲಿದ್ದವೇ ಹೊರತು ವ್ಯಕ್ತಿವಾದಿ ಆಕ್ರಮಣಕಾರಿ ನೆಲೆಯನ್ನು ಪಡೆದಿರಲಿಲ್ಲ. ಸಂರಕ್ಷಣಾತ್ಮಕ ಚೌಕಟ್ಟಿನಲ್ಲಿಯೇ ಬರವಣಿಗೆ ಮಾಡಿದರೂ ಇನ್ನು ಬದುಕುವುದು ಅಸಾಧ್ಯವೆಂಬ ಸಂದೇಶವನ್ನು ಅವರ ಹತ್ಯೆ ನೀಡಿದೆ. ಇದಕ್ಕೆ ಬಹುದೊಡ್ಡ ಪರ್ಯಾಯವನ್ನು ಶೋಧಿಸಿಕೊಳ್ಳಬೇಕಾದ ಜರೂರನ್ನು ಸಾಂಸ್ಕೃತಿಕ ಲೋಕದ ಮುಂದೆ ತೆರೆದಿಟ್ಟಿದೆ. ಲೇಖಕರನ್ನು ಬೆದರಿಸುವ, ಹಲ್ಲೆಗೀಡುಮಾಡುವ, ಬೆದರಿಸುವ ಕೃತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಂತದಲ್ಲಿದ್ದ ಮೂಲಭೂತವಾದಿ ಸರ್ವಾಧಿಕಾರಿ ನಡೆ ಈಗ ಹತ್ಯೆಯ ತಾರ್ಕಿಕ ಅಂತ್ಯವನ್ನು ಮುಟ್ಟಿಬಿಟ್ಟಿತೇ? ಪ್ರಸ್ತುತ ಒಂದು ಬಗೆಯ ದಿಕ್ಕೇದಿತನ ಮನೆ ಮಾಡಿದೆ. ಹೋರಾಟದ ಹೊಸದಿಕ್ಕನ್ನು ಹುಡುಕಿಕೊಳ್ಳಬೇಕಾದ ಚಾರಿತ್ರಿಕ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಗಟಾರದಲ್ಲಿ ಸಿಕ್ಕ ಲಿಂಗಣ್ಣ ಸತ್ಯಂಪೇಟೆಯವರ ಶವ ನೆನಪಾಗುತ್ತಿದೆ. ಇನ್ನೂ ಅದಕ್ಕೆ, ಅದರ ಕಾರಣಗಳನ್ನು ಹುಡುಕಲು ಸಾಧ್ಯವಾಗಿಲ್ಲ. ಸತ್ಯಂಪೇಟೆಯವರ ಹತ್ಯೆ ಬರುವ ದಿನಗಳ ಮುನ್ಸೂಚನೆಯಾದರೆ ಕಲ್ಬುರ್ಗಿಯವರ ಹತ್ಯೆ ಅದನ್ನು ಖಚಿತಪಡಿಸಿದೆ. ಮಹಾರಾಷ್ಟ್ರದಲ್ಲಿ ನರೇಂದ್ರ ದಾಭೋಲ್ಕರ್ ಹಾಗೂ ಗೋವಿಂದ ಪನ್ಸಾರೆಯವರ ಹತ್ಯೆಯ ಕಾರಣಗಳನ್ನು ಬೇಧಿಸಲಾಗಿಲ್ಲ. ಜಾತಿವಾದ, ಕೋಮುವಾದ, ಮೂಲಭೂತವಾದಗಳ ಮರ್ಜಿಯಲ್ಲಿ ಅಧಿಕಾರ ಚಲಾಯಿಸುತ್ತಿರುವ ಪ್ರಭುತ್ವಗಳಿಂದ ಇದನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಡಾ. ಎಂ.ಎಂ. ಕಲ್ಬುರ್ಗಿಯವರ ಹತ್ಯೆಗೆ ಕೂಡ ಇದೇ ಗತಿ ಬಂದರೆ ಆಶ್ಚರ್ಯಪಡಬೇಕಿಲ್ಲ.

ಡಾ. ಎಂ.ಎಂ. ಕಲಬುರ್ಗಿಯವರ ಹತ್ಯೆ ಕೆಲವು ಕಾರಣಗಳಿಗೆ ಗಾಂಧೀಜಿಯವರ ಹತ್ಯೆಯನ್ನು ನೆನಪಿಸುತ್ತಿದೆ. ಗಾಂಧೀಜಿಯವರ ಕಗ್ಗೊಲೆಯಿಂದ ದೇಶ ತತ್ತರಿಸಿಹೋದಾಗ ಕೆಲವರು ಸಿಹಿ ಹಂಚಿ ಸಂಭ್ರಮಿಸಿದ್ದರಂತೆ. ಬೇಂದ್ರೆಯವರು ಒಂದು ಕವಿತೆಯಲ್ಲಿ ಇದನ್ನು ದಾಖಲಿಸಿದ್ದಾರೆ. ಆದರೆ ಆ ಸಂಭ್ರಮ ಕದ್ದುಮುಚ್ಚಿ ನಡೆದಿತ್ತಂತೆ. ಆದರೆ ಡಾ. ಎಂ.ಎಂ. ಕಲಬುರ್ಗಿಯವರ ಹತ್ಯೆಯನ್ನು ಕೆಲವರು ಮುಕ್ತವಾಗಿಯೇ ಸಂಭ್ರಮಿಸಿದ ವರದಿಗಳು ದಾಖಲಾಗಿವೆ. ಸಾಮಾಜಿಕ ಜಾಲ ತಾಣಗಳಲ್ಲಂತೂ ಹತ್ಯೆಯಾಗಬೇಕಾದವರ ಮುಂದಿನ ಪಟ್ಟಿ ಬಿಡುಗಡೆಯಾಗುತ್ತಿದೆ. ಸಾರ್ವಜನಿಕವಾಗಿಯೇ ಹತ್ಯೆಯನ್ನು ಸಂಭ್ರಮಿಸುವ, ಸಮರ್ಥಿಸುವ ಮಟ್ಟಿಗಿನ ಈ ಬದಲಾವಣೆ ಅಪಾಯಕಾರಿಯಾದದ್ದು. ಗಾಜಿನ ಪೆಟ್ಟಿಗೆಯಲ್ಲಿ ಬಿಳಿಬಟ್ಟೆಯನ್ನು ಸುತ್ತಿ ಎರಡೂಕಾಲು ಮಡಚಿಕೊಂಡು ಹಣೆ ಮತ್ತು ಎದೆ ಮೇಲೆ ರಕ್ತದ ಕಲೆಗಳನ್ನು ಅಂಟಿಸಿಕೊಂಡು ಅಂಗಾತ ಮಲಗಿದ್ದ ಡಾ. ಎಂ.ಎಂ. ಕಲಬುರ್ಗಿಯವರ ಪಾರ್ಥಿವ ಶರೀರ ಹತ್ಯೆಗೀಡಾದ ಗಾಂಧೀಜಿಯವರ ಶವವನ್ನು ನೆನಪಿಸುವಂತಿತ್ತು. ಡಾ. ಎಂ.ಎಂ. ಕಲಬುರ್ಗಿಯವರ ಹತ್ಯೆಯನ್ನು ಕರ್ನಾಟಕ ಮಾತ್ರವಲ್ಲ ರಾಷ್ಟ್ರವ್ಯಾಪಿಯಾಗಿ ಜಗತ್ತಿನಾದ್ಯಂತ ಚಿಂತನಶೀಲರು ಪ್ರತಿಭಟಿಸಿದ ವರದಿಗಳು ಪ್ರಕಟವಾಗುತ್ತಿದ್ದರೆ ಧಾರವಾಡದ ಜನಸಾಮಾನ್ಯರ ಪ್ರತಿಕ್ರಿಯೆಗಳು ವಿಚಿತ್ರವಾಗಿದ್ದವು. ನನ್ನ ಪರಿಚಿತರೊಬ್ಬರಿಗೆ ಕಲ್ಬುರ್ಗಿಯವರ ಕುಟುಂಬದೊಂದಿಗೆ ಆತ್ಮೀಯ ಒಡನಾಟವಿತ್ತು. ಈ ಹತ್ಯೆಯ ಬಗ್ಗೆ ಪ್ರಸ್ತಾಪಿಸಿದಾಗ ಅವರ ಮೇಲೆ ಬಹಳ ದಿನಗಳಿಂದ ಕಣ್ಣಿಡಲಾಗಿತ್ತೆಂದು ಹೇಳಿ ನಿರುಮ್ಮಳವಾಗಿ ತಮ್ಮ ಕೆಲಸಕ್ಕೆ ಹೋದರು. ಗುಡಿಯೊಂದರ ಪೂಜಾರಿಯೊಬ್ಬ ಮಕ್ಕಳೊಂದಿಗೆ ಮಾತನಾಡುತ್ತ "ಯಾರೋ ಒಬ್ಬ ಸತ್ತರೆ ಶಾಲೆಗೇಕೆ ರಜೆ ಕೊಡಬೇಕು. ನೀವೆಲ್ಲ ಶಾಲೆ ಬಿಟ್ಟು ಬಂದುಬಿಟ್ಟಿರಾ" ಎನ್ನುತ್ತಿದ್ದ. ಹಿರಿಯರೊಬ್ಬರು ರೈಲಿನಲ್ಲಿ ತಾವು ಕಂಡ ಯುವಕಯುವತಿಯರ ಸಂಭಾಷಣೆಯನ್ನು ಪ್ರಸ್ತಾಪಿಸಿದರು. ಇಪ್ಪತ್ತರ ತರುಣನೊಬ್ಬ ಅದೇ ವಯಸ್ಸಿನ ಹುಡುಗಿಗೆ "ಹಿಂದೂ ವಿರೋಧಿಯಾಗಿದ್ದನಂತೆ. ಕೊಲೆ ಮಾಡಿದರಂತೆ" ಎಂದು ಯಾವ ಸಂವೇದನೆಯೂ ಇಲ್ಲದೇ ಹೇಳುತ್ತಿದ್ದನಂತೆ. ಹಿಂಸೆಯನ್ನು ಸಹಜವೆಂದು ಪರಿಭಾವಿಸುವ ಸಾಮುದಾಯಿಕ ಪ್ರಜ್ಞೆ ಬೆಳೆಯುತ್ತಿದೆಯೇ? ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸುವ ಮತೀಯ ಶಕ್ತಿಗಳ ಸಂಭ್ರಮಕ್ಕಿಂತಲೂ ಹಿಂಸೆಗೆ ಒಪ್ಪಿಗೆಯನ್ನು ನೀಡುತ್ತಿರುವ ಈ ಸಾರ್ವಜನಿಕ ಪ್ರಜ್ಞೆ ಅಪಾಯಕಾರಿಯಾದದ್ದು.


ಡಾ. ಎಂ.ಎಂ. ಕಲಬುರ್ಗಿಯವರು ನನ್ನ ವಿದ್ಯಾಗುರುಗಳು.. ನನ್ನ ಶೈಕ್ಷಣಿಕ ಬದುಕಿನಲ್ಲಿ ಕಂಡ ಶ್ರೇಷ್ಠ ಪ್ರಾಧ್ಯಾಪಕ. ಅವರ ಶಿಷ್ಯಲೋಕದ ಬಹುತೇಕರ ಅಂತರಂಗದ ಮಾತಿದು. ಅವರ ಪಾಠ ಕೇಳಿದ ಮೊದಲ ಅವಧಿಯ ರೋಮಾಂಚನ ಇನ್ನೂ ಹಾಗೇ ನೆನಪಿದೆ. "ಕರ್ನಾಟಕ ವಿಶ್ವವಿದ್ಯಾಲಯಕ್ಕ ಕುಡೀ ಬಂದ್ರೈತಿ. ಅಪ್ಪ ಯಾಕ ಕರ್ನಾಟಕದ ಸಾಂಸ್ಕೃತಿಕ ಬದುಕಿಗೇ ಮಕ್ಕ ಬಂದಂಗಾಗೇತಿ. ಹೊಸಾರಕ್ತ ನಿಮ್ದು. ನೀವೆಲ್ಲಾ ಕುಡೀ ಹೊಡದು ದೀಪಾ ಬೆಳಗಬೇಕು." ಅವರ ಈ ಮೊದಲ ಮಾತುಗಳಿಂದ ವಿದ್ಯುತ್ ಸಂಚಾರ. ಮುಂದಿನ ಒಂದು ತಾಸು ಧುಮ್ಮಿಕ್ಕಿದ ಜಲಪಾತ. ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಮುಂದಿರುವ ದಾರಿಗಳನ್ನು ತೆರೆದು ತೋರಿಸುತ್ತಿದ್ದರು "ಬೆಂಕೀಯಂಗ ಸುಟಗೊಂಡ್ರ ಮಾತ್ರ ಬೆಳಕ ಕಾಣತೀರಿ", "ಕಾಲವನ್ನ ನೀವ ಕೊಂದ್ರ ಕಾಲ ನಿಮ್ಮನ್ನ ಕೊಲ್ಲತೈತಿ" ಆಕರ್ಷಕ ನುಡಿಗಟ್ಟುಗಳ ಭಾಷೆ. ಕಂಚಿನ ಕಂಠ, ತುಂಬಿತುಳುಕುವ ವಿದ್ವತ್ತು, ಅಂತಃಕರಣ ತುಂಬಿದ ದನಿ, ನಿಂತಲ್ಲೇ ಹತ್ತು ಕಡೆ ಹರಿದಾಡುತ್ತ ಪಾಠ ಮಾಡುತ್ತಿದ್ದರೆ ನಾವೆಲ್ಲ ಮೈಮರೆತುಹೋಗಿದ್ದೆವು. ಅಂದಿನಿಂದ ವಾರದಲ್ಲಿ ಒಂದೇ ಒಂದು ಅವಧಿಯ ಅವರ ಪಾಠಕ್ಕೆ ಕಾಯುತ್ತಿದ್ದೆವು. ಅವರು ನಮಗೆ ಸಂಶೋಧನೆ, ಹಸ್ತಪ್ರತಿಶಾಸ್ತ್ರ ಶಾಸನ ಸಾಹಿತ್ಯ ಮೊದಲಾದ ಶಾಸ್ತ್ರಪತ್ರಗಳ ಪಾಠ ಮಾಡುತ್ತಿದ್ದರು. ನಿರಂತರವಾಗಿ ಕ್ಷೇತ್ರಕಾರ್ಯದಲ್ಲಿ ತೊಡಗಿದ್ದ ಅವರು ತಮ್ಮ ಅನುಭವಗಳ ಮೂಲಕವೇ ಸಂಶೋಧನೆ, ಹಸ್ತಪ್ರತಿಶಾಸ್ತ್ರಗಳನ್ನು ನಿರ್ವಚಿಸಿಕೊಳ್ಳುತ್ತಿದ್ದರು. ವರ್ಗಕೋಣೆಗಳನ್ನು ಜ್ಞಾನವನ್ನು ಸೃಷ್ಟಿಸುವ ತಾಣಗಳನ್ನಾಗಿ ರೂಪಿಸುತ್ತಿದ್ದರು. ಹೀಗಾಗಿ ಅವರ ಪಾಠಗಳೆಂದರೆ ವಿಚಿತ್ರ ಆಕರ್ಷಣೆ ಇರುತ್ತಿತ್ತು. ಎಂ.ಎ. ಕಲಿಯಲು ಬರುವ ವಿದ್ಯಾರ್ಥಿಗಳಿಗೆ ಒಂದು ವಿಚಿತ್ರ ಭಯ ಇರುತ್ತಿತ್ತು. ಯಾರನ್ನೂ ಪ್ರಶ್ನಿಸದೇ ಮೌನವಾಗಿ ಪಾಠ ಕೇಳಿ ವಿನಯವಂತಿಕೆ ಮೆರೆದರೆ ಹೆಚ್ಚು ಅಂಕಗಳನ್ನು ಪಡೆಯಬಹುದೆಂಬ ಸಂದೇಶ ರವಾನೆಯಾಗುತ್ತಿತ್ತು. ಅದೊಂದು ಬಗೆಯ ಭಯದ ವಾತಾವರಣ. ಆ ಭಯವನ್ನು ತೊಡೆದು ಹಾಕಿ ಪ್ರಶ್ನೆ ಮಾಡಲು ಕಲಿಸಿದ ಗುರು ಡಾ. ಎಂ.ಎಂ. ಕಲಬುರ್ಗಿಯವರು. ಹೀಗಾಗಿ ನನ್ನಂಥವರು ವರ್ಗಕೋಣೆಯಲ್ಲಿ ಮಾತ್ರವಲ್ಲ, ಜೀವನದುದ್ದಕ್ಕೂ ಅವರಿಗೆ ಪ್ರಶ್ನೆ ಕೇಳುತ್ತಲೇ ಹೋದೆವು. ಅವರದು ಗತವನ್ನು ಕಟ್ಟಲು ಯತ್ನಿಸುವ ಓರಿಯಂಟಲ್ ಮಾದರಿಯ ಸಂಶೋಧನಾ ವಿಧಾನ. ಆ ವಿಧಾನದ ಬಗ್ಗೆಯೇ ನನ್ನಂಥವರಿಗೆ ಭಿನ್ನಾಭಿಪ್ರಾಯಗಳಿದ್ದುದರಿಂದ ಅದೇ ತಾನೇ ನಾನು ಡಾ. ಸಿದ್ಧನಗೌಡ ಪಾಟೀಲರ ಸಂಪರ್ಕದಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿದ್ದರಿಂದ ಎಷ್ಟೋ ಬಾರಿ ವರ್ಗಕೋಣೆ 'ವರ್ಗ ಸಂಘರ್ಷ'ದ ತಾಣಗಳಾಗುತ್ತಿದ್ದವು. ಗುರುಗಳು ಅಷ್ಟೇ ಉತ್ಸಾಹದಿಂದ ಉತ್ತರಿಸುತ್ತ ನನ್ನ ಆಲೋಚನಾಕ್ರಮದ ಸಮಸ್ಯೆಗಳನ್ನು ವಿವರಿಸುತ್ತಿದ್ದರು. ಹೀಗಾಗಿ ನನ್ನಂಥವರಿಗಿಂತ ಅವರ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದ ಶಿಷ್ಯರ ಬಗ್ಗೆ ಅವರಿಗೆ ಹೆಚ್ಚು ಅಕ್ಕರೆ ಇತ್ತು. ಇತ್ತೀಚೆಗೆ ಡಾ. ಎಂ.ಎಂ. ಕಲಬುರ್ಗಿಯವರು 'ಸಾಹಿತ್ಯ ಸಂಭ್ರಮ'ದಂಥ ಸಂಸ್ಥೆಯೊಂದಿಗೆ ಗುರುತಿಸಿಕೊಂಡಾಗ ಸಾಹಿತ್ಯ ಸಾಂಸ್ಕೃತಿಕ ಕಾರ್ಪೋರಿಯಟೀಕರಣದ ವಿರುದ್ಧ ಧಾರವಾಡದ ಗೆಳೆಯರು ತಾತ್ವಿಕ ಸಂಘರ್ಷಕ್ಕಿಳಿದೆವು. ಜನಸಾಹಿತ್ಯ ಸಂಘಟನೆ ರೂಪಿಸಿ ಜನಪರವಾದ ಕಾರ್ಯಕ್ರಮಗಳನ್ನು ರೂಪಿಸಿದೆವು. ಆರಂಭದಲ್ಲಿ ಇದನ್ನೊಂದು ಧಾರವಾಡದ ಸಾಹಿತ್ಯವಲಯದ ವೈಯಕ್ತಿಕ ಜಗಳವೆಂದು ತಪ್ಪಾಗಿ ಪರಿಭಾವಿಸಿದ್ದ ಡಾ. ಕಲ್ಬುರ್ಗಿಯವರು ನಮ್ಮ ಕಾರ್ಯಕ್ರಗಳ ಸ್ವರೂಪವನ್ನು ಗಮನಿಸಿದರು. ತಾತ್ವಿಕ ಸಂಘರ್ಷವೆಂಬುದನ್ನು ಮನವರಿಕೆ ಮಾಡಿಕೊಂಡರು. ಅವರು ನಮ್ಮೊಂದಿಗೆ ಹೆಚ್ಚು ವೈಯಕ್ತಿಕ ಸಂಬಂಧವನ್ನು ಏರ್ಪಡಿಸಿಕೊಂಡಿದ್ದು ಕಳೆದ ಎರಡು ವರ್ಷಗಳ ಅವಧಿಯಲ್ಲಿ. ತಾತ್ವಿಕವಾಗಿ ಭಿನ್ನಾಭಿಪ್ರಾಯಗಳಿರುವಾಗಲೂ ವೈಯಕ್ತಿಕ ಸಂಬಂಧವನ್ನು ಮುತುವರ್ಜಿಯಿಂದ ಕಾಪಾಡಿಕೊಂಡು ಹೋದ ಅವರ ಹಿರಿಮೆಯನ್ನು ಗೌರವದಿಂದ ನೆನೆಯುತ್ತೇನೆ.

"ಕರ್ನಾಟಕದ ಅಧ್ಯಯನಕ್ಕೆ ಸಂಬಂಧಪಟ್ಟ ಸಮಗ್ರ ಆಕರಗಳನ್ನು ಶೋಧಿಸಿ ಅವುಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸುವುದು ಇಂದಿನ ತೀರಾ ಅಗತ್ಯಗಳಲ್ಲಿ ಒಂದಾಗಿದೆ." ಇದು ಕಲಬುರ್ಗಿಯವರ ನಿಲುವು. ಅವರೆಲ್ಲ ಸಂಶೋಧನಾ ಚಟುವಟಿಕೆಗಳ ಮೂಲಭಿತ್ತಿ, ಕರ್ನಲ್ ಮೆಕೆಂಜಿ, ಜಾನ್‌ಎಫ್ ರೆಡೆಲ್, ಬಿ.ಎಲ್. ರೈಸ್‌ರಿಂದ ಆರಂಭವಾಗಿ ಡಿ.ಎಲ್. ನರಸಿಂಹಾಚಾರ್, ಚಿದಾನಂದಮೂರ್ತಿಗಳವರೆಗೆ ಬೆಳೆದುಬಂದ ಪರಂಪರೆಯ ಕೊನೆಯ ದೊಡ್ಡ ವಿದ್ವಾಂಸರೆಂದರೆ ಡಾ. ಎಂ.ಎಂ. ಕಲಬುರ್ಗಿಯವರು. ಶಾಸನಗಳು, ಹಳಗನ್ನಡ ಕಾವ್ಯ ಮತ್ತು ವಚನಸಾಹಿತ್ಯದ ಸಂಪಾದನೆಗಳ ಮೂಲಕ ಕರ್ನಾಟಕದ ಅಧ್ಯಯನಕ್ಕೆ ಸಂಬಂಧಿಸಿದ ಮಹತ್ವದ ಆಕರಗಳನ್ನು ಸೃಷ್ಟಿಸಿದ್ದಾರೆ. ಇತ್ತೀಚೆಗೆ ಆದಿಲ್‌ಶಾಹಿ ಸಾಹಿತ್ಯದ ಕನ್ನಡಾನುವಾದದ ಮಹತ್ವದ ಯೋಜನೆಯನ್ನು ಆರಂಭಿಸಿದ್ದರು. ಸಮಗ್ರ ವಚನಸಂಪುಟಗಳನ್ನು ಜಗತ್ತಿನ 30 ಭಾಷೆಗಳಿಗೆ ಅನುವಾದಿಸುವ ಮಹತ್ವಾಕಾಂಕ್ಷೆ ಯೋಜನೆಯನ್ನು ಕೈಗೆತ್ತಿಕೊಂಡು 20 ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದ ಕಾರ್ಯ ಪೂರ್ಣಗೊಂಡಿತ್ತು. ಸಾಂಸ್ಕೃತಿಕ ಕರ್ನಾಟಕವನ್ನು ವಿಭಿನ್ನ ನೆಲೆಗಳಿಂದ ನಿರ್ವಚಿಸಿಕೊಳ್ಳಲು ಅವರು ಸೃಷ್ಟಿಸಿದ ಆಕರಗಳಿಗೆ ಚಾರಿತ್ರಿಕ ಮಹತ್ವವಿದೆ. ಪ್ರಾಚೀನ ಕರ್ನಾಟಕದ ಈ ಮೇಲಿನ ಆಕರಗಳನ್ನು ಪ್ರವೇಶಿಸುವ ಕೀಲಿಕೈಗಳನ್ನು ಕೊಟ್ಟಿದ್ದು ಕಲಬುರ್ಗಿಯವರ ಮತ್ತೊಂದು ಸಾಧನೆ. ಗ್ರಂಥ ಸಂಪಾದನಾ ಶಾಸ್ತ್ರ ಹಸ್ತ ಪ್ರತಿಶಾಸ್ತ್ರ ಕನ್ನಡ ನಾಮ ವಿಜ್ಞಾನ, ಸಂಶೋಧನಾ ಶಾಸ್ತ್ರ ಶಾಸನ ವ್ಯಾಸಂಗದ ಸಂಪುಟಗಳು, ಪ್ರಾಚೀನ ಆಕರಗಳ ಅಧ್ಯಯನಕ್ಕೆ ತೊಡಗುವ ವಿದ್ಯಾರ್ಥಿಗಳಿಗೆ ಕೈಪಿಡಿಗಳಾಗಿವೆ. ಹಳಗನ್ನಡ, ನಡುಗನ್ನಡ ಕೃತಿಗಳ ಅಧ್ಯಯನಕ್ಕೆ ಪೂರಕವಾಗುವ ಚಾರಿತ್ರಿಕ-ಸಂದರ್ಭವನ್ನು ಪುನರ್‌ರಚಿಸುವ ಪ್ರಯತ್ನವನ್ನು ಅವರ ಸಾಹಿತ್ಯಶೋಧದ ಲೇಖನಗಳಲ್ಲಿ ಕಾಣಬಹುದಾಗಿದೆ.


ಡಾ. ಎಂ.ಎಂ. ಕಲಬುರ್ಗಿಯವರು ವೀರಶೈವ ಮಠಗಳ ಜತೆ ಆಪ್ತ ಒಡನಾಟವನ್ನಿಟ್ಟುಕೊಂಡವರು. ತಮ್ಮ ತೆಕ್ಕೆಗೆ ದಕ್ಕಿದ ಮಠಗಳನ್ನು ವಚನ ಚಳವಳಿಯ ಅಧ್ಯಯನದ ಕೇಂದ್ರಗಳನ್ನಾಗಿ ಪರಿವರ್ತಿಸಿದರು. ಗದುಗಿನ ತೋಂಟದಾರ್ಯ ಮಠದಲ್ಲಿ 'ವೀರಶೈವ ಅಧ್ಯಯನ ಸಂಸ್ಥೆ', ಬೆಳಗಾವಿಯ ನಾಗನೂರ ಮಠದಲ್ಲಿ 'ವೀರಶೈವ ಅಧ್ಯಯನ ಅಕೆಡೆಮಿ', ಶಿವಮೊಗ್ಗೆಯ ಆನಂದಪುರ ಮಠದಲ್ಲಿ 'ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ', ನಿಡಸೋಸಿ ಮಠದಲ್ಲಿ 'ಶರಣಸಂಸ್ಕೃತಿ ಅಕಾಡೆಮಿ', ಕೊಡೇಕಲ್ಲಿನಲ್ಲಿ 'ಬಸವೇಶ್ವರ ಅಧ್ಯಯನ ಸಂಸ್ಥೆ', ಮೈಸೂರಿನ ಸುತ್ತೂರು ಮಠದಲ್ಲಿ ಸಮಗ್ರ ಸ್ವರಚನ ಸಾಹಿತ್ಯ ಪ್ರಕಟಣಾ ಮಾಲೆಗಳು ಅಸ್ತಿತ್ವಕ್ಕೆ ಬರಲು ಕಾರಣರಾದರು. ಮೂಲತಃ ಕಲ್ಬುರ್ಗಿಯವರು ಮಠ ಸಂಸ ತಿಯ ವಿರೋಧಿಯಾಗಿರಲಿಲ್ಲ. ಅವರದು ಉದಾರವಾದಿ ಸುಧಾರಣಾವಾದಿ ನಿಲುವಾಗಿತ್ತು. ಅವರ ಪೌರ್ವಾತ್ಯವಾದಿ ಸಂಶೋಧನಾ ವಿಧಾನಕ್ಕೆ ಪೂರಕವಾದ ಕೆಲಸವೂ ಇದಾಗಿತ್ತು. ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ, ಬೇಂದ್ರೆ ರಾಷ್ಟ್ರೀಯ ಟ್ರಸ್ಟ್ ಹಾಗೂ ಬಸವರಾಜ ಕಟ್ಟೀಮನಿ ಟ್ರಸ್ಟಿನ ಅಧ್ಯಕ್ಷರಾಗಿ ಅವರು ನಿರ್ವಹಿಸಿದ ಸಂಘಟನಾತ್ಮಕ ಕ್ರಿಯಾಶೀಲತೆ ಅವರ ಬಗೆಗಿನ ಗೌರವವನ್ನು ಹೆಚ್ಚಿಸುತ್ತದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಮೇಲೆ ಕಲಬುರ್ಗಿಯವರಿಗೆ ತಮ್ಮ ಸಂಶೋಧನೆಯ ಮಿತಿಗಳ ಬಗ್ಗೆ ಅರಿವು ಬಂದಂತಿತ್ತು. ತಮ್ಮ ಸಾಂಪ್ರದಾಯಿಕ ನಿಲುವಿನ ಬಗ್ಗೆ ಎಚ್ಚರ ಮೂಡಿದಂತಿತ್ತು. ಹೀಗಾಗಿ ಅವರು ಪ್ರಗತಿಪರ ನಿಲುವಿನ ತರಬೇತಿ ಪಡೆದವರಂತೆ ಮಾತಾಡತೊಡಗಿದರು. ದಿಟ್ಟತನದಿಂದ ಪುರೋಹಿತಶಾಹಿ ಹುನ್ನಾರಗಳನ್ನು ಬಯಲಿಗೆಳೆಯತೊಡಗಿದರು. ಪೌರ್ವಾತ್ಯವಾದಿ ಸಂಶೋಧನೆ ತಾತ್ವಿಕ ಮಿತಿಯ ಒಳಗೂ ಅವರೊಳಗಿನ ಸಂಶೋಧಕ ಜಡಗೊಂಡ ವೀರಶೈವ ಧರ್ಮದ ಅನುಯಾಯಿಗಳಿಗೆ ಅಪ್ರಿಯವಾಗುವಂಥ ಕೆಲಸಗಳನ್ನು ಮಾಡಿ ಕಿರಿಕಿರಿಯನ್ನುಂಟುಮಾಡಿದ್ದ. 'ವೀರಶೈವ' ಬೇರೆ 'ಲಿಂಗಾಯತ ಬೇರೆ', ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಲ್ಲ. ಸ್ವತಂತ್ರ ಧರ್ಮ. ಹಿಂದೂ ಧರ್ಮ ಧರ್ಮವೇ ಅಲ್ಲ. ಜೀವನ ವಿಧಾನ ಎಂಬ ಚಿಂತನೆಗಳನ್ನು ಅವರು ಇತ್ತೀಚೆಗೆ ಚರ್ಚೆಗೊಳಪಡಿಸಿದ್ದರು. ಆ ಕುರಿತು ಅಧ್ಯಯನ ಮುಂದುವರಿಸಿದ್ದರು. ಇತ್ತೀಚೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕ್ರಮವೊಂದರಲ್ಲಿ 'ಕಲ್ಬುರ್ಗಿ ಏನೆಂಬುದು ಸತ್ತ ಮೇಲೆ ಗೊತ್ತಾಗುತ್ತದೆ' ಎಂದು ಭಾವುಕವಾಗಿ ನುಡಿದಿದ್ದರಂತೆ. ಡಾ. ಎಂ.ಎಂ. ಕಲ್ಬುರ್ಗಿಯವರ ಅಪ್ರಕಟಿತ ಬರಹಗಳ ಮೂಲಕ ಅವರ ಚಿಂತನೆಗಳನ್ನು ಅರಿಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

■ ಎಂ.ಡಿ. ಒಕ್ಕುಂದ



ಆರ್. ಅಶೋಕ್



ಬಿಬಿಎಂಪಿ

ಅಶೋಕ್ ಗತ್ತು ಬಿಜೆಪಿಗೆ ಕುತ್ತು


ಅತಿ ಆಸೆಯೇನೋ ಗತಿಗೇಡು ನಿಜ. ಆದರೆ ಅತಿ ಬುದ್ಧಿಯೂ ಕೆಲವೊಮ್ಮೆ ಗತಿಗೇಡಿಗೆ ಕಾರಣವಾಗುತ್ತದೆ ಎಂಬ ಕಹಿಸತ್ಯ ಬಹುಶಃ ಅಶೋಕ್‌ಗೆ ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು. ಬಿಬಿಎಂಪಿಯ ಒಟ್ಟು 198 ಸ್ಥಾನಗಳ ಪೈಕಿ ಬಿಜೆಪಿಯೊಂದೇ ನೂರು ಗೆದ್ದ ಮೇಲೆ ಜೆಡಿಎಸ್ ಹಂಗೇಕೆ ಇನ್ನು ಪಕ್ಷೇತರರನ್ನು ಮಾತಾಡಿಸಿ ಏನು ಪ್ರಯೋಜನವೆಂದೇ ಘಟೋದ್ಗಜನಂತೆ ಹೂಂಕರಿಸಿದ ಅಶೋಕ್ ನೆತ್ತಿಗೇರಿದ ಪಿತ್ಥ ಇಳಿಯುವ ಹೊತ್ತಿಗೆ ಎಲ್ಲವೂ ಮುಗಿದು ಹೋಗಿತ್ತು!

ಅದು ಒಂದಲ್ಲ ಎರಡಲ್ಲ ಒಟ್ಟು ನಾಲ್ವರು ಪಕ್ಷೇತರ ಕೌನ್ಸಿಲರ್‌ಗಳು. ದೊಮ್ಮಲೂರಿನ ಲಕ್ಷ್ಮೀನಾರಾಯಣ, ಕೋನೇನ ಅಗ್ರಹಾರದ ಚಂದ್ರಪ್ಪರೆಡ್ಡಿ, ಮಾರತಹಳ್ಳಿಯ ಎನ್. ರಮೇಶ್ ಮತ್ತು ಹೊಯ್ಸಳ ನಗರದ ಆನಂದ್.


ಈ ಪೈಕಿ ಆನಂದ್ ಮೂಲತಃ ಕಾಂಗ್ರೆಸ್ ಕಾರ್ಯಕರ್ತನೆಂಬುದನ್ನು ಬಿಟ್ಟರೆ, ಮಿಕ್ಕಂತೆ ಮೂವರೂ ಬಿಜೆಪಿ ಕಾರ್ಯಕರ್ತರಾಗಿದ್ದವರೆ. ಬಿಜೆಪಿಯ ಅಧಿಕೃತ ಅಭ್ಯರ್ಥಿಗಳ ವಿರುದ್ಧವೇ ಬಂಡೆದ್ದು ಗೆದ್ದವರು. ಗೆಲುವಿನ ನಂತರವಾದರೂ ನಾಯಕರು ಪಾಠ ಕಲಿಯಬಹುದೆಂದೇ ಲೆಕ್ಕ ಹಾಕಿದ ಮೂವರೂ ಕೌನ್ಸಿಲರ್‌ಗಳು ತಮ್ಮೊಂದಿಗೆ ಮತ್ತೊಬ್ಬನನ್ನು ಜೊತೆ ಮಾಡಿಕೊಂಡು ಬಿಜೆಪಿ ಕಚೇರಿಗೆ ಬಂದದ್ದು ಆಗಸ್ಟ್ 26ರ ಬೆಳಗ್ಗೆ. ಅಂದರೆ ಬಿಬಿಎಂಪಿ ಫಲಿತಾಂಶ ಹೊರಬಿದ್ದ ಮಾರನೇ ದಿನ.

ಬಂಡೆದ್ದ ನಾಲ್ವರು!

ಮಲ್ಲೇಶ್ವರದ ಬಿಜೆಪಿ ಕಚೇರಿಯಲ್ಲಂದು ಸಡಗರವೋ ಸಡಗರ. ರಾಷ್ಟ್ರನಾಯಕ ಅನಂತ್‌ಕುಮಾರ್, ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ್ ಜೋಷಿ, ವಿಜಯನಗರದ ಸೋಮಣ್ಣ ಮಾಜಿ ಮಂತ್ರಿ ಸುರೇಶ್ ಕುಮಾರ್ ಆದಿಯಾಗಿ ನಾಯಕರೆಲ್ಲರ ಮುಂದೆ ಅಶೋಕ್ ಮೆರೆದಿದ್ದೇ ಮೆರೆದದ್ದು. ಪಾಲಿಕೆ



ಪಿ.ಸಿ. ಮೋಹನ್



ಸಮರದ ಸೇನಾನಿ ಅಶೋಕ್‌ರನ್ನು ಕಂಡು ಗೆದ್ದ ಮೇಲಾದರೂ ತಮ್ಮನ್ನು ಮತ್ತೆ ಬಿಜೆಪಿಗೆ ಸೇರಿಸಿಕೊಳ್ಳಿ ಎಂದು ದೀನವದನರಾಗಿ ಬಂದಿದ್ದ ನಾಲ್ವರೂ ಪಕ್ಷೇತರರು ಕಾದಿದ್ದೇ ಬಂತು. ಮಧ್ಯಾಹ್ನವಾದರೂ ಅಶೋಕ್ ತಿರುಗಿ ನೋಡಲಿಲ್ಲ. ಹೇಗೂ ಬಿಜೆಪಿ ನೂರನ್ನು ಗೆದ್ದಾಗಿತ್ತಲ್ಲ. ಕಾಂಗ್ರೆಸ್ ಏನೇ ಹೆಣಗಾಡಿದರೂ 76ರ ಮೇಲೇರಲಿಲ್ಲ. ಜೆಡಿಎಸ್ ಹದಿನಾಲ್ಕಕ್ಕೆ ಸುಸ್ತು ಹೊಡೆದಿತ್ತು. ಎಂಟು ಮಂದಿ ಪಕ್ಷೇತರರದ್ದು ಯಾವ ಲೆಕ್ಕ ಎಂದೇ ಅಶೋಕ್ ಉಡಾಫೆಗೆ ಬಿದ್ದು ಬಂದಿದ್ದ ನಾಲ್ವರನ್ನೂ ಸಂಜೆತನಕ ಕಾಯಿಸಿಬಿಟ್ಟರು.

ತಾವಾಗಿಯೇ ಮೇಲೆ ಬಿದ್ದು ಬೆಂಬಲ ಕೊಡುತ್ತೇವೆಂದು ಬಂದರೂ ಕ್ಯಾರೇ ಎನ್ನದ ಅಶೋಕ್ ಅಹಂಕಾರಕ್ಕೆ ಬಂದ ನಾಲ್ವರೂ ರೊಚ್ಚಿಗೇಳಲು ಅಷ್ಟೇ ಸಾಕಿತ್ತು. ಸಂಜೆತನಕ ತಮ್ಮನ್ನು ಕೊಳೆ ಹಾಕಿ ಕಾಟಾಚಾರಕ್ಕೂ ಮಾತಾಡಿಸದ ಅಶೋಕ್ ದರ್ಪಕ್ಕೆ ತಕ್ಕ ಶಾಸ್ತಿ ಮಾಡುವ ನಿರ್ಧಾರಕ್ಕೆ ಬಂದೇ ಚಂದ್ರಪ್ಪ ರೆಡ್ಡಿ ಫೋನೆತ್ತಿದ್ದು ಭೈರತಿ ಬಸವರಾಜ್‌ಗೆ. ನಾವು ನಾಲ್ವರಿದ್ದೇವೆ. ಸಗಾಯಪುರದ ಏಳುಮಲೆಯನ್ನೂ ಸೇರಿಸಿಕೊಂಡರೆ ನಾವು ಐದು ಮಂದಿ ಆಗ್ತೀವಿ. ಹಲಸೂರಿನ ಮಮತಾ ಹೇಳಿಕೇಳಿ ಕಾಂಗ್ರೆಸ್‌ನ ಮಾಜಿ ಕೌನ್ಸಿಲರ್ ಸರವಣನ ಪತ್ನಿ. ಅಲ್ಲಿಗೆ ಎಂಟು ಮಂದಿಯ ಪೈಕಿ ನಾವೇ ಆರು ಮಂದಿ ಆದಂತಾಯ್ತು. ಕೆಂಪಾಪುರ ಅಗ್ರಹಾರದ ಗಾಯಿತ್ರಿ ಬಿಜೆಪಿಗೆ ಹೋದರೂ ಏನೂ ಮಾಡಲು ಸಾಧ್ಯವಿಲ್ಲ, ಏಕೆಂದರೆ ಸಿದ್ದಾಪುರ ವಾರ್ಡಿನಿಂದ ಎಸ್‌ಡಿಪಿಐ ಅಭ್ಯರ್ಥಿಯಾಗಿ ಗೆದ್ದ ಮುಜಾಹಿದ್ ಪಾಷಾ ಯಾವುದೇ ಕಾರಣಕ್ಕೂ ಬಿಜೆಪಿ ಜೊತೆ ಕೈಜೋಡಿಸುವುದಿಲ್ಲ, ಮಿಕ್ಕಂತೆ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಶಾಸಕರು, ಎಮ್ಮೆಲ್ಸಿಗಳು ಒಟ್ಟಾದರೆಂದರೆ ಬಿಜೆಪಿ ಹೇಗೆ ತಾನೇ ಪಾಲಿಕೆಯನ್ನು ಹಿಡಿಯಲು ಸಾಧ್ಯ?

ಚಂದ್ರಪ್ಪ ರೆಡ್ಡಿ ಕೊಟ್ಟ ಐಡಿಯಾ ಭೈರತಿ ತಲೆ ಹೊಕ್ಕಿದ್ದೇ ತಡ ಜೆಡಿಎಸ್ ನಾಯಕ ಜಮೀರ್ ಅಹ್ಮದ್ ಮೊಬೈಲಿಗೆ ಭೈರತಿಯ ಕರೆ ಬಂದಿದೆ. ಅಲ್ಲಿಗೆ ಬಿಜೆಪಿಯ ವಿಜಯೋತ್ಸವವನ್ನೇ ಅಣಕಿಸುವ ಒಂದೊಂದೇ ಘಟನಾವಳಿಗಳು ಹೊರಜಗತ್ತಿನ ಗಮನಕ್ಕೇ ಬಾರದೆ ಸಂಭವಿಸತೊಡಗಿವೆ. ಜಮೀರ್ ಅಹ್ಮದ್ ಕಾಮಾಕ್ಷಿಪಾಳ್ಯದ ಗೋಪಾಲಯ್ಯನನ್ನು ಸಂಪರ್ಕಿಸಿ ಅವರ ಸುಪರ್ದಿಯ ನಾಲ್ವರೂ ಜೆಡಿಎಸ್ ಕೌನ್ಸಿಲರ್‌ಗಳನ್ನು ಕರೆಸಿಕೊಳ್ಳುವಂತೆ ಸೂಚಿಸಿದ್ದಾರೆ. ಪುಲಿಕೇಶಿನಗರದ ಜೆಡಿಎಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ, ಗೋಪಾಲಯ್ಯ ಮತ್ತು ಚಾಮರಾಜಪೇಟೆಯ ಜಮೀರ್ ಸೇರಿಕೊಂಡು ಚಲುವರಾಯ ಸ್ವಾಮಿ ಜೊತೆ ಮುಖ್ಯಮಂತ್ರಿ ನಿವಾ[ಸಕ್ಕೆ] ಬರುವ ಹೊತ್ತಿಗಾಗಲೇ ಭೈರತಿ ಬಸವರಾಜ್ ಮತ್ತು ಮುನಿರತ್ನ ಸಿಎಂ ಮನೆ ಸೇರಿಕೊಂಡಾಗಿತ್ತು. ಅಲ್ಲಿಗೆ ಹೊಸಕೋಟೆ ಶಾಸಕ ಎಂಟಿಬಿ ನಾಗರಾಜ್ ಕೂಡ ಬಂದಾಗಿತ್ತು.

ಸಿಎಂ ಮನೆಯಲ್ಲಿ!


ಎಲ್ಲರೂ ಸಿಎಂ ಜೊತೆ ಕೂತು ಅರ್ಧಗಂಟೆ ಚರ್ಚಿಸಿದ್ದಾರೆ. ಅದೇನು ಲೆಕ್ಕ ಹಾಕಿದರೋ ಗೊತ್ತಿಲ್ಲ ತಕ್ಷಣವೇ ಸಿದ್ದರಾಮಯ್ಯ ರಾಮಲಿಂಗಾರೆಡ್ಡಿ ಜೊತೆ ಬರೋಬ್ಬರಿ ಐದು ನಿಮಿಷಗಳ ಕಾಲ ಮಾತಾಡಿದ್ದಾ[ರೆ] ಇತ್ತ ಬಿಜೆಪಿ ಕಚೇರಿಯೆದುರು ವಿಜಯೋತ್ಸವದ ಕೇ[ಕೆ] ಮುಗಿಲು ಮುಟ್ಟಿದ್ದರೆ ಮುನಿರತ್ನ, ಭೈರತಿ ಬಸವರಾಜ್ ಸೇರಿಕೊಂಡು ಒಬ್ಬೊಬ್ಬರೇ ಪಕ್ಷೇತರರ[ನ್ನು] ಹಿಡಿದು ಹಾಕಿಕೊಳ್ಳುತ್ತಲೇ ಇದ್ದರು. ಬೆಂಗಳೂರು ಉಸ್ತುವಾರಿ ಮಂತ್ರಿ ರಾಮಲಿಂಗಾರೆಡ್ಡಿ ತಲೆಯಲ್ಲಿ ಬೇರೆಯದೇ ಲೆಕ್ಕಾಚಾರವೊಂದು ಕೆಲಸ ಮಾಡುತ್ತಿತ್ತು.

ಬಿಬಿಎಂಪಿಯೆಂದರೆ ಕೇವಲ ಪಾಲಿಕೆಗೆ ಗೆದ್ದು ಬಂದ ಕೌನ್ಸಿಲರ್‌ಗಳು ಮಾತ್ರ ಎಂದು ಬಿಜೆಪಿ ಲೆಕ್ಕ ಹಾಕುತ್ತಿದ್ದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರ ಜಂಟಿ ಪಡೆಯೊಂದು ಬೇರೆಯದೇ ಕಾರ್ಯತಂತ್ರವೊಂದನ್ನು ರೂಪಿಸುತ್ತಿತ್ತು. ಆ ಪ್ರಕಾರ ಪಾಲಿಕೆಯ 198 ಮಂದಿ ಕೌನ್ಸಿಲರ್‌ಗಳಲ್ಲದೆ ಬೆಂಗಳೂರಿನ 28 ಮಂದಿ ಶಾಸಕರು ಮತ್ತು ಐವರ[ು] ಸಂಸದರಿಗೂ ಮೇಯರ್ ಆಯ್ಕೆಯಲ್ಲಿ ಮತದ ಅಧಿಕಾರವಿದೆ. ಇದಲ್ಲದೆ ರಾಜ್ಯಸಭೆಗೆ ಬೆಂಗಳೂರಿನ ಎಂಟು ಮಂದಿ ಆಯ್ಕೆಯಾಗಿದ್ದು ಇವರಷ್ಟೇ ಅಲ್ಲದ[ೆ] 21 ಮಂದಿ ವಿಧಾನ ಪರಿಷತ್ ಸದಸ್ಯರೂ ಬಿಬಿಎಂಪಿಯ ಶಾಸನಬದ್ಧ ಪ್ರತಿನಿಧಿಗಳೆ.

ಈ ಪೈಕಿ ಬಿಜೆಪಿಯ 12 ಮಂದಿ ಶಾಸಕರು, ಒಂಬತ್ತು ಎಮ್ಮೆಲ್ಸಿಗಳು, ಮೂವರು ಲೋಕಸಭಾ ಸದಸ್ಯರು, ಒಬ್ಬ ರಾಜ್ಯಸಭಾ ಸದಸ್ಯ ಸೇರಿಕೊಂಡರೆ ಅದು ಒಟ್ಟು 125 ಮತಗಳಷ್ಟಾಗುತ್ತದೆ. ಆದರೆ ಅಧಿಕಾರ ಹಿಡಿಯಲು ಬೇಕಿರುವುದು ಕನಿಷ್ಠ 131 ಮತಗಳು. ಏಕೆಂದರೆ ಬಿಬಿಎಂಪಿಯ ಮೇಯರ್ ಆಯ್ಕೆಯ ಒಟ್ಟು ಮತಗಳ ಸಂಖ್ಯೆಯೇ 260.

ಬೆಂಗಳೂರಿನ 28 ಮಂದಿ ಶಾಸಕರು ಸೇರಿದಂ[ತೆ] ಸಂಸದರು, ರಾಜ್ಯಸಭೆ ಸದಸ್ಯರು, ಎಮ್ಮೆಲ್ಸಿಗಳು ಎಲ್ಲ[ರನ್ನೂ] ಸೇರಿಬಿಟ್ಟರೆ ಒಟ್ಟು ಮತಗಳ ಸಂಖ್ಯೆ 260 ಆಗುತ್ತ[ದೆ]. ಜೆಡಿಎಸ್‌ನ 14 ಮಂದಿ ಕೌನ್ಸಿಲರ್‌ಗಳು, ಮೂವರು ಶಾಸಕರು, ಮೂವರು ಎಮ್ಮೆಲ್ಸಿಗಳು ಮತ್ತು ಓರ್ವ ರಾಜ್ಯಸಭಾ ಸದಸ್ಯರು ಸೇರಿದರೆ ಅದು ಒಟ್ಟು 21 ಮತಗಳಷ್ಟಾಗುತ್ತದೆ. ಇವರೊಂದಿಗೆ ಕನಿಷ್ಠ ಏಳು ಮಂದಿ ಪಕ್ಷೇತರ ಕೌನ್ಸಿಲರ್‌ಗಳು ಕೈಜೋಡಿಸಿದರೂ

ಮುಸ್ಲಿಂ ಮೇಯರ್ ಜಾಕೀರ್?



ಎ.ಆರ್. ಜಾಕೀರ್

ಈ ಬಾರಿ ಸಾಮಾನ್ಯ ವರ್ಗಕ್ಕೆ ಮೇಯರ್‌ಗಿರಿ ನಿಗದಿಯಾಗಿದ್ದು ಗೆದ್ದಿದ್ದರೆ ಕುರುಬರಹಳ್ಳಿ ನಾಗರಾಜ್ ಅಥವಾ ಮಾವಳ್ಳಿ ಉದಯಶಂಕರ್ ಮೇಯರ್ ಗಾದಿಗೇರುತ್ತಿದ್ದರೇನೊ. ವಿಪರ್ಯಾಸವೆಂದರೆ ಕಾಂಗ್ರೆಸ್‌ನಿಂದ ಮೇಯರ್ ರೇಸಿಗೆ ಬಿದ್ದಿದ್ದ ಇಬ್ಬರೂ ಸೋತಿದ್ದಾರೆ. ಕುರುಬರಹಳ್ಳಿ ನಾಗರಾಜ್ ಅನುಭವದಲ್ಲಿ ಹಿರೀಕ ಮತ್ತು ಬಿಜೆಪಿ ಆಳ್ವಿಕೆಯ ದುರಾಡಳಿತವನ್ನು ಬಯಲಿಗೆಳೆದವರು. ಗೆದ್ದಿದ್ದರೆ ಅವರ ಪತ್ನಿಯೂ ಸೇರಿದಂತೆ ಇದು ಐದನೇ ಬಾರಿಯಾಗುತ್ತಿತ್ತು. ಆದರೆ ನಾಗರಾಜ್‌ಗೆ ಅತೀ ವಿಶ್ವಾಸ. ಹೇಗಿದ್ದರೂ ತಾನೇ ಗೆಲ್ಲುವುದೆಂದು ಕೊನೇ ಗಳಿಗೆಯಲ್ಲಿ ಯಾಮಾರಿಬಿಟ್ಟರು. ಪಕ್ಷೇತರನೊಬ್ಬ ಅವರ ಪಾಲಿನ ಮೂರೂವರೆ ಸಾವಿರದಷ್ಟು ಓಟು ಕಿತ್ತ ಫಲವಾಗಿ ಬಿಜೆಪಿಯ ರಾಜೇಂದ್ರ ಗೆದ್ದು ಬಿಟ್ಟ. ಅದೂ ಮುನ್ನೂರು ಮತಗಳ ಅಂತರದಿಂದ. ಪಾಪ ನಾಗರಾಜ್ ಈಗ ಹಾಸಿಗೆ ಹಿಡಿದಿದ್ದಾರಂತೆ!

ಸಿದ್ದಾಪುರ ವಾರ್ಡಿಗೆ ಈ ಬಾರಿ ಉದಯಶಂಕರ್ ಗೆದ್ದಿದ್ದರೆ ಅದೂ ಐದನೇ ಬಾರಿಯಾಗುತ್ತಿತ್ತು. ವಿರೋಧ ಪಕ್ಷದ ನಾಯಕನಾಗಿದ್ದ ಸೀನಿಯಾರಿಟಿ ಮತ್ತು ರಾಮಲಿಂಗಾರೆಡ್ಡಿಯವರ ಶ್ರೀರಕ್ಷೆ ಎರಡೂ ಉದಯಶಂಕರ್ ಬೆನ್ನಿಗಿತ್ತು. ಆದರೆ ದುರಾದೃಷ್ಟ ಎಸ್‌ಡಿಪಿಐ ರೂಪದಲ್ಲಿತ್ತು. ಮುಸ್ಲಿಂ ಮೂಲಭೂತವಾದಿ ಎಸ್‌ಡಿಪಿಐನ ಮುಜಾಹಿದ್ ಪಾಷಾ ಗೆದ್ದುಬಿಟ್ಟ. ಉದಯಶಂಕರ್ ಕೂಡ ಈಗ ಹಾಸಿಗೆ ಹಿಡಿದಿದ್ದಾರಂತೆ.

ನಿರ್ಲಕ್ಷವೋ ಅತೀ ವಿಶ್ವಾಸವೋ ಬೆಂಗಳೂರಿನ ಇಬ್ಬರು ಜನನಾಯಕರು ಮೇಯರ್‌ಗಿರಿಯ ಹೊಸ್ತಿಲಲ್ಲೇ ಎಡವಿಬಿದ್ದಿದ್ದಾರೆ. ಮಿಕ್ಕಂತೆ ಕಾಂಗ್ರೆಸ್ ಪಾಲಿಗೆ ಹಿರಿಯ ಕೌನ್ಸಿಲರ್‌ಗಳೆಂದಿರುವುದು ಪ್ರಕಾಶ್‌ನಗರದ ಪದ್ಮಾವತಿ, ಜಯಮಹಲ್ ವಾರ್ಡಿನ ಎಂ.ಕೆ. ಗುಣಶೇಖರ್, ಭಾರತಿನಗರದ ಶಕೀಲ್ ಅಹ್ಮದ್, ಚಾಮರಾಜಪೇಟೆಯ ಕೋಕಿಲಾ ಚಂದ್ರಶೇಖರ್ ಮತ್ತು ಪುಲಿಕೇಶಿನಗರದ ಎ.ಆರ್. ಜಾಕೀರ್. ಈ ಪೈಕಿ ಜಾಕೀರ್ ಸಂಭಾವಿತ ಮತ್ತು ಜನಾನುರಾಗಿ. ಎದುರಾಳಿಗೆ 1550 ಮತ ಬಿದ್ದರೆ ಜಾಕೀರ್ ಗಿಟ್ಟಿಸಿದ್ದು 7 ಸಾವಿರಕ್ಕೂ ಅಧಿಕ.

ಯಾರೇ ಮೇಯರಾಗಬೇಕೆಂದರೂ ಅದಕ್ಕೆ ಜೆಡಿಎಸ್ ಪಿತಾಮಹ ದೇವೇಗೌಡರ ಮರ್ಜಿಯಿರಬೇಕೆಂಬ ಅಲಿಖಿತ ಒಪ್ಪಂದವಿದ್ದರೆ ಗತಿಯೇನು? ಮುಸ್ಲಿಂ ಮೇಯರಾಗುವುದನ್ನು ತಪ್ಪಿಸುವವರ್ಯಾರು?



ಎಂ.ಕೆ. ಗುಣಶೇಖರ್






ಶಕೀಲ್ ಅಹ್ಮದ್



ಕುರುಬರಹಳ್ಳಿ ನಾಗರಾಜ್



ಉದಯಶಂಕರ್

...ಂಗ್ರೆಸ್‌ನ 101 ಮತ್ತು ಜೆಡಿಎಸ್‌ನ 21ರ ...ಳು ಪಕ್ಷೇತರರು ಮೂವರು ಪಕ್ಷೇತರ ...ಗಳೂ ಜೊತೆಯಾದರೆಂದರೆ ಆ ಸಂಖ್ಯೆ ಒಟ್ಟು ...ಯುತ್ತದೆ.

ಚಂದ್ರಪ್ಪ ರೆಡ್ಡಿ!

...ಪಿಯ 125ಕ್ಕೆ ಪ್ರತಿಯಾಗಿ ಕಾಂಗ್ರೆಸ್, ... ಮತ್ತು ಪಕ್ಷೇತರರನ್ನು ಸೇರಿಸಿಕೊಂಡು ...133 ಆಯಿತೆಂದರೆ ಅಲ್ಲಿಗೆ ಬಿಜೆಪಿಯ ಲೆಕ್ಕ ...ಕೊಡೆದಂತೆಯೆ. ಇಂಥಾದೊಂದು ...ದದ ಬೆನ್ನು ಹತ್ತಿದ್ದು ಕಾಂಗ್ರೆಸ್-ಜೆಡಿಎಸ್ ...ಡೆ! ಒಂದೆಡೆ ಜಮೀರ್ ಮತ್ತು ...ಯ್ಯ ಜೆಡಿಎಸ್ ಕೌನ್ಸಿಲರ್‌ಗಳನ್ನು ಜೊತೆ ...ಡು ಕೇರಳದ ಹಾದಿ ಹಿಡಿದರೆ ಮತ್ತೊಂದೆಡೆ ... ಮತ್ತು ಭೈರತಿ ಬಸವರಾಜ್ ಪಕ್ಷೇತರರನ್ನು ...ಹಾಕಿಕೊಂಡಾಗಿತ್ತು.

ಮಿಕ್ಕಿದ್ದು ಸೆಪ್ಟೆಂಬರ್ 11ರ ಮೇಯರ್ ಆಯ್ಕೆಯ ಗಳಿಗೆಯೊಂದೇ!





ಗೆದ್ದ ಬಿಜೆಪಿಯ ನೂರು ಮಂದಿ ಕೌನ್ಸಿಲರ್‌ಗಳಿಗೂ ಮತ್ತು ಕಾಂಗ್ರೆಸ್ಸಿನ 76 ಮಂದಿ ಪಾಲಿಕೆ ಸದಸ್ಯರಿಗೂ ಇದ್ದ ಅಂತರ ಕಂಡೇ ಅಶೋಕ್ ಜೆಡಿಎಸ್ ಮಾಡಬಹುದಾದ ಅನಾಹುತವನ್ನು ಮರೆತುಬಿಟ್ಟರು. ಬಿಜೆಪಿಗೆ ದಕ್ಕಿದ ಬಹುಮತಕ್ಕೆ ಜೆಡಿಎಸ್ ನಾಯಕ ಕುಮಾರಸ್ವಾಮಿ 'ಲೂಟಿಕೋರರನ್ನೇ ಬೆಂಗಳೂರಿನ ಪ್ರಬುದ್ಧರು ಬೆಂಬಲಿಸಿದ್ದಾರೆ ಮತ್ತು ಕೆರೆಕಟ್ಟೆ ಕಬಳಿಸಿದವರನ್ನೇ ಆಶೀರ್ವದಿಸುವ ಮೂಲಕ ಕೆರೆ ತೆರವು ಕಾರ್ಯಾಚರಣೆಗೇ ಹಿನ್ನಡೆಯಾಗಿದೆ....' ಎಂದಿದ್ದನ್ನು ಅರ್ಥೈಸಿಕೊಳ್ಳುವಲ್ಲಿ ಅಶೋಕ್ ಎಡವಿಬಿಟ್ಟರು.

ಇದೆಲ್ಲದರ ಹೊರತಾಗಿಯೂ ಬಿಜೆಪಿ ಕಚೇರಿಯತನಕ ಬಂದು ತಮ್ಮನ್ನು ಮತ್ತೆ ಬಿಜೆಪಿಗೆ ಸೇರಿಸಿಕೊಳ್ಳಿ ಎಂದು ಅಲವತ್ತುಕೊಂಡ ನಾಲ್ವರು ಪಕ್ಷೇತರ ಕೌನ್ಸಿಲರ್‌ಗಳು ಮಾಡಬಹುದಾದ ಅನಾಹುತವನ್ನು ಅಶೋಕ್ ಲೆಕ್ಕ ಹಾಕಲೇ ಇಲ್ಲ. ಬಹುಶಃ ಸಿ.ವಿ. ರಾಮನ್‌ನಗರದ ಬಿಜೆಪಿ ಶಾಸಕ ರಘು, ಮಹದೇವಪುರದ ಲಿಂಬಾವಳಿ ಮತ್ತು ಸಂಸದ ಪಿ.ಸಿ. ಮೋಹನ್ ಅಡ್ಡ ಬಾರದೇ ಹೋಗಿದ್ದರೆ ಅಶೋಕ್ ಯಾಮಾರುತ್ತಿರಲಿಲ್ಲವೇನೊ!

ಅದು ಕೊನೇನ ಅಗ್ರಹಾರದ ಚಂದ್ರಪ್ಪ ರೆಡ್ಡಿ ಮತ್ತು ಸಿವಿ ರಾಮನ್‌ನಗರದ ಶಾಸಕ ರಘು ನಡುವಿನ ಜಿದ್ದಾಜಿದ್ದಿ. ಕಳೆದ ಬಾರಿ ಕೊನೇನ ಅಗ್ರಹಾರ ವಾರ್ಡಿನಿಂದ ಬಿಜೆಪಿಯಿಂದಲೇ ಗೆದ್ದ ಚಂದ್ರಪ್ಪರೆಡ್ಡಿಗೂ ಶಾಸಕ ರಘುವಿಗೂ ವೈಮನಸ್ಯ ಶುರುವಾಗಿದ್ದು 2012ರಲ್ಲಿ. ತನ್ನ ವಾರ್ಡಿನ ಬಹುತೇಕ ಕಾಮಗಾರಿಗಳ ವಿಷಯದಲ್ಲಿ ಸರ್ವಾಧಿಕಾರಿಯಂತೆ ಮೆರೆದ ರಘು ವಿರುದ್ಧ ಚಂದ್ರಪ್ಪರೆಡ್ಡಿ ಪ್ರತಿಭಟಿಸುತ್ತಲೇ ಬಂದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಂದ್ರಪ್ಪ ರೆಡ್ಡಿಯ ಹುಡುಗರು ಒಳಗಿಂದೊಳಗೇ ಕಾಂಗ್ರೆಸ್‌ನ ಪಿ. ಎರಡು ಸಾವಿರದ ಮೇಲೆ ಓಟು ಗಿಟ್ಟಿಸಲಿಲ್ಲ. ಮುನಿರೆಡ್ಡಿಗಿದ್ದ ಕಾಂಗ್ರೆಸ್ ಮೇಲಿನ ಸಿಟ್ಟಿಗೆ ಚಂದ್ರಪ್ಪ ರೆಡ್ಡಿ ಗೆದ್ದಂತೆ ಪಕ್ಕದ ಜೀವನ್‌ಭೀಮಾನಗರದ ಕಾಂಗ್ರೆಸ್ ಅಭ್ಯರ್ಥಿ ಪ್ರಭಾವತಿಗೂ ಸೋಲಾಯಿತು. ಅಲ್ಲಿ ಬಿಜೆಪಿಯ ವೀಣಾಕುಮಾರಿ ಗೆದ್ದು ಮುನಿರೆಡ್ಡಿಯ ಕಾರಣಕ್ಕಾಗೇ ಹೊಯ್ಸಳ ನಗರ, ಜೀವನ್‌ಭೀಮಾನಗರ ಮತ್ತು ಕೋನೇನ ಅಗ್ರಹಾರಗಳಲ್ಲಿ ಕಾಂಗ್ರೆಸ್ ನೆಲ ಕಚ್ಚುವಂತಾಯ್ತು.

ಮತ್ತೊಂದೆಡೆ ದೊಮ್ಮಲೂರಿನಿಂದ ಆಟೋ ಗುಂಡಣ್ಣ ಯಾನೇ ಲಕ್ಷ್ಮೀನಾರಾಯಣ ಪಕ್ಷೇತರನಾಗಿ ಗೆದ್ದಿದ್ದು ಸಂಸದ ಪಿ.ಸಿ. ಮೋಹನ್‌ಗೆ ಮುಖಭಂಗವಾಗಿತ್ತು. ಲಕ್ಷ್ಮೀನಾರಾಯಣ್ ಬಿಜೆಪಿ ಟಿಕೆಟ್ ಕೇಳಿದ್ದ. ಸಂಸದ ಪಿ.ಸಿ. ಮೋಹನ್‌ಗೂ ಲಕ್ಷ್ಮೀನಾರಾಯಣ್‌ಗೂ ಹಿಂದಿನಿಂದಲೂ ದುಷ್ಮನಿಯಿತ್ತು. ಲಕ್ಷ್ಮೀನಾರಾಯಣನನ್ನು ಮತ್ತೆ ಬಿಜೆಪಿಗೆ ಬಳಸಿಕೊಳ್ಳುವ ಪ್ರಶ್ನೆಯೇ ಇಲ್ಲವೆಂದು ಪಿ.ಸಿ. ಮೋಹನ್ ಹಟಕ್ಕೆ ಬಿದ್ದ ಫಲವಾಗಿ ಅಶೋಕ್ ಲಕ್ಷ್ಮೀನಾರಾಯಣನನ್ನು ದೂರವಿಟ್ಟರು. ಮಾರತಹಳ್ಳಿ ವಾರ್ಡಿಗೆ ಬಿಜೆಪಿ ಟಿಕೆಟ್ ಕೇಳಿದ್ದ ಎನ್. ರಮೇಶ್ ವಿರುದ್ಧ ಶುರುವಿನಿಂದಲೂ ಲಿಂಬಾವಳಿ ಕತ್ತಿ ಮಸೆಯುತ್ತಿದ್ದರು. ಪಕ್ಷೇತರನಾಗಿ ಗೆದ್ದನೆಂದ ಮಾತ್ರಕ್ಕೆ ಆತನನ್ನು ಮತ್ತೆ ಬಿಜೆಪಿಗೆ ಸೇರಿಸಿಕೊಂಡರೆ ತಾನಿದ್ದು ಪ್ರಯೋಜನವೇನು ಎಂದೇ ಲಿಂಬಾವಳಿ ಅಶೋಕ್‌ಗೆ ಎಚ್ಚರಿಕೆ ನೀಡಿದ್ದರು.

ಸಂಸದ ಪಿ.ಸಿ. ಮೋಹನ್ ಶಾಸಕರಾದ ಲಿಂಬಾವಳಿ ಮತ್ತು ರಘು ಎಲ್ಲಿ ತನ್ನ ವಿರುದ್ಧ ತಿರುಗಿಬಿದ್ದಾರೋ ಎಂದು ಅಶೋಕ್ ಬಿಜೆಪಿಯ ಮೂವರ ಜೊತೆ ಬಂದಿದ್ದ ಆನಂದ್‌ಕುಮಾರ್‌ನನ್ನೂ ಮಾತನಾಡಿಸದೇ ದೂರವಿಟ್ಟಿದ್ದರು. ನಾಲ್ವರು ಪಕ್ಷೇತರ ಕೌನ್ಸಿಲರ್‌ಗಳು ಬಿಜೆಪಿ ಹೊರತಾಗಿ ಬೇರೆಲ್ಲೂ

ರಮೇಶ್ ಪರವಾಗಿ ಕೆಲಸ ಮಾಡಿದ್ದು ರಘು ಗಮನಕ್ಕೆ ಬಂತು. ರಘು ಪಾಲಿಕೆಯಲ್ಲಿ ನಡೆಸಿದ ಹಗರಣಗಳನ್ನೂ ಚಂದ್ರಪ್ಪ ರೆಡ್ಡಿ ಪತ್ತೆ ಹಚ್ಚಿ ಮೀಡಿಯಾಗಳಿಗೆ ಒದಗಿಸಿದ್ದೂ ರಘು ಕಿವಿಗೆ ಬಿದ್ದಿತ್ತು. ಇದೆಲ್ಲವನ್ನೂ ಸದ್ದಿಲ್ಲದೆ ಸಾಧಿಸುತ್ತಿದ್ದ ರಘು ಮೊನ್ನೆ ನಡೆದ ಪಾಲಿಕೆ ಚುನಾವಣೆಯಲ್ಲಿ ಸರಿಯಾದ ಬತ್ತಿಯನ್ನೇ ಇಟ್ಟರು.

ಹಾಲಿ ಪಾಲಿಕೆ ಸದಸ್ಯ ಚಂದ್ರಪ್ಪರೆಡ್ಡಿಗೆ ಬದಲಾಗಿ ತನ್ನ ಚೇಲಾ ಸುರೇಂದ್ರನಾಥ್ ರೆಡ್ಡಿಗೆ ಬಿಜೆಪಿ ಟಿಕೆಟ್ ಕೊಟ್ಟರು. ಶಾಸಕ ರಘು ಮತ್ತು ಚೇಲಾ ಸುರೇಂದ್ರನಾಥ್ ರೆಡ್ಡಿ ಸೇರಿಕೊಂಡು ಇನ್ನಿಲ್ಲದಂತೆ ಚಂದ್ರಪ್ಪರೆಡ್ಡಿ ವಿರುದ್ಧ ಹೆಣಗಾಡಿದರಾದರೂ ಜನ ಚಂದ್ರಪ್ಪರೆಡ್ಡಿಯ ಕೈಹಿಡಿದರು. ಬಿಜೆಪಿಗಿಂತಲೂ ಮುನ್ನೂರು ಮತಗಳ ಲೀಡ್ ಪಡೆದ ಚಂದ್ರಪ್ಪ ರೆಡ್ಡಿ ಪಕ್ಷೇತರನಾಗಿಯೇ ಗೆದ್ದು ಬಿಟ್ಟರು. ತನಗೆ ಬಿಜೆಪಿ ಟಿಕೆಟ್ ಸಿಗುವುದು ಕಷ್ಟ ಎಂದು ಮೊದಲೇ ಗೊತ್ತಿದ್ದ ರೆಡ್ಡಿ ಕಾಂಗ್ರೆಸ್ ಟಿಕೆಟ್ಟಿಗಾಗಿ ರಾಮಲಿಂಗಾರೆಡ್ಡಿಯ ಮನೆಬಾಗಿಲನ್ನೂ ಬಡಿದಿದ್ದರು. ಅದೂ ಬರಕತ್ತಾಗದೆ ಪಕ್ಷೇತರನಾಗಿಯೇ ಗೆದ್ದು ಮತ್ತೆ ಬಿಜೆಪಿ ಪಾರ್ಟಿಯ ಬಾಗಿಲು ಬಡಿದ ಚಂದ್ರಪ್ಪರೆಡ್ಡಿ ತನ್ನೊಂದಿಗೆ ಇನ್ನೂ ಮೂವರು ಪಕ್ಷೇತರರನ್ನು ಜೊತೆ ಹಾಕಿಕೊಂಡಿದ್ದಕ್ಕೂ ಕಾರಣವಿತ್ತು.

ತನ್ನ ಪಕ್ಕದ ವಾರ್ಡ್ ಹೊಯ್ಸಳ ನಗರದಿಂದ ಪಕ್ಷೇತರನಾಗಿ ಗೆದ್ದಿದ್ದ ಆನಂದ್‌ಕುಮಾರ್ ಮೂಲತಃ ಕಾಂಗ್ರೆಸ್ ಕಾರ್ಯಕರ್ತನೇ ಆದರೂ ಆತನಿಗೂ ಶಾಸಕ ರಘು ವಿರುದ್ಧ ಹಗೆಯಿತ್ತು. ಚಂದ್ರಪ್ಪರೆಡ್ಡಿ ವಿರುದ್ಧ ಕಾಂಗ್ರೆಸ್ ಮುನಿರೆಡ್ಡಿಗೆ ಟಿಕೆಟ್ ಕೊಟ್ಟಿದ್ದರೆ ಲೆಕ್ಕಾಚಾರ ಬೇರೆಯಾಗುತ್ತಿತ್ತು. ಹಳೇ ಕಾರ್ಯಕರ್ತನೆಂದು ರಾಮಕೃಷ್ಣಗೆ ಕಾಂಗ್ರೆಸ್ ಟಿಕೆಟ್ ನೀಡಿತು. ರಾಮಕೃಷ್ಣ

ಹೋಗಲು ಸಾಧ್ಯವೇ ಇಲ್ಲ ಎಂದು ಅಶೋಕ್ ಭಾವಿಸುವುದಕ್ಕೂ ಬೇರೆಯದೇ ಕಾರಣವಿತ್ತು. ಅದು ಕುಮಾರಸ್ವಾಮಿಗೂ ಸಿದ್ದುಗೂ ಇದ್ದ ಹಳೇ ದುಷ್ಮನಿ.


ಏನೇ ಇದ್ದರೂ ದೇವೇಗೌಡರು ಕಾಂಗ್ರೆಸ್ ಜೊತೆ ಕೈಜೋಡಿಸುವ ಮೂಲಕ ಸಿದ್ದು ಕೈ ಬಲಪಡಿಸಲಾರರು ಎಂದೇ ಅಶೋಕ್ ಲೆಕ್ಕ ಹಾಕಿದ್ದರು. ಬೆಂಗಳೂರಿನ ಪ್ರಬುದ್ಧರು ಲೂಟಿಕೋರರನ್ನು ಬೆಂಬಲಿಸಿದ್ದಾರೆಂಬ ಕುಮಾರಸ್ವಾಮಿಯ ಮಾತೇ ಜೆಡಿಎಸ್ ಆಕ್ರೋಶದ ಮುನ್ಸೂಚನೆಯಾಗಿತ್ತು. ಹಾಗಿದ್ದೂ ಜೆಡಿಎಸ್‌ಗೆ ಬಿಜೆಪಿಯನ್ನು ಅವಲಂಬಿಸದೇ ಬೇರೆ ವಿಧಿಯೇ ಇಲ್ಲ ಎಂದೇ ಅಶೋಕ್ ನಂಬಿದ್ದರು. ಯಾವತ್ತು ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿಗೆ ಬಿದ್ದ ಸಂಗತಿ ಹೊರಬಿತ್ತೋ ಅಶೋಕ್ ಕಂಗಾಲು ಬಿದ್ದರು. ಚಿಕ್ಕಮಗಳೂರಿನಲ್ಲಿದ್ದ ಕುಮಾರಣ್ಣನನ್ನು ಸಂಪರ್ಕಿಸಿ 'ಬೇಕಿದ್ರೆ ನಿಮ್ಮವರೇ ಮೇಯರಾಗ್ಲಿ, ನಾವು ಸಪೋರ್ಟ್ ಮಾಡ್ತೀವಿ...!' ಎಂದು ಅಶೋಕ್ ಚೌಕಾಸಿಗಿಳಿದರೆ ಕುಮಾರಣ್ಣ ಒಪ್ಪಲೇ ಇಲ್ಲ.

ಸರ್ಕಾರ ಕಾಂಗ್ರೆಸ್ಸಾಗಿರುವಾಗ ಯಾರು ಮೇಯರಾಗಿ ಏನು ಪ್ರಯೋಜನ? ಸರ್ಕಾರ ಫಂಡು ಕೊಡದೇಹೋದರೆ ನಾವೂ ನೀವು ಸೇರಿ ಏನು ತಾನೇ ಮಾಡಲು ಸಾಧ್ಯ? ಎಂದು ಕುಮಾರಣ್ಣ ಫೋನ್ ಕುಕ್ಕಿಬಿಟ್ಟರು.


ಬಾಗಿಲಿಗೆ ಬಂದಿದ್ದ ನಾಲ್ವರು ಪಕ್ಷೇತರರನ್ನು ಅವಮಾನಿಸಿ ತಾನೆಂಥ ತಪ್ಪು ಮಾಡಿದೆನೆಂದು ಅಶೋಕ್‌ಗೆ ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿತ್ತು.

■ ರಾ. ಸೋಮನಾಥ್

ಉದ್ದಂಡ ನಾಯಕ ಗುರಪ್ಪ ನಾಯ್ಡು ಮತ್ತು ಮಾರ್ತಾಂಡ ಭೈರವ ಚೇತನ್‌ಗೌಡ!



ಬಿಜೆಪಿ ಸೇನಾನಿ ಆರ್. ಅಶೋಕ್‌ರ ಪದ್ಮನಾಭನಗರಕ್ಕೆ ಒಬ್ಬರಲ್ಲ ಇಬ್ಬರು ಕಾಂಗ್ರೆಸ್ ಅಧಿನಾಯಕರು. ಒಬ್ಬರು ಸಣ್ಣ ಕೈಗಾರಿಕಾ ನಿಗಮದ ಅಧ್ಯಕ್ಷ ಗುರಪ್ಪ ನಾಯ್ಡುವಾದರೆ ಮತ್ತೊಬ್ಬರು ಲಾಳನಕೆರೆ ಶಿವರಾಮೇಗೌಡರ ಮಗ ಚೇತನ್‌ಗೌಡ. ಒಬ್ಬರಿಗೊಬ್ಬರು ಯಾವುದಕ್ಕೂ ಕಮ್ಮಿಯಿಲ್ಲ. ಎಂಟು ವಾರ್ಡುಗಳ ಪೈಕಿ ಇಬ್ಬರಿಗೂ ನಾಲ್ಕರಂತೆ ವಾರ್ಡುಗಳನ್ನು



...ಟ್ಟಿದ್ದರಂತೆ. ಆ ಪ್ರಕಾರ ಕನಿಷ್ಠ ನಾಲ್ಕನ್ನಾದರೂ ಕಾಂಗ್ರೆಸ್ ಗೆಲ್ಲಬೇಕಿತ್ತಲ್ಲವೆ?

...ನೆಂದರೆ ಈ ಹಿಂದೆ ಎರಡರಲ್ಲಿ ಗೆದ್ದಿದ್ದ ಕಾಂಗ್ರೆಸ್ ಈ ಬಾರಿ ಗೆದ್ದಿದ್ದು ಕೇವಲ ಒಂದು. ಬನಶಂಕರಿ ...ಕ್ಕೆ ಗೆದ್ದ ಅನ್ವರ್ ಪಾಷಾರ ಹೊರತಾಗಿ ಕಾಂಗ್ರೆಸ್ಸಿನ ಬಹುತೇಕ ಅಭ್ಯರ್ಥಿಗಳು ಮೂರನೇ ಸ್ಥಾನಕ್ಕೆ ತೃಪ್ತಿ ...ಯಿತು. ಹೊಸಕೆರೆಹಳ್ಳಿ ವಾರ್ಡಿಗೆ ಬಿಜೆಪಿಯ ರಾಜೇಶ್ವರಿ ಚೋಳರಾಜನ್ ಗೆದ್ದು 9460 ಮತಗಳನ್ನು ...ಜೆಡಿಎಸ್‌ನ ಚೈತ್ರಾ ಜಗದೀಶ್ 7218 ಮತ ಪಡೆದು ಕಾಂಗ್ರೆಸ್ಸಿನ ಮಹಾತಾಯಿ ರೋಹಿಣಿ ಚಂದ್ರಪ್ಪ ...ಕೇವಲ 1802 ಮಾತ್ರ!

...ಗಣೇಶ ಮಂದಿರದಲ್ಲಿ ಬಿಜೆಪಿಯ ಲಕ್ಷ್ಮಿ ಉಮೇಶ್ 5344 ಮತ್ತು ಜೆಡಿಎಸ್‌ನ ನಾಗರತ್ನ 4488 ಮತ ...ಕಾಂಗ್ರೆಸ್ಸಿನ ಉಷಾ ಕೇವಲ 1403!

...ನಾಭನಗರದಲ್ಲಿ ಅಂಜನಪ್ಪನ ಪತ್ನಿಗೆ 8500 ಬಂದರೆ ಜೆಡಿಎಸ್‌ನ ತ್ರಿವೇಣಿಬಾಬು 4040 ಮತ್ತು ... ಶಶಿಭಾಗೆ 1896. ನಾಲ್ಕನೇ ಸ್ಥಾನ. ಚಿಕ್ಕಲ್ಲಸಂದ್ರದಲ್ಲೂ ಅಷ್ಟೇ. ವೆಂಕಟಸ್ವಾಮಿ ನಾಯ್ಡು ಮಗಳು ... ಕೇಸರ್‌ಗೆ 8328 ಓಟು ಬಿದ್ದರೆ ಜೆಡಿಎಸ್‌ನ ಕವಿತಾ 7242 ಓಟು ಕಿತ್ತು ಕಾಂಗ್ರೆಸ್ಸಿನ ...ಪ್ಪನ ಸೊಸೆ ... ಗಳಿಸಿದ್ದು ಕೇವಲ 2296.

...ಡ ನಾಯಕ ಗುರಪ್ಪನಾಯ್ಡು ಮತ್ತು ಪ್ರಚಂಡ ಚೇತನ್‌ಗೌಡರ ಜಂಟಿ ಸಾಹಸಕ್ಕೆ ಜೆಡಿಎಸ್ 2ನೇ ಸ್ಥಾನಕ್ಕೆ ...ಂಗ್ರೆಸ್ ಮೂರನೇ ಸ್ಥಾನಕ್ಕೆ ಕುಸಿಯುತೆಂದರೆ ಬಿಜೆಪಿಗಳು ತಾನೇ ಚಪ್ಪಾಳೆ ತಟ್ಟದೇ ಇರುತ್ತಾರಾ?

'ಪ್ರಬಲಾ' ಅತ್ಯಾಚಾರ ಪ್ರಕರಣ

ಬಯಲಾಯ್ತು ಕಾವಿ ಡಾನ್ ರಾಘುನ ಮತ್ತೊಂದು ಕಾಮಕಾಂಡ!

ರಾಘವೇಶ್ವರ ಸ್ವಾಮಿ



ರಾಮಚಂದ್ರಾಪುರಮಠದ ಗೂಳಿ ಗುರು ರಾಘವೇಶ್ವರ ಭಾರತೀಯ ಕಾಮ ಕಾಂಡದ ಅಧ್ಯಾಯಗಳು ಚಾತುರ್ಮಾಸಕ್ಕೆ ಒಂದರಂತೆ ಬಯಲಿಗೆ ಬೀಳುತ್ತಿದೆ! ಹವ್ಯಕ ಬ್ರಾಹ್ಮಣರ ಈ ಪೀಠಾಧಿಪತಿಯು ಹಳ ಹಾದರದ ಕುರಿತು ಮೊದಲಿಂದಲೂ ಗಲೀಜು ಗುಲ್ಲಿತ್ತಾದರೂ ಅದನ್ನು ಮಠದ ತಾಲಿಬಾನಿ ಪಡೆ ಹೊರಬರದಂತೆ ಕಾವಲು ನಿಂತಿತ್ತು. ಲಂಪಟತನ ಎಂಬುದೇ ಹಾಗೆ; ಮುಚ್ಚಿಡಲು ಹವಣಿಸಿದಂತೆಲ್ಲ ಪುಟಿದೆದ್ದು ಹೊರಬರಲು ಪ್ರಯತ್ನಿಸುತ್ತದೆ. ಅದು ಪ್ರಕೃತಿ ನಿಯಮ. ಈ ಸರಳ ಸತ್ಯ ಕಡೆಗಣಿಸಿ ಬಾಲಕಿಯರು, ಗೃಹಿಣಿಯರೆನ್ನದೆ ಕಂಡಕಂಡ ಭಕ್ತೆಯರ ಮೇಲೆರಗಿ ತೀಟೆ ತೀರಿಸಿಕೊಳ್ಳುತ್ತ ಬಂದ ರಾಘು ಮಾಣಿ ಮಾಡಿದ ಪಾಪಕ್ಕೆ ಜೈಲಲ್ಲಿ ಮಜ್ಜಿಗೆ ತಂಬ್ಳಿ ಸುರಿಬೇಕಾದ ಕಾಲ ಸನ್ನಿಹಿತವಾಗಿದೆ!!

ಹವ್ಯಕರು ಜಾಣ ಜಾತಿಯವರೆಂಬ ಹೆಗ್ಗಳಿಕೆಯಿದೆ. ಆದರೆ ಈ ಸಮುದಾಯದ ಅರ್ಧಕ್ಕರ್ಧ ಮಂದಿಯ ವೈಚಾರಿಕತೆ-ಬೌದ್ಧಿಕತೆ ಸರ್ವನಾಶ ಮಾಡಿ ಪೆದ್ದು ಅನುಯಾಯಿಗಳಾಗಿಸಿಕೊಂಡಿರುವ ಸಾಧನೆ ರಾಘು ಮಾಣಿಯದು. ರಾಮ ಕಥಾ ಗಾಯಕಿಯನ್ನು ರಾಘು ನಿರಂತರವಾಗಿ ಹರಿದು ತಿಂದ ಕರಾಳ ಪುರಾಣ ಜಾಗತಿಕ ಮಟ್ಟದ ತಲ್ಲಣಗಳನ್ನು ಎಬ್ಬಿಸಿದರೂ "ನಮ್ಮ ಗುರುಗಳು ಅಂಥವರಲ್ಲ" ಎಂದು ಇವತ್ತಿಗೂ ಹವ್ಯಕರ ಒಂದು ವರ್ಗ ಹೇಳುತ್ತಿದೆ. ಶ್ರೀರಾಮನ ಅವಕೃಪೆ-ಗುರುಶಾಪ-ಬಹಿಷ್ಕಾರ ಎಂಬ ತ್ರಿವಿಧ ಭಯೋತ್ಪಾದನೆಯಿಂದ ಶೇಕಡಾ ಐವತ್ತರಷ್ಟು ಹವ್ಯಕರನ್ನು ಬೆನ್ನಿಗಿಟ್ಟುಕೊಂಡಿರುವ ರಾಘು ಪಟಾಲಮ್‌ಗೂ ಗೊತ್ತಿದೆ ಗುರು 'ಎಂಥವ'ನೆಂದು. ಆದರೂ ಈ ಮಠಾವಲಂಬಿಗಳು ಪೀಠದಿಂದ ಸಿಗುವ ಲಾಭ-ಅನುಕೂಲಕ್ಕಾಗಿ ಹವ್ಯಕರನ್ನು ಒಡೆದು ಆಳುತ್ತಿದೆ!

ಗಾಯಕಿ ಪ್ರೇಮಲತಾ ಅಧಿಕೃತವಾಗಿ ರಾಘುನ ಅತ್ಯಾಚಾರದ ಬಗ್ಗೆ ಕೊಟ್ಟ ದೂರು ದಾಖಲಾಗುತ್ತಿದ್ದಂತೆಯೇ ಈ ಕಾವಿ ಕಾಮ ದುರಂಧರನ ಕೊಳಕುತನ ಮೊದಲ ಬಾರಿ ಜಗಜ್ಜಾಹೀರಾಯಿತು. ಆದರೆ ಪ್ರೇಮಲತಾ ಫ್ಯಾಮಿಲಿಯನ್ನು ಮಠ ಮಾಫಿಯಾ ಅದ್ಯಾವ ಪರಿ ಕಾಡಿತೆಂದರೆ, ರಾಘುನ ಕಚ್ಚೆ ಹರುಕತನಕ್ಕೆ ಬಲಿಯಾಗಿದ್ದ ನೂರಾರು ಹೆಂಗಸರು-ಹುಡುಗಿಯರಲ್ಲಿ ಒಬ್ಬೇ ಒಬ್ಬಳು ದೂರು ಕೊಡುವ ಯೋಚನೆ ಕನಸಲ್ಲೂ ಮಾಡದಂತಾಯ್ತು! ಪ್ರೇಮಲತಾ ರಾಘುನ ರಾಸಲೀಲಾ ರಗಳೆಗಳನ್ನು ಬಹಿರಂಗಪಡಿಸಿದಾಗ ಆಕೆಯೇ ನಡತೆ ಗೆಟ್ಟವಳು, ಆಕೆಯ ಕುಟುಂಬದ ಚಾರಿತ್ರ್ಯವೇ ಸರಿಯಿಲ್ಲವೆಂದು ಅಪಪ್ರಚಾರ ಮಾಡಿ ಕಳ್ಳ ಗುರುವನ್ನು ಕೊಂಡಾಡಿದವರೇ ಈಗ ಬೆಚ್ಚಿ ಬೀಳುವಂಥ ಮತ್ತೊಂದು ಅತ್ಯಾಚಾರ ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ! ಇಪ್ಪತ್ನಾಲ್ಕು ವರ್ಷದ ಹುಡುಗಿಯೊಬ್ಬಳು ರಾಘು ಸ್ವಾಮಿ ತನ್ನನ್ನು ರಾಮನ ಹೆಸರಲ್ಲಿ ಭಯಗ್ರಸ್ತಗೊಳಿಸಿ 'ಹಾಳು ಮಾಡಿದ' ಹೇಯ-ಬರ್ಬರ ಪುರಾಣ ಹೊರಹಾಕಿದ್ದಾಳೆ. ಚೋರ ಗುರುವಿನ ಚಾಂಡಾಲ ಶಿಷ್ಯರು ಗರ ಬಡಿದಂತಾಗಿದ್ದಾರೆ.

ಆಕೆ 'ಪ್ರಬಲಾ'

ಉತ್ತರ ಕನ್ನಡ ಜಿಲ್ಲೆಯ ಮಲೆನಾಡಿನ ದಟ್ಟ ಕಾನನದಲ್ಲಿ ಹುಟ್ಟಿ ಬೆಳೆದ ಆಕೆಯ ಹೆಸರು 'ಪ್ರಬಲಾ' ಎಂದಿಟ್ಟುಕೊಳ್ಳೋಣ. ದುರ್ಗಮ ಕಾಡಿನ ನಟ್ಟ ನಡುವಿನ ಆಕೆಯ ಊರಲ್ಲಿರುವುದು ಕೆಲವೇ ಕೆಲವು ಸ್ವ-ಜಾತಿ ಹವ್ಯಕರ ಮನೆಗಳು. ಅಪ್ಪನಿಗೆ ಅಂಗೈ ಅಗಲದ ಅಡಿಕೆ ತೋಟ ಬಿಟ್ಟರೆ ಜೀವ ನಿರ್ವಹಣೆಗೆ ಬೇರೇನಿಲ್ಲ. ಕಡು ಬಡತನದ ಕುಟುಂಬದ ಪ್ರಬಲಾಳನ್ನು ಆಕೆಯ ಅಪ್ಪ ರಾಮಚಂದ್ರಾಪುರ ಮಠ ನಡೆಸುವ ಸಾಗರದ ಚದುರವಳ್ಳಿಯ ಹೈಸ್ಕೂಲಿಗೆ ಸೇರಿಸಿದ್ದರು. ರಾಮಚಂದ್ರಾಪುರ ಮಠಕ್ಕೆ ಅಪಾರ ಭಯ-ಭಕ್ತಿಯಿಂದ ನಡೆದುಕೊಳ್ಳುವ ಪ್ರಬಲಾಳ ಕುಟುಂಬ ರಾಘು ಸ್ವಾಮಿ ತಮ್ಮ ಮನೆ ಮಗಳನ್ನು ಕಾಳಜಿಯಿಂದ ಕಾಪಾಡುತ್ತಾರೆ, ಅನ್ನ-ಶಿಕ್ಷಣ ಕೊಡುತ್ತಾರೆಂದು ನಂಬಿತ್ತು!

ಆದರೆ ತೆವಲುಗಾರ ರಾಘುನಿಂದ ಆಗಿದ್ದು ಮಾತ್ರ ವಿಶ್ವಾಸದ್ರೋಹ. ಎಂಟನೇ ತರಗತಿಯಲ್ಲಿದ್ದಾಗಲೇ ಏನೂ ಅರಿಯದ ಈ ಪುಟ್ಟ ಬಾಲಕಿ ಮೇಲೆ ಕಾಮುಕ ರಾಘುನ ಕೆಟ್ಟ ಕಣ್ಣು ಬಿದ್ದಿತ್ತು! ಪ್ರಬಲಾ ಕಂಡಾಗೆಲ್ಲಾ ಈತನ ಹುಚ್ಚು ವಿಪರೀತ ಕೆರಳುತ್ತಿತ್ತು. ಆಕೆಯನ್ನು ಕರೆದು ಮುದ್ದು-ಮುದ್ದು ಮಾತಾಡಿ ಮರಳು ಮಾಡುತ್ತಿದ್ದ. ವಿಶೇಷ ಕಾಳಜಿ ತೋರಿಸುತ್ತಿದ್ದ. ಮೈ-ಕೈ ಮುಟ್ಟಿ ವಿಕೃತಾನಂದ ಅನುಭವಿಸುತ್ತಿದ್ದ. ವಿದ್ಯಾಭ್ಯಾಸ ಹೇಗೆ ನಡೆಯುತ್ತಿದೆ ಎಂದು ವಿಚಾರಿಸುವ ನೆಪದಲ್ಲಿ ವಿಕಾರವಾಗಿ ವರ್ತಿಸುತ್ತಿದ್ದ. ರಾಘುನ ನೀಚತನ ಅರಿವಾಗದ ಪ್ರಬಲಾ ದೊಡ್ಡವಳಾಗುವುದನ್ನೇ ಆತ ಕಾಯುತ್ತಿದ್ದ!

ಕಾಮನ ಅವತಾರ

ಹಸಿದ ತೋಳದಂತಾಗಿದ್ದ ರಾಘು ಅಮಾಯಕ ಪ್ರಬಲಾಳ ಮೇಲೆರಗಲು ಸಮಯ ಸಾಧಿಸುತ್ತಲೇ ಇದ್ದ. ಪ್ರಬಲಾ ಹತ್ತನೇ ತರಗತಿ ಸೇರಿ ತಿಂಗಳೆರಡಷ್ಟೇ ಆಗಿತ್ತು. ಅಂದ ಹಾಗೆ ಆಗಾಕೆಗೆ 16ನೇ ವರ್ಷ. ಇದೇ ಸುಸಮಯವೆಂದುಕೊಂಡ ರಾಘು ಪಂಚಾಂಗ ತೆಗೆದು ಮುಹೂರ್ತ ಇಟ್ಟಿದ್ದಾನೆ. ಅದು 2006ನೇ ಇಸ್ವಿ. ರಾಘು ಹೊಸನಗರದ ಹೆಡ್ಡಾಫೀಸಿನಲ್ಲೇ ಚಾತುರ್ಮಾಸ ಲಹರಿ ಶುರು ಹಚ್ಚಿಕೊಂಡಿದ್ದ. ಆ ಸಂದರ್ಭದಲ್ಲಿ ಚದುರವಳ್ಳಿಯ ಶ್ರೀಭಾರತಿ ವಿದ್ಯಾನಿಕೇತನದ ಹುಡುಗಿಯರು ಗುರುಸೇವೆಗೆಂದು ಮಠಕ್ಕೆ ಬರುತ್ತಿದ್ದರು. ಅದರಲ್ಲಿ ಪ್ರಬಲಾಳೂ ಇದ್ದಳು.

ರಾಘು ಬೇಕೆಂತಲೇ ಪ್ರಬಲಾಳ ಮುಖಾಮುಖಿ ಆಗುತ್ತಿದ್ದ. ಹುಚ್ಚು ನಗೆ ಚೆಲ್ಲುತ್ತಿದ್ದ. ವಿದ್ಯಾಭ್ಯಾಸದ ಬಗ್ಗೆ ವಿಚಾರಿಸುತ್ತಿದ್ದ ಕಾಮವಿಕಾರದಿಂದ ಚಡಪಡಿಸುತ್ತಿದ್ದ ಅಂತೂ ಒಂದು ದಿನ ಮುಸ್ಸಂಜೆ ಹೊತ್ತಲ್ಲಿ ಆಕೆಯನ್ನು ಉಪಾಯವಾಗಿ ತನ್ನ ಖಾಸಗಿ ಕೋಣೆಗೆ ಕರೆಸಿಕೊಂಡೇ ಬಿಟ್ಟ ರಕ್ಕಸ ರಾಘು. ಕೋಣೆಯ ಬಾಗಿಲು ಜಡಿದು ಆಕೆಯನ್ನು ಅಪ್ಪಿ ಮುದ್ದಾಡುತ್ತ ಪ್ರೀತಿ-ವಿಶ್ವಾಸದ ನಾಟಕ ನಡೆಸಿದ. "ಈಗ ನಾವು ಚಾತುರ್ಮಾಸ ವ್ರತದಲ್ಲಿದ್ದೇವೆ... ಈಗ ನಾವು ಎಲ್ಲವನ್ನೂ ಶ್ರೀರಾಮನ ಪ್ರೇರಣೆಯಿಂದಲೇ ಮಾಡುತ್ತೇವೆ... ಶ್ರೀರಾಮನ ಅವತಾರವೇ ಆಗಿರುತ್ತೇವೆ... ರಾಮನ ಅಪ್ಪಣೆಯಂತೆಯೇ ನಾವು ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದೇವೆ... ನಿನ್ನ ಜಾತಕದಲ್ಲಿ ಕೆಲವು ದೋಷಗಳಿವೆ... ಅದನ್ನು ಪರಿಹರಿಸಲು ರಾಮ ಪ್ರೇರೇಪಿಸಿದಂತೆ ನಾವು ನಡೆದುಕೊಳ್ಳುತ್ತೇವೆ..." ಎನ್ನುತ್ತ ಉನ್ಮತ್ತನಾದ ರಾಘು ಆಕೆಯನ್ನು ಬರಸೆಳೆದುಕೊಂಡ.

ತನ್ನ ಪೀಠಕ್ಕೆ ಎಳೆದುಕೊಂಡ ಪ್ರಬಲಾಳನ್ನು ರಾಘು ಅನಾಮತ್ತು ಎತ್ತಿ ತೊಡೆ ಮೇಲೆ ಕೂರಿಸಿಕೊಂಡ. ಗಾಬರಿಗೆ ಬಿದ್ದ ಪ್ರಬಲಾಳನ್ನು ರಾಮನ ಹೆಸರು ಬಳಸಿ ರಮಿಸಿದ. "ಹೆದರಬೇಡ... ರಾಮನ ಪ್ರೇರಣೆಯಿದು... ರಾಮನೇ ಹಾಗೆ ಮಾಡುತ್ತಿದ್ದಾನೆ..." ಎಂದು ಮನ್ಮಥಲೀಲೆ ಪ್ರಯೋಗಿಸಿದ. "ರಾಮನ ಅನುಗ್ರಹದಿಂದ ನಿನ್ನ ಜಾತಕದ ದೋಷಗಳೆಲ್ಲವೂ ಪರಿಹಾರವಾಗುತ್ತದೆ... ನಾನೇನು ಮಾಡಿದರೂ ನೀನು ಪ್ರತಿರೋಧ ಒಡ್ಡದೆ ಸಹಕರಿಸಿದರೆ ಮಾತ್ರ...." ಎಂದು ಆಧ್ಯಾತ್ಮಿಕ ಲೈಂಗಿಕ ಪ್ರವಚನ ಬಿಗಿದ. ಆ ಮುಗ್ಧ ಹುಡುಗಿಗೆ ಎಲ್ಲವೂ ಅಯೋಮಯ. ಮೂಕವಿಸ್ಮಿತಳಾದಳು. ಆಕೆಯ ಬಟ್ಟೆ ಕಳಚಿದ ರಾಘು. ತಾನೂ ನಿರ್ವಾಣ ಸ್ಥಿತಿಗೆ ಬಂದ. "ಸ್ವಾಹಾ" ಮುಗಿದುಹೋಯಿತು!!

ಎಲ್ಲ ಮುಗಿದ ಮೇಲೆ ಹೈರಾಣಾಗಿ ಕುಂತಿದ್ದ ಪ್ರಬಲಾಳನ್ನು ಜಾತಕದ ದೋಷ ಈಗ ಪರಿಹಾರ ಆಗುತ್ತದೆ ಎಂದು ಧೈರ್ಯ ತುಂಬಿದ. "ನಡೆದ ಘಟನೆ ಯಾರಿಗೂ ಹೇಳಬೇಡ... ಹೇಳಿದರೆ ಶ್ರೀರಾಮನ ಶಾಪ ತಟ್ಟುತ್ತದೆ... ನಿನಗೆ ಒಳ್ಳೆಯದಾಗುವುದಿಲ್ಲ..." ಎಂದು ದೈವಭೀತಿ-ಗುರು ಭೀತಿಯೊಡ್ಡಿ ಬಟ್ಟೆ ತೊಡಲು ಹೇಳಿದ. ಹೇಗ್ಹೇಗೋ ಚೇತರಿಸಿಕೊಂಡ ಪ್ರಬಲಾಳನ್ನು ರಾಘು ಬಾಗಿಲು ತೆರೆದು ಕಳಿಸಿದ. ಕಂಬನಿಗರೆಯುತ್ತ ಹೊರಗೆ ಬಂದಳು. ಹೊರಗಿರುವ ರಾಘುನ ಅನುಯಾಯಿಗಳಿಗೆ ಗುರುಗಳು 'ಕನ್ಯಾ ಸಂಸ್ಕಾರ' ಮಾಡಿ ಕಳಿಸಿದ್ದು ಗೊತ್ತಾಯಿತು. ಆದರೂ ಆಕೆಗೆ ಸಮಾಧಾನಿಸಿದರು. ಗುರುಗಳ ಕಂಡು ಬರುವಾಗ ಅಳಬಾರದು ಎಂದರು. ಗುರುವಿನ ಕಾಮಾವತಾರ ಕಂಡುಬಂದಿದ್ದ ಪ್ರಬಲಾಳಿಗೆ ಮಾತೇ ಹೊರಬರಲಿಲ್ಲ...

ಖಿನ್ನತೆಗೆ ಜಾರಿದ ಪ್ರಬಲಾ

ನಂಬಿದ್ದ ಗುರುವೇ ಅತ್ಯಾಚಾರ ಮಾಡಿದಾಗಿಂದ ಪ್ರಬಲಾ ಮಾನಸಿಕ-ದೈಹಿಕವಾಗಿ ತತ್ತರಿಸಿಹೋದಳು. ನಿಧಾನಕ್ಕೆ ಖಿನ್ನತೆಗೆ ಜಾರಿದಳು. ಯಾರೊಂದಿಗೂ ಬೆರೆಯದೇ ರೋದಿಸಿದಳು. ಆಗಾಗ ಆತ್ಮೀಯರೊಂದಿಗೆ ಫೋನಿನಲ್ಲಿ ಸಂಕಟ ತೋಡಿಕೊಂಡಳು. ಆದರೆ ಗುರುವಿನಿಂದಾದ ಘಾತಕದ ಬಗ್ಗೆ ವಿವರವಾಗಿ ಹೇಳಲಾಗಲಿಲ್ಲ. ಹೇಳಿದರೆ ನಂಬುವವರ್ಯಾರು? ಹೇಳಿದರೆ ತನ್ನ ಜೀವದ ಗತಿ ಏನಾದೀತು? ಎಂಬಿತ್ಯಾದಿ ಆತಂಕ-ಭಯ-ಧಾವಂತದಲ್ಲಿ



ಚಡಪಡಿಸಿದಳು. ಮನೆಗೆ ತಿರುಗಿ ಹೋಗೋಣವೆಂ... ಅಲ್ಲಿ ಕಿತ್ತು ತಿನ್ನುವ ಬಡತನ. ಗುರು ಶಾಪದಿ... ಕುಟುಂಬಕ್ಕೇನಾದರೂ ತೊಂದರೆ ಆದೀತೆಂಬ ಭ... ಮಠದ ತಾಲೀಬಾನಿಗಳು ಹಲ್ಲೆ ಮಾಡುವ ಹೆದರಿಕೆ...

ಈ ಚಿಂತೆಯಲ್ಲಿ ಪ್ರಬಲಾ ಆಗಾಗ ಎಚ್ಚರ ತ... ಸ್ಥಿತಿ ತಲುಪಿದಳು. ಮಾನಸಿಕವಾಗಿ ಜರ್ಜರಿತಳಾದ... ಇದು ರಾಘುನ ಗಮನಕ್ಕೆ ಬಂತು. ಆಕೆ ಚದುರ... ಶಾಲೆಯಲ್ಲೇ ಇದ್ದರೆ ತನ್ನ ಬಂಡವಾಳ ಬಯಲಾದೀತೆ... ಚಡಪಡಿಸಿದ. ಆಗಾತ ಕೇರಳದ ಕಾಸರಗೋಡು ಜಿಲ್... ಬದಿಯಡ್ಕದ ಮುಜುಂಗಾವಿನಲ್ಲಿರುವ ಮಠದ ಶಾ... ಪ್ರಬಲಾಳನ್ನು ರವಾನಿಸಿದ. ಅಲ್ಲಾಕೆಗೆ ಇಲಾಜು ಮಾಡಿ... ಯಾವ್ಯಾವುದೋ ವೈದ್ಯರಲ್ಲಿ ತೋರಿಸಿ ಆಕೆಗೆ 'ಹಳೆಯ... ಮರೆವಂತೆ ಮಾಡುವ ಹಿಂಸಾತ್ಮಕ ಟ್ರೀಟ್‌ಮೆಂ... ಮಾಡಿದ್ದಾನೆಂಬ ಗುಲ್ಲು ಬಹಳ ಕಾಲದಿಂದ ಮ... ಪರಿವಾರದಲ್ಲಿದೆ. ಪ್ರಬಲಾಳನ್ನು ಗುರುವಿನ 'ಗುಲಾ... ಎಂದೇ ಕುಖ್ಯಾತಳಾಗಿರುವ ಈಶ್ವರಿ ಬೇರ್ಕಡವು ಎ... ನಲ್ಲತ್ತೈದರ ಆಸುಪಾಸಿನ ಚೆಂದದ ಲಲನಾಮಣಿ... ಉಸ್ತುವಾರಿಯಲ್ಲಿಟ್ಟ. ಈ ಈಶ್ವರಿಯಮ್ಮ ಮಠದ ಮಹಿ... ತಾಲಿಬಾನಿಗಳ ಲೇಡಿ ಲಾಡನ್ ಎಂದೇ ಪರಿಚಿತ... ಗುರುವಿಗೆ ಈಕೆಯನ್ನು ಕಂಡರೆ ಒಂಥರಾ ಸೆಳೆತವೆಂಬ... ಮಠದ ಗಿಂಡಿಮಾಣಿಗಳಿಗೆಲ್ಲ ಗೊತ್ತಿರುವ ಕತೆ!!


ಗಿಂಡಿಮಾಣಿಗೆ ಪಾಣಿಗ್ರಹಣ

ಬದಿಯಡ್ಕದ ವಿದ್ಯಾಪೀಠದಲ್ಲಿ ಪ್ರಬಲಾಳ ಹ... ಈಯತ್ತೆ ವ್ಯಾಸಂಗ ನಡೆಯಿತು. ತುಂಬ ಮುತುವರ್ಜಿಯಿ... ಆಕೆಯನ್ನು ರಾಘು ಅಲ್ಲಿಗೆ ಕಳಿಸಿದ್ದ. ಆಗಾಗ ಹೈಸ್ಕೂ... ಹೆಡ್‌ಮಾಸ್ತರ್‌ರ ಫೋನಿಗೆ ರಾಘು ಫೋನು ಮ... ಪ್ರಬಲಾಳಿಗೆ ಸಮ್ಮೋಹಿನಿ ನಡೆಸಿದ. "ನಿ... ಒಳ್ಳೇದಾಗುತ್ತದೆ... ಜಾತಕದ ದೋಷ ಪರಿಹಾರವಾಗುತ್ತಿ... ಹೆದರಬೇಡ... ಅಳಬೇಡ... ಧೈರ್ಯವಾಗಿರು... ನಾನಿ... ನಿನಗಾಗಿ..... ಆದರೆ ನಡೆದ 'ಘಟನೆ' ಬಗ್ಗೆ ಮ... ಯಾರೆದುರೂ ಬಾಯಿ ಬಿಡಬೇಡ... ತಿಳಿಸಿದರೆ ... ಸರ್ವನಾಶವಾಗುತ್ತದೆ...." ಎಂದು ಎಚ್ಚರಿಕೆ ನೀಡು... ರಾಘುನ ಈ ಪರೋಕ್ಷ ಬ್ಲ್ಯಾಕ್‌ಮೇಲ್‌ನಿಂದ ಪ್ರಬ... ಸಂಕಟ ಹೆಚ್ಚಾಯಿತು.

ರಾಘು ತಾನು ಬಳಸಿದ ಹುಡುಗಿಯರನ್ನು ಮ... ಪೆದ್ದು ಗಿಂಡಿ ಮಾಣಿಗಳಿಗೆ ಕಟ್ಟಿ ತನ್ನ ಹಿಡಿತದಲ್ಲಿಟ್ಟುಕೊ... ಬೇಕಾದಾಗ ಭೋಗಿಸಲು ಅನುಕೂಲವಾಗುವ... ತಂತ್ರಗಾರಿಕೆ ತುಂಬ ನಾಜೂಕಾಗಿ ನಡೆಸಿಕೊಂ... ಬಂದಿದ್ದಾನೆ. ಹೀಗಾತ ಹತ್ತಾರು ಗಿಂಡಿಮಾಣಿಗಳಿಗೆ ಮದು... ಮಾಡಿ ಅವರ ಹೆಂಡಂದಿರ ಸಖ್ಯ ಇಟ್ಟುಕೊಂಡಿದ್ದಾನೆಂಬ... ಮಠದ ಪರಿವಾರಕ್ಕೆಲ್ಲ ಗೊತ್ತಿರುವ ಗುಟ್ಟು! ಇದೇ '... ನೀತಿ'ಯಂತೆ ಯಾವುದಾದರೂ ಪಾಪದ ಪ್ರಾ... ಪ್ರಬಲಾಳನ್ನು ಕಟ್ಟುವ ಸ್ಕೆಚ್ ರಾಘು ತುಂಬ ಹಿಂದೆ... ಹಾಕಿಕೊಂಡಿದ್ದ. ಆಕೆಗೆ 18 ತುಂಬುವುದನ್ನೇ ... ಕಾಯುತ್ತಿದ್ದ. ಭಟ್ಕಳದ ಮಾರುಕೇರಿಯ ಮಂಜುನ... ಹೆಬ್ಬಾರ್ ಎಂಬ ಎಡವಟ್ಟು ಗಿಂಡಿ ಮಾಣಿಯ... ಮದುಮಗನಾಗಿ ರೆಡಿ ಮಾಡಿಟ್ಟುಕೊಂಡಿದ್ದ ರಾಘು...

ಪ್ರಬಲಾ ಪಿಯುಸಿ ವ್ಯಾಸಂಗಕ್ಕೊಂದು ಗೋಕರ್ಣ... ಜೂನಿಯರ್ ಕಾಲೇಜು ಸೇರಿದಳು. ಈ ಶಿಕ್ಷಣ... ರಾಘುನೇ ವ್ಯವಸ್ಥೆ ಮಾಡಿದ್ದ. ಆಗಾತನ ಸವಾರಿ ಗೋಕ...

ಪ್ರಬಲ...



ರಗಳೆ ರಾಘುನ ರಕ್ಷಕರ್ಯಾರು?

ರಾಘು ಕೇಸಲ್ಲಿ ಸಿಐಡಿ ದಾರಿ ತಪ್ಪಿದಂತೆ ಎಡವುತ್ತಿರುವುದು ಅದ್ಯಾಕೋ ಸಿದ್ದು ಸರ್ಕಾರದ ಬಗ್ಗೆಯೇ ಜನರಲ್ಲಿ ಅನುಮಾನ ಮೂಡುವಂತೆ ಮಾಡಿದೆ. ಕೇಂದ್ರದ ಚೆಡ್ಡಿ ಸರ್ಕಾರದ ಆಯಕಟ್ಟಿನ ಮಂದಿಯೇ ರಾಘುನ ವಿರುದ್ಧ ತಿರುಗಿ ಬಿದ್ದಿರುವಾಗ ರಾಜ್ಯದ ಕಾಂಗ್ರೆಸ್ ಸರ್ಕಾರ ಯಾಕೆ ಮೃದುವಾಗಿದೆ ಎಂಬುದೇ ಮಿಲಿಯನ್ ಡಾಲರ್ ಅನುಮಾನ. ಆರೆಸ್ಸೆಸ್ ಅಂತೂ ರಾಘುವನ್ನು ಪೀಠದಿಂದ ಎಳೆದು ಹಾಕುವತನಕ ವಿಶ್ರಮಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದೆ. ಕೇಂದ್ರದ ಮಹಿಳಾ ಆಯೋಗ ಸಿಐಡಿಗೆ ತಾಪರಾಕಿ ಬಾರಿಸಿ ಹೋಗಿದೆ.

ರಾಘುವಿಗೆ ಇಷ್ಟು ದಿನ ಬೆಂಗಾವಲಾಗಿ ನಿಂತು ಅಧಿಕಾರಿಗಳ ಮಟ್ಟದಲ್ಲಿ ಲೇವಾದೇವಿ ನಡೆಸುತ್ತಿದ್ದ ಸಂಪಾದಕನೊಬ್ಬ ಮಾಜಿಯಾಗಿದ್ದಾನೆ. ಆತನ ಮಾತೂ ಈಗ ಎಲ್ಲೂ ನಡೆಯುತ್ತಿಲ್ಲ. ಹಾಗೆಯೇ ರಾಘು ಪ್ರೇಮಲತಾ ಪ್ರಕರಣದಲ್ಲಿ ಜೈಲು ಪಾಲಾಗುವ ಹಂತ ತಲುಪಿದಾಗ ಹಿರಿಯ ಹವ್ಯಕ ಐಎಎಸ್ ಅಧಿಕಾರಿಯೊಬ್ಬರು ಆತನಿಗೆ ನೆರವಾಗಿದ್ದರು. ನಡುರಾತ್ರಿ ಸಿಎಂಗೆ ಫೋನಾಯ್ಸಿ ಬಂಧನ ಆಗದಂತೆ ಕಾಪಾಡಿ ಎಂದು ಗೋಗರೆದಿದ್ದರು.

ಈಗ ಅದೇ ಅಧಿಕಾರಿಗೆ ಜ್ಞಾನೋದಯವಾಗಿದೆ. ತಾನು ಕೋಟಿಗಟ್ಟಲೆ ಪಾದ ಕಾಣಿಕೆ ಬರುವಂತೆ ಮಾಡಿದ್ದು ರಾಘುನ ರಂಗೀಲಾ ಮೋಜಿಗಾ? ಅಸಹಾಯಕ ಹುಡುಗೀರ ಅತ್ಯಾಚಾರಕ್ಕಾ ಎಂಬ ಪಾಪಪ್ರಜ್ಞೆ ಅವರನ್ನು ಕಾಡುತ್ತಿದೆ. ಈಗ ಇದೇ ಅಧಿಕಾರಿ ಪ್ರಬಲಾ ಪ್ರಕರಣದಲ್ಲಾದರೂ ರಾಘು ಜೈಲು ಸೇರಲೆಂದು ಶ್ರೀರಾಮಚಂದ್ರನಲ್ಲಿ ಪ್ರಾರ್ಥನೆ ಇಟ್ಟಿದ್ದಾರಂತೆ.

ಇನ್ನಾದರೂ ಸಿದ್ದು, ಜಾರ್ಜ್ ಮತ್ತು ಅವರ ಸಲಹೆಗಾರ ಕೆಂಪಯ್ಯ, ತಮ್ಮ ಪಂಚೇಂದ್ರಿಯ ಇಂಗಿಲ್ಲ ಎಂದು ಸಾಬೀತುಪಡಿಸುವರಾ? ಎಷ್ಟು ಬೇಗ ರಾಘು ಜೈಲು ಪಾಲಾಗುತ್ತಾನೋ ಅಷ್ಟು ಬೇಗ ಹವ್ಯಕ ಹೆಂಗಸರು ಸುರಕ್ಷಿತ!



ಅಶೋಕೆಯ ಶಾಖಾಮಠಕ್ಕೆ ಸ್ಥಳಾಂತರಗೊಂಡಿತ್ತು. ...ೆ ಗೋಕರ್ಣದ ಕೋಟ್ಯಂತರ ಆಸ್ತಿಯ ...ಲೇಶ್ವರ ದೇವಸ್ಥಾನ ಆತನ ಜೋಳಿಗೆಗೆ ಯಡ್ಡಿ ... ಹಾಕಿಯಾಗಿತ್ತು ಆ ಹೊತ್ತಿಗೆ. ರಾಘುನ ...ಯಿಂದ ಮೋಕ್ಷ ಪಡೆಯುವ ಕಾತುರದಲ್ಲಿ ಪ್ರಬಲಾ ...ುತ್ತಿದ್ದಳು. ಆದರೆ ರಾಘು ಆಕೆಗೆ ಮನೆಗೆ ಹೋಗಲು ... ಆಕೆ ಮಠದಿಂದ ಹೊರಹೋದರೆ ತನ್ನ ...ಚಾರ ಬಹಿರಂಗವಾಗುವ ಭಯ ಒಂದೆಡೆಯಾದರೆ, ...ಂದೆಡೆ ಪುಕ್ಕಟೆ ಸುಖಕ್ಕೆ ಸಂಚಕಾರ ಬರುತ್ತದೆಂಬ ... ಒಟ್ಟಿನಲ್ಲಿ ಪ್ರಬಲಾ ಅನುಭವಿಸಿದ ನರಕಯಾತನೆ ...ರದು.

...ಮ ದಿನ ಪ್ರಬಲಾಳ ತಂದೆಯನ್ನು ರಾಘು ಮಠಕ್ಕೆ ...ಂಡ. "ನಿನ್ನ ಮಗಳೀಗ ಮದುವೆಯ ವಯಸ್ಸಿಗೆ ...ದ್ದಾಳೆ ಗೊತ್ತಿದೆಯಾ? ಆಕೆಗೆ ಮದುವೆ ...ವುದಿಲ್ಲವಾ?" ಎಂದಿದ್ದಾನೆ ಗುರುವರ್ಯ. ಈ ...ತ ಗುರು ವಾಣಿಯಿಂದ ಕಂಗಾಲಾದರು ಪ್ರಬಲಾಳ ...ಗುರುಗಳೆ ಮದುವೆ ಮಾಡುವ ತಾಕತ್ತು ನನ್ನಲ್ಲಿಲ್ಲ... ...ಮದುವೆ ವಿಚಾರ ಇಲ್ಲ... ಇನ್ನಷ್ಟು ದಿನ ಆಕೆ ...ಲಿ" ಎಂದರು. ತಕ್ಷಣ ತೀಕ್ಷ್ಣ ನೋಟ ಬೀರಿದ "ಹಣ ನಾವೇ ವ್ಯವಸ್ಥೆ ಮಾಡ್ತೇವೆ... ಗಂಡನ್ನು ...ಕ್ಸ್ ಮಾಡ್ತೇವೆ.... ನೀನು ಧಾರೆಯೆರೆದರೆ ಸಾಕು..."

...ಕ್ಕೆ ಆ ಬಡ ಬ್ರಾಹ್ಮಣ ಒಪ್ಪಲಿಲ್ಲ. ಆಗ ರಾಘುನ ...ಪ ಅಸ್ತ್ರ ಪ್ರಯೋಗವಾಯಿತು. "ಇಷ್ಟು ದಿನ ...ಗಳಿಗೆ ಹೊಟ್ಟೆಗೆ-ಬಟ್ಟೆಗೆ ಕೊಟ್ಟಿದ್ದೇವೆ... ವಿದ್ಯೆ ...ವೆ.., ಮಠದ ಋಣ ಮರೆಯಬೇಡ... ನಾವು ...ತೆ ಕೇಳು... ಇಲ್ಲದಿದ್ದರೆ ನಿನ್ನ ಕುಟುಂಬಕ್ಕೆ ...ಪ ತಟ್ಟುತ್ತದೆ... ಗೊತ್ತಿರಲಿ...!!" ಎಂದು ಅಬ್ಬರಿಸಿದ. ...ಗಳು ಅಡಕತ್ತರಿಯಲ್ಲಿ ಸಿಕ್ಕ ಅಡಿಕೆಯಂತಾದರು. ...ಮನಸ್ಸಿನಿಂದ ಮದುವೆಗೆ ಒಪ್ಪಿದರು. ರಾಘು ...ಡಿಟ್ಟುಕೊಂಡಿದ್ದ ಮಂಜುನಾಥ ಹೆಬ್ಬಾರ್ ಎಂಬ ...ಗೆ ಅಸಹಾಯಕ ಪ್ರಬಲಾಳನ್ನು ಕಟ್ಟಿ ವಾಲಗ ...!

...ಂದೆತ್ತ ಕ್ಷಣ ತಾಳಿ ಹಾಕಿ ನೋಡಿದರೂ ...ನಾಥನಿಗೆ ಪ್ರಬಲಾಳ ಗಂಡನಾಗುವ ಯಾವ ...ತೆಯೂ ಇಲ್ಲದಿರುವುದು ಎಂಥವನಿಗೂ ...ಗುತ್ತದೆ. ರೂಪ-ವಿದ್ಯೆ-ಬುದ್ಧಿ-ವಯಸ್ಸು ...ದರಲ್ಲೂ ಮಂಜು ಪ್ರಬಲಾಳಿಗೆ ಅನುರೂಪನೇ ...ದು ಸ್ವಾಮಿ 'ಕರ್ಮ'ವಷ್ಟೇ!!

'ಗುರುಗಳಿಗೆ ಸಹಕರಿಸು!'

...ಳ ಮದುವೆ ಮೇ 27, 2009ರಂದು ರಾಘುನ ... ನಡೆದು ಹೋಯಿತು. ಆದರೆ ಒಂದು ದಿನವೂ ...ದಿಯಿಂದ ದಾಂಪತ್ಯ ನಡೆಸಲಾಗಲಿಲ್ಲ. ರಾಘುನ ...ದಾಸ್ಯದ ಭಯ ಆಕೆಯನ್ನು ಕಾಡುತ್ತಲೇ ಇತ್ತು. ...ಆತನ ಆಹ್ವಾನ ಬರುವುದೋ ಎಂಬ ಭಯ. ... ಗುರುಗಳ ದಾಸಾನುದಾಸ! ಮದುವೆಯಾದ ... ದಿನದಲ್ಲಿ "ನಿನ್ನನ್ನು ಗುರುಗಳು ಗುಳುಂ" ...ರೆಂದು ಹಂಗಿಸತೊಡಗಿದ್ದ ಈ ಪತಿರಾಯ! ಪ್ರಬಲಾಳನ್ನು ಸ್ವಾಮಿ ಕೆಡಿಸಿದ್ದು ಗೊತ್ತಿತ್ತು, ಹೀಗಾಗಿ ...ಗ ಆಕೆಯನ್ನು ಹಂಗಿಸುವುದು, ಹೀಯಾಳಿಸುವುದು

...ಗೆ ವಿಪರೀತ ಅನುಮಾನ. ಸ್ವಾಮಿ ಬಿಟ್ಟು ಪ್ರಬಲಾ ...ಲೇ ಹಾಳಾಗಬಾರದೆಂಬ ಗುರುನಿಷ್ಠೆ ಆತನದು. ...ಆಕೆ ಯಾರೊಂದಿಗೆ ಮಾತಾಡಿದರೂ ರೇಗಾಡುತ್ತಿದ್ದ. ...ಗಳು ಸರಿ ಇಲ್ಲ" ಎಂದು ಪ್ರಬಲಾ ಹೇಳಿದರೆ ...ಕೊಳ್ಳುತ್ತಲೇ ಇರಲಿಲ್ಲ. ಬದಲಿಗೆ "ಗುರುಗಳು ... ನೀನು ಹೋಗಿ 'ಸೇವೆ' ಮಾಡಿ ಬರಬೇಕು... ...ಗಿನ ಆಗುವಂತೆ ಮಾಡಬಾರದು... ಗುರುಗಳಿಗೆ ...ಕು..." ಎಂದಾತ ತಾಕೀತು ಬೇರೆ ಮಾಡುತ್ತಿದ್ದ. ...ದ ಗಂಡನ ಜತೆ ಆಕೆಗೆ ಬಾಳ್ವೆ ಮಾಡುವುದು ... ಇಲ್ಲ. ಗಿರಿನಗರದ ಬಾಡಿಗೆ ಮನೆಯಲ್ಲಿದ್ದ ... ಬಡ ... ಆಕೆ ಗುರುಗಳಿಗೆ

ದೂರು ಕೊಡಲು ಹೋದರೆ ಅದು ಪೀಠದಿಂದ ಪರಿಗಣನೆಯೇ ಆಗುತ್ತಿರಲಿಲ್ಲ...

ರಾಘು ಅಕ್ರಮವಾಗಿ ಕಬ್ಜಾ ಮಾಡಿಕೊಂಡಿರುವ ಗಿರಿನಗರದ ಗಣೇಶ ದೇವಸ್ಥಾನದ ಅರ್ಚಕನಾಗಿ ಮಂಜುನಾಥನಿಗೆ ಪ್ರಮೋಷನ್ ಮಠಾಡಳಿತ ಕೊಟ್ಟಿತು, ಆಕೆ ಯಕ್ಷಗಾನ ಕಲಿತಳು. ಟಿವಿ ಧಾರಾವಾಹಿಗಳಲ್ಲಿ ಅವಕಾಶ ಪಡೆದಳು. ಯಕ್ಷಗಾನ ಕಲಾವಿದನಾದ ತನ್ನ ಚಿಕ್ಕಮ್ಮನ ಗಂಡನಿಂದ ಪ್ರಬಲಾ ಯಕ್ಷಗಾನದ ದೀಕ್ಷೆ ಪಡೆದಳು. ಈ ನಡುವೆ ಹಳಿ ತಪ್ಪಿದ ದಾಂಪತ್ಯ ಸರಿ ದಾರಿಗೆ ತರಲು ಮಠದಲ್ಲಿ, ಆಕೆಯ ತವರಲ್ಲಿ ಪಂಚಾಯ್ತಿಕೆಗಳು ನಡೆದವು. ರಾಘುನ ಕಳ್ಳಾಟದಿಂದ ಪ್ರಬಲಾಳ ಸಂಸಾರ ಸರಿಯಾಗಲೇ ಇಲ್ಲ. ಹೀಗೆ ದಾಂಪತ್ಯ ವಿಷಮಿಸಿದರೆ ತನಗೆ 'ಸುಖಯೋಗ' ಎಂಬುದು ರಾಘುನ ಲೆಕ್ಕಾಚಾರ.

ವಿಚ್ಛೇದನ ಕೊಡಿಸುತ್ತೇನೆ

ಪ್ರಬಲಾಳಿಗೆ ಒಂದು ಕಡೆ ಪಿಕ್ರೇಸ್ ಗಂಡನ ಕಿರುಕುಳ. ಮತ್ತೊಂದೆಡೆ ಗುರುಗಳ ತೆವಲಿನ ಕಿರಿಕಿರಿ. ಆಕೆಗೆ ಗಿರಿನಗರದಲ್ಲಿ ಜೀವನವೇ ಸಾಕಾಗಿಹೋಯ್ತು. ವಿಚ್ಛೇದನಕ್ಕೆ ಪ್ರಯತ್ನ ನಡೆಸಿದಳು. ಹರಾಮಿ ಹೆಬ್ಬಾರ್ ಅದಕ್ಕೆ ತಯಾರಾಗಲಿಲ್ಲ. ಜೀವನಾಂಶ ಕೊಡೆಂದರೆ ತಾನು ಬಡವನೆಂದು ಸುಳ್ಳು ಸಾಧಿಸತೊಡಗಿದ. ತವರೂರಿನ ಕೋರ್ಟಿನಲ್ಲಿ ಪ್ರಬಲಾ ಕೇಸು ಹಾಕಿದಳು. ರಾಘು ಆಕೆಯ ದಾಂಪತ್ಯದ ಕತೆ ತನಗೇನೂ ಗೊತ್ತಿಲ್ಲದಂತೆ ಸೋಗು ಹಾಕಹತ್ತಿದ. ಕೊನೆಗೆ ಆಕೆ ರಾಘುನ ಬಳಿಯೇ ಹೋಗಿ ಎಲ್ಲಾ ಹೇಳಿದಳು. "....ನಿಂಗೆ ಡೈವೋರ್ಸ್ ಕೊಡಿಸ್ತೇನೆ... ಸದ್ಯಕ್ಕೆ ಅನುಸರಿಸಿಕೊಂಡು ಹೋಗು" ಎಂದು ಮೂಗಿಗೆ ತುಪ್ಪ ಸುರಿದು ಬಳಸಿಕೊಳ್ಳಲು ಸ್ಕೆಚ್ ಹಾಕಿದ. ಗುರು ಡೈವೋರ್ಸ್ ಕೊಡಿಸ್ತಾರೆಂದು ಪ್ರಬಲಾ ನಂಬಿ ಕೂತಳು.

2012ರಲ್ಲಿ ಗಿರಿನಗರದ ಶಾಖಾಮಠದಲ್ಲಿ ರಾಘು



ಚಾತುರ್ಮಾಸ ವ್ರತಕ್ಕೆ ಕುಳಿತ ಸಮಯವದು. ಇದ್ದಕ್ಕಿದ್ದಂತೆ ಒಂದು ದಿನ ಗುರುಗಳಿಂದ ಪ್ರಬಲಾಳಿಗೆ ಬುಲಾವ್ ಬಂತು. ಡೈವೋರ್ಸ್ ಬಗ್ಗೆ ಮಾತಾಡಲು ಸ್ವಾಮೀಜಿ ಕರೆದಿದ್ದಾರೆಂದು ಆಕೆ ಸಂಭ್ರಮದಿಂದ ಹೋದಳು. ರಾಘು ಪ್ರಬಲಾಳಿಗಾಗಿ ಕಾದು ಕುಳಿತಿದ್ದ. ಆತನ ಖಾಸಗಿ ಕೊಠಡಿಗೇ ಬರುವಂತೆ ರಾಘು ಆಹ್ವಾನ ಕಳಿಸಿದ. ಡೈವೋರ್ಸ್ ಬಗ್ಗೆ ಒಂದಿಷ್ಟು ಮಾತುಕತೆ ನಡೆಯಿತು. ತನ್ನ ಮನದಿಚ್ಛೆಗೆ ವಿರುದ್ಧವಾಗಿ ಹೆಡ್ಡ ಹೆಬ್ಬಾರನಿಗೆ ತನ್ನನ್ನು ಕಟ್ಟಿದ್ದೇಕೆಂದು ಆಕೆ ಕಣ್ಣೀರು ಸುರಿಸಿದಳು. ಅದಕ್ಕಾತ ಮತ್ತದೇ ಜಾತಕ ದೋಷದ ಕಟ್ಟು ಕತೆ! ನಿನ್ನ ಜಾತಕ ದೋಷದಿಂದ ಹೀಗೆಲ್ಲಾ ತೊಂದರೆ ಆಗುತ್ತಿದೆ... ಮುಂದೆಲ್ಲ ಸರಿಹೋಗುತ್ತದೆಂದು ಬೋಂಗು ಬಿಟ್ಟ. ಅಳುತ್ತಿದ್ದ ಪ್ರಬಲಾಳ ಮುದ್ದಿಸಲು-ರಮಿಸಲು ಹೋದ.

ಗುರುವಿನ ದುರ್ಬುದ್ಧಿ ಗೊತ್ತಿದ್ದ ಪ್ರಬಲಾ ದೂರವೇ ನಿಂತಳು. ಆದರೆ ಮದೋನ್ಮತ್ತನಾಗಿದ್ದ ರಾಘು ಆಕೆಯ ಬಳಿ ಸಾರಿ ಬಂದ. ಅಪ್ಪಿ ಮುದ್ದಾಡಲು ಪ್ರಯತ್ನಿಸಿದ. ಆಕೆ ಕೊಸರಾಡಿ ತಪ್ಪಿಸಿಕೊಂಡಳು; ಪ್ರತಿರೋಧ ಒಡ್ಡಿದಳು. ಆಗಾತ ಕ್ರುದ್ಧನಾಗಿ ಆಕೆಯ ಕಾಲಿಗೆ ಬಲವಾಗಿ ಒದ್ದು ನೆಲಕ್ಕೆ ಉರುಳಿಸಿದ. ಕೆಳಗೆ ಬಿದ್ದ ಪ್ರಬಲಾಳ ಮೇಲೆರಗಿ ತೆವಲು ತೀರಿಸಿಕೊಂಡ. ರಾಘುನ ಕಾಮುಕ ದಾಳಿಯಿಂದ ಕಂಗಾಲಾದ ಆಕೆ ಒಂದೇ ಸಮನೆ ಅಳತೊಡಗಿದಳು. ರಾಘು "ಎಲ್ಲ ರಾಮನ ಪ್ರೇರಣೆಯಂತಾಗಿದೆ. ಇದಕ್ಕೆಲ್ಲ ಅಳುವುದು ಯಾಕೆ? .... ಏನೂ ಹೆದರಬೇಡ... ನಿನಗೀಗ ಮದುವೆ ಆಗಿದೆ... ಎಲ್ಲ ಸರಿಹೋಗುತ್ತದೆ.... ನಾವು ಕರೆದಾಗೆಲ್ಲಾ ಬರುತ್ತಾ ಇರಬೇಕು..." ಎಂದು ಉಪದೇಶ ಮಾಡಿ ಕಳಿಸಿದ.

ಅನಸ್ಸಗಣ್ಣಿ

ಗಿರಿನಗರದಲ್ಲಿ ಪ್ರತ್ಯೇಕವಾಗಿ ಜೀವನ ಶುರು ಹಚ್ಚಿಕೊಂಡ ಪ್ರಬಲಾ ಯಕ್ಷಗಾನ-ಟಿವಿ ಧಾರಾವಾಹಿ ಕಲಾವಿದೆಯಾಗಿ ಕೆಲಸ ಮಾಡುತ್ತಿದ್ದಳು. ತವರಿಗೆ ಆಗಾಗ ಹೋಗಿ-ಬಂದು ಮಾಡುತ್ತಿದ್ದಳು. ಊರಲ್ಲಿ ಜೀವನಾಂಶ-ಡೈವೋರ್ಸ್ ಕೇಸ್ ನಡೆಯುತ್ತಿತ್ತು. ರಾಘುನ ಕಾಮಕೂಪದಿಂದ ತಪ್ಪಿಸಿಕೊಂಡು ತನ್ನ ಪಾಡಿಗೆ ತಾನಿದ್ದ ಪ್ರಬಲಾಳ ಬದುಕಿಗೆ ಪ್ರೇಮಲತಾ ಪ್ರಕರಣದ ನಂತರ ಚಂಡಮಾರುತ ಅಪ್ಪಳಿಸಿತು. ಸಿಐಡಿಗಳು ರಾಘುನ ಏಕಾಂತ ದರ್ಶನ, ಗೃಹಿಣಿ ಸಂದರ್ಶನ, ಕನ್ಯಾಸಂಸ್ಕಾರಕ್ಕೆ ಬಲಿಯಾಗಿರುವ ಅನುಮಾನದಲ್ಲಿ ಹಲವರ ವಿಚಾರಣೆ ನಡೆಸುತ್ತಿದ್ದಾಗ ರಾಘು ಮತ್ತವನ ತಾಲಿಬಾನಿ ಪಡೆಗೆ ನಿದ್ದೆಗೆಡುಯಿತು. ಅವರಿಗೆ ಭಯವಿದ್ದಿದ್ದು ಪ್ರಬಲಾಳದು. ಆಕೆ ಸಿಐಡಿ ಎದುರು ಗುರುಗಳ ಪರಕಾಯ ಪ್ರವೇಶ ಕಥಾನಕ ಬಿಚ್ಚಿಡಬಹುದೆಂಬ ಭಯ ಮಠ ಮಾಫಿಯಾಗೆ ಕಾಡತೊಡಗಿತ್ತು. ಹೀಗಾಗಿ ರಾಘುನ ರೌಡಿ ಬಂಟರಾದ ಅರುಣ ಶ್ಯಾಮ, ಅನಂತ ಹೆಗಡೆ, ರಮೇಶ್ ಭಟ್ಟ, ಸುಧಾಕರ ಯಾನೆ ಬಿ.ಆರ್. ಸುಬ್ರಹ್ಮಣ್ಯ ಮತ್ತು ಮಧುಕರ ಆಗಾಗ ಪ್ರಬಲಾಳ ಬಾಡಿಗೆ ಮನೆಗೆ, ಆಕೆಯ ತವರಿಗೆ ಹೋಗಿ ಬೆದರಿಸಲು ಶುರು ಮಾಡಿದ್ದರು.

ನಡುರಾತ್ರಿಯೆಲ್ಲ ಆಕೆಯ ಮನೆಗೆ ಬಂದು ಅಪಹರಣಕ್ಕೆ ಈ ಪಂಚಪಾತಕಿಗಳು ಪ್ರಯತ್ನಿಸಿದರು. "ನಿನ್ನನ್ನು ಕರೆದುಕೊಂಡು ಬರಲು ಹೇಳಿದ್ದಾರೆಂದು" ಹಲವು ಬಾರಿ ಕಾಡಿದರು. ಕಳೆದ ವರ್ಷ ಸೆಪ್ಟೆಂಬರ್ 13ರಂದು ಪ್ರಬಲಾ ತೌರಿನಲ್ಲಿದ್ದಳು. ಆಗ ರಾತ್ರಿ ಹಳ್ಳಿ ಮನೆಗೆ ನುಗ್ಗಿದ ಈ ಸೈತಾನರು ಆಕೆಯನ್ನು ಎತ್ತಿ ಇನೋವಾ ಕಾರಿಗೆ ಹಾಕಿಕೊಂಡಿದ್ದಾರೆ. ಆಗ ರಾಘು ಕೆಕ್ಕಾರಿನ ಮಠದಲ್ಲಿ ತಲೆಮರೆಸಿಕೊಂಡು ಕುಂತಿದ್ದ ಮಗಳನ್ನು ಹೊತ್ತೊಯ್ಯುವುದು ಕಂಡು ತಂದೆ ತಾನೂ ಬರುವುದಾಗಿ ಕಾರು ಹತ್ತಿದ್ದಾನೆ. ಇದು ಪ್ರಬಲಾಳ ಸೋದರ ಮಾವನಿಗೆ ಗೊತ್ತಾಗಿದೆ. ಆತ ಬಿಜೆಪಿಯ ಸ್ಥಳೀಯ ಮುಖಂಡ- ಮಾಜಿ ಮಂತ್ರಿ-ಹಾಲಿ ಶಾಸಕ ಕಾಗೇರಿ ಹೆಗಡೆಯ ಸಹಚರ.

ಆತನ ಗ್ಯಾಂಗು ಸ್ವಾಮಿಯ ಗೂಂಡಾಗಳ ಕಾರು ಕಾಡಲ್ಲಿ ಅಡ್ಡ ಹಾಕಿ ಸಮಾ ನಾಲ್ಕು ತದುಕಿತ್ತು. ಆಗ ರಾಜಿಗೆ ಬಂದ ಈ ರೌಡಿಗಳು "ಗುರುಗಳು ಪ್ರಬಲಾಳಲ್ಲಿ ಏನೋ ಮಾತಾಡಬೇಕಾಗಿದೆಯಂತೆ... ಕೆಕ್ಕಾರಿಗೆ ಕರೆತರಲು ಹೇಳಿದ್ದಾರೆ...." ಎಂದು ವಿನಂತಿಸಿದ್ದಾರೆ. ಇದಕ್ಕೊಪ್ಪದ ಆಕೆಯ ಮಾವ ಪೊಲೀಸರಿಗೆ ತಿಳಿಸಿದ್ದಾರೆ. ಆಗ ಡಿವೈಎಸ್‌ಪಿ ಒಬ್ಬ ಸಂಧಾನ ನಡೆಸಿ ಅಪ್ಪ-ಮಗಳನ್ನು ಸ್ವಾಮಿ ಭೇಟಿ ಮಾಡಿಸಿ ತಕ್ಷಣ ಊರಿಗೆ ತಂದುಬಿಡುವಂತೆ ಹೇಳಿದ್ದಾರೆ.

ತೊಂದರೆಯಾದರೆ ಕೊಲ್ತೀನಿ!

ಮಠದ ತಾಲಿಬಾನಿಗಳು ತಂದೆ-ಮಗಳನ್ನು ಕೆಕ್ಕಾರಿನಲ್ಲಿದ್ದ ಗುರುಗಳ ಪದತಲದಲ್ಲಿ ತಂದು ನಿಲ್ಲಿಸಿದರು. ಪ್ರಬಲಾಳನ್ನು ಕಂಡಿದ್ದೇ ಸರ್ವಸಂಗ ಪರಿತ್ಯಾಗಿಯೂ, ಶಾಂತಮೂರ್ತಿಯೂ ಆದ ರಾಘವೇಶ್ವರ ಭಾರತಿ ಸ್ವಾಮಿ ಸಿಡಿಮಿಡಿಗೊಂಡಿದ್ದಾನೆ. ಕ್ರೋಧ, ಈರ್ಷೆ, ಸಿಟ್ಟಿನಿಂದ ಹಾರಾಡಿದ್ದಾನೆ. "ನೀನು ಸಿಐಡಿ ಎದುರು ನನಗೆ ತೊಂದರೆ ಆಗುವ ಹಾಗೆ ಸಾಕ್ಷಿ ಹೇಳಿದರೆ ನಿನ್ನ ಬದುಕು ಸರ್ವನಾಶ ಮಾಡ್ತೇನೆ... ನೀನು ನನ್ನ ಪರವಾಗಿ ಸಾಕ್ಷಿ ಹೇಳಬೇಕು... ಹಿಂದೆ ನಡೆದ 'ಘಟನೆ' ಬಗ್ಗೆ ಏನೂ ಬಾಯಿ ಬಿಡಬೇಡ... ನೀನು ಸಿಐಡಿಗೆ ನನ್ನ ವಿರುದ್ಧ ಸಾಕ್ಷಿ ಹೇಳಿದರೆ ನಿನ್ನ ಮತ್ತು ನಿನ್ನ ತಂದೆ ಇಬ್ಬರನ್ನೂ ಮುಗಿಸೋದು ಖಂಡಿತ..." ಎಂದು ಫತ್ವಾ ಹೊರಡಿಸಿದ್ದಾನೆ ರಾಘು ಸ್ವಾಮಿ!!

'ಗುರು ಸನ್ನಿಧಿ'ಯಿಂದ ಹೊರಬಂದ ತಂದೆ-ಮಗಳಿಗೆ ಅಪಹರಣಕಾರರೂ ಕೊಲ್ಲುವ ಬೆದರಿಕೆ ಹಾಕಿದ್ದಾರೆ. ಇದೇ ರೀತಿ ಬೆಂಗಳೂರಿಂದಲೂ ಒಮ್ಮೆ ಪ್ರಬಲಾಳನ್ನು ಪಂಚಪಾಪಿಗಳು ಕೆಕ್ಕಾರಿಗೆ ತಂದು ಪ್ರತಿಕೂಲ ಸಾಕ್ಷ್ಯ ಹೇಳದಂತೆ ತಾಕೀತು ಮಾಡಿ ದಿಗ್ಬಂಧನದಲ್ಲಿ ಇಟ್ಟಿದ್ದರು. ಈ ಐವರು ಗೂಂಡಾಗಳ ಇತಿಹಾಸ ಭಯಾನಕವಾಗಿದೆ. ಗುರುಗಳಿಗೆ ಗಂಡಾಂತರ ಬಂದಾಗೆಲ್ಲ ಈ ತಾಲಿಬಾನಿಗಳು ದಾದಾಗಿರಿಗೆ ಇಳಿಯುವುದು ಸಾಮಾನ್ಯ ಕಾರ್ಯಾಚರಣೆ. ಈ ಐವರ ಮೇಲೂ ಈಗ ಪ್ರಬಲಾ ಕಂಪ್ಲೇಂಟು ಪೊಲೀಸರಿಗೆ ಕೊಟ್ಟಿದ್ದಾಳೆ. ಇವರಲ್ಲಿ ಅರುಣ ಶ್ಯಾಮನೆಂಬವರ



ವಕೀಲ. ಈತ ರಾಘುನಿಂದಲೆ ಲಾಯರ್ ಆಗಿರುವ ಸಂಡೇ ಪ್ಲೀಡರ್. ರಮೇಶ್ ಎಂಬಾತ ರಾಘುನ ಸಕಲ ಖಾಸಗೀ ವ್ಯವಹಾರ ಗೊತ್ತಿರುವ ನಿಷ್ಠಾವಂತ. ಜತೆಗೆ ಅಡಿಯವನೂ ಹೌದು.

ಹಾಗೆಯೇ ಅನಂತ ಇನ್ನೊಬ್ಬ ಗುರು ಬಾಣಸಿಗ. ರಾಘುನ ರಂಗೀಲಾ ಚಟುವಟಿಕೆಗೆ ಸಹಕರಿಸುವ ಸೇವಕ. ಮಧುಕರ ಗುರು ಹೋದಲ್ಲೆಲ್ಲ ಲಹರಿಗೆ-ಲಾಲಸೆಗೆ ಅನುಕೂಲಕರವಾದ ಕೊಠಡಿ ಸಿದ್ಧಪಡಿಸುವ ಹೊಣೆಗಾರಿಕೆಯವನು. ಸುಧಾಕರ ಯಾನೆ ಬಿ.ಆರ್. ಸುಬ್ರಹ್ಮಣ್ಯ ಪಕ್ಕಾ ಹಲಾಲು ಟೋಪಿ ಪುಂಡ. ಅಶೋಕೆ ಮಠದ ಕಾಮಗಾರಿ ಉಸ್ತುವಾರಿ ನೋಡಿಕೊಳ್ಳುತ್ತಿರುವ ಈತ ದಗಾಕೋರ ಕೆಲಸದಲ್ಲಿ ನಿಸ್ಸೀಮ. ತಾನೇ ಸತ್ತು ಹೋಗಿದ್ದೇನೆಂದು ಇನ್ಶೂರೆನ್ಸ್ ಕ್ಲೇಮು ಮಾಡಿಕೊಂಡ ಹರಾಮಿ ಈತ. ರಾಘುನ ತಾಲಿಬಾನಿ ಪಡೆಯ ಖತರ್‌ನಾಕ್ ಆದ್ಮಿ ಈ ಸುಧಾಕರ. ಈತ ಪ್ರಬಲಾಳಿಗೆ ಹಾಕಿದ ಬೆದರಿಕೆ-ಒಂದೆರಡು ರೀತಿಯಲ್ಲ.

ಭಾವನ ಪಾತ್ರ

ಸಿಐಡಿ ವಿಚಾರಣೆಗೆ ಪ್ರಬಲಾ ಹಾಜರಾಗುವ ಕೆಲವೇ ನಿಮಿಷದ ಮೊದಲು ರಾಘು ಭಾವನಾದ ಜಗದೀಶ ಶರ್ಮನ ಮೊಬೈಲ್‌ನಿಂದ ಫೋನ್‌ನಲ್ಲಿ ಧಮಕಿ ಹಾಕಿದ್ದಾನೆ "ನಿನ್ನ ಕೇಸಿಗೂ ಇದಕ್ಕೂ ಸಂಬಂಧ ಇಲ್ಲ... ನೀನು ನನ್ನ ವಿರುದ್ಧ ಸಾಕ್ಷಿ ಹೇಳಬೇಡ. ಹಿಂದಾದ ಘಟನೆ ಬಗ್ಗೆ ಬಾಯಿಬಿಟ್ಟರೆ ನಿನಗೆ ಒಳ್ಳೆಯದಾಗುವುದಿಲ್ಲ... ಸರ್ವನಾಶವಾಗಿ ಹೋಗ್ತಿಯಾ..." ಎಂದಬ್ಬರಿಸಿದ್ದಾನೆ. ಇದಾದ ಕೆಲವೇ ನಿಮಿಷದಲ್ಲಿ ಜಗದೀಶ್ ಶರ್ಮ ವಾಟ್ಸ್‌ಆ್ಯಪ್ ಮ್ಯಾಸೇಜ್ ಕಳಿಸಿ ಬೆದರಿಸಿದ್ದಾನೆ.

ಕಂಪ್ಲೇಂಟು

ಪ್ರಬಲಾ ಸಿಐಡಿ ಎದುರು ರಾಘುನ ವಿರುದ್ಧವೇನೂ ಸಾಕ್ಷಿ ಹೇಳಲಿಲ್ಲ. ಅದಕ್ಕೆ ಕಾರಣ ಪ್ರೇಮಲತಾ ಕುಟುಂಬ ರಾಘು ತಾಲಿಬಾನಿಗಳಿಂದ ಅಡಿಗಡಿಗೆ ಅನುಭವಿಸಿದ ಸಂಕಟ, ಸಮಸ್ಯೆ, ಜೈಲುವಾಸ, ಕೋರ್ಟನ್ನೂ ದಿಕ್ಕೆಡಿಸಿದ ರಾಘುನ ಗ್ಯಾಂಗಿನ ಗಾಂಚಾಲಿ ಇತ್ಯಾದಿಯ ಭಯ. ಆದರೆ ರಾಘು ಪಟಾಲಮ್ ಆಕೆಯನ್ನು ಕಾಡುವುದು ಮಾತ್ರ ನಿಲ್ಲಿಸಿರಲಿಲ್ಲ. ಹೀಗಾಗಿ ಆಕೆ ಬೇರೆ ದಾರಿಯೇ ಇಲ್ಲದೆ ಜನವಾದಿ ಮಹಿಳಾ ಸಂಘಟನೆಯ ಮೊರೆ ಹೋಗಿದ್ದಾಳೆ.

ಜನವಾದಿ ಮಹಿಳಾ ಸಂಘಟನೆಯ ನೆರವಿನಿಂದ ಈಗ ಗಿರಿನಗರ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ-ಅಪಹರಣ-ಬೆದರಿಕೆಯ ಕೇಸು ರಾಘು ಮತ್ತಾತನ ಪಂಚ-ಪಾಪಿಗಳ ಮೇಲೆ ಕೊಟ್ಟಿದ್ದಾಳೆ. ಎಫ್‌ಐಆರ್ ಕೂಡ ದಾಖಲಾಗಿದೆ. ಆದರೆ ರಾಘುನನ್ನು ಮಾತ್ರ ಸಿಎಂ ಸಿದ್ದು ಆಗಲಿ, ಗೃಹಮಂತ್ರಿ ಜಾರ್ಜ್ ಆಗಲಿ, ಈವರೆಗೆ ಮುಟ್ಟಿಲ್ಲ.

ಪ್ರೇಮಲತಾ ಕೇಸ್ ಸಿಐಡಿ ಹಳ್ಳ ಹಿಡಿಸಿದೆ. ಈಗ ಪ್ರಬಲಾ ದಿಟ್ಟವಾಗಿ ತನಗಾದ ಅನ್ಯಾಯ ಅತ್ಯಾಚಾರದ ಬಗ್ಗೆ ದೂರು ಕೊಟ್ಟಿದ್ದಾಳೆ. ಪ್ರೇಮಲತಾ ಪ್ರಕರಣದಲ್ಲಿ ಗೊಂದಲಗಳಿವೆ ಎನ್ನುವ ಖಾಕಿ ಖದೀಮರಿಗೆ ಪ್ರಬಲಾ ಕೇಸಲ್ಲಿ ಏನು ನ್ಯೂನತೆ ಕಂಡಿದೆ? ಹೋರಿ ಸ್ವಾಮಿಗೆ ಕೊಳ ತೊಡಿಸಲು ಗೃಹ ಇಲಾಖೆಗೆ ಇರುವ ಅಡಚಣೆಯಾದರೂ ಏನು? ಆತ ಜೈಲಲ್ಲಿ ಮಜ್ಜಿಗೆ ತಂಬ್ಳಿ ಅನ್ನ ತಿನ್ನುವಂತಾಗಲು ಇನ್ನೆಷ್ಟು ಹುಡುಗೀರು ಕೇಸು ಹಾಕಬೇಕು? ಇನ್ನೆಷ್ಟು ಹವ್ಯಕ ಹೆಣ್ಣುಗಳ ಬದುಕು ಹಾಳಾಗಬೇಕು?

ಒಂದಂತೂ ಖರೆ. ರಾಘು ಜೈಲು ಪಾಲಾದ ತಕ್ಷಣವೇ ಇನ್ನಷ್ಟು ಆತನ ಕಾಮಕಾಂಡದ ಭಯಾನಕ ಅಧ್ಯಾಯಗಳು ಹೊರಬರುತ್ತದೆ. ಚಾತುರ್ಮಾಸ ಎಂದರೆ ಸನ್ಯಾಸಿಗಳಿಗೆ ಆತ್ಮಶುದ್ಧಿಯ, ಒಂದು ವರ್ಷ ಮಾಡಿದ ಪಾಪ ಪ್ರಾಯಶ್ಚಿತ್ತದ ವ್ರತ. ಈ ಚಾತುರ್ಮಾಸದ ಸಂದರ್ಭದಲ್ಲೇ ಅಸಹಾಯಕ, ಅಮಾಯಕ ಹೆಂಗಸರ ಬೇಟೆಯಾಡಿ ಭೋಗಿಸುವ ರಾಘು ಕಾವಿ ತೊಟ್ಟುಕೊಂಡು ಬುದ್ಧಿವಂತ ಬ್ರಾಹ್ಮಣರ ಮಠದ ಪೀಠದಲ್ಲಿರುವುದು ವಿಪರ್ಯಾಸ

ಇನ್ನಾದರೂ ಸಿದ್ದು ಸರ್ಕಾರ, ಬ್ರಾಹ್ಮಣ ಸಮುದಾಯ ರಾಘುಗೆ ಪಾಠ ಕಲಿಸೀತಾ?!

■ ಸುಯೋಧನ

ನಾಗಮಂಗಲ: ಅಕ್ರಮ ಮರಳುದಂಧೆಯ ಆರ್ಭಟ



ಫಿಲ್ಟರ್ ಮರಳುಗಾರಿಕೆ ನಡೆಯುತ್ತಿರುವ ಸ್ಥಳ


ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕುವ ಉದ್ದೇಶದಿಂದ ಸರ್ಕಾರ ಕಾನೂನು ಮಾಡಿರೋದು ಸರಿ. ಆದರೆ ಆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಾದ ಅಧಿಕಾರಿಗಳೇ ಮರಳು ದಂಧೆಕೋರರ ಜೊತೆ ಶಾಮೀಲಾದ ಪರಿಣಾಮ ನಾಗಮಂಗಲದಲ್ಲಿ ಅಕ್ರಮ ಮರಳುದಂಧೆ ಮಿತಿಮೀರಿದೆ. ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಅಕ್ಷರಶಃ ಕಣ್ಮುಚ್ಚಿ ಕೂತಿವೆ. ಕಾಂಗ್ರೆಸ್, ಜೆಡಿಎಸ್ ಎಂಬ ಪಕ್ಷಭೇದವಿಲ್ಲದೇ ರಾಜಕೀಯ ನಾಯಕರುಗಳೇ ಮರಳುದಂಧೆಗೆ ಅಸ್ತು ಎನ್ನುತ್ತಿರೋದರಿಂದ ಅಧಿಕಾರಿಗಳಿಗೆ ಕಮೀಷನ್‌ಗೆ ಕೈಯೊಡ್ಡದೆ ಕರ್ತವ್ಯ ಪಾಲಿಸುವ ಅವಕಾಶವೇ ಇಲ್ಲ.

ಯುವಕ ಬಲಿ

ನಾಗಮಂಗಲದ ಮರಳು ಮಾಫಿಯಾದ ಹಪಾಹಪಿ ಎಂತದ್ದೆಂದರೆ ಅದು ಯುವಕರ ಪ್ರಾಣಗಳನ್ನೇ ಬಲಿ ತೆಗೆದುಕೊಳ್ಳುತ್ತಿದೆ. ಇಂತಹ ಪ್ರಕರಣಗಳನ್ನು ಪೊಲೀಸ್ ಪಡಸಾಲೆಯಲ್ಲೆ ಮುಚ್ಚಿಹಾಕುವ ಕಲೆಯೂ ದಂಧೆಕೋರರಿಗೆ ಸಿದ್ಧಿಸಿದೆ. ಆಗಸ್ಟ್ 11 ರಂದು ರವಿ ಎಂಬ ಮತ್ತೊಬ್ಬ ಯುವಕ ಮರಳು ದಾಹಕ್ಕೆ ಮಣ್ಣಾಗಿ ಹೋಗಿದ್ದಾನೆ.


ಅಳಿಸಂದ್ರ ಗ್ರಾಮದ ಮಾಸ್ತಿಗೌಡನ ಮಗ ರವಿಯೇ ಆ ನತದೃಷ್ಟ ಯುವಕ. ಈತ ಅದೇ ಗ್ರಾಮದ ಶಶಿ ಎಂಬಾತನ ಬಳಿ ಟ್ರ್ಯಾಕ್ಟರ್ ಡ್ರೈವರ್ ಆಗಿ ಕೆಲಸ ಮಾಡಿಕೊಂಡಿದ್ದ. ಮರಳು ದಂಧೆಕೋರರಿಗೆ ತನ್ನಲ್ಲಿರುವ ಜೆಸಿಬಿ ಹಾಗೂ ಟ್ರಾಕ್ಟರ್‌ಗಳನ್ನು ಬಾಡಿಗೆ ಬಿಡುವುದೇ ಶಶಿಯ ಕಾಯಕ. ಹೀಗೆ ಸಾಕಷ್ಟು ರೊಕ್ಕವನ್ನೂ ಆತ ಮಾಡಿಕೊಂಡಿದ್ದಾನೆ. ತನ್ನ ತಂದೆ ಸತ್ತ ನಂತರ ಇಡೀ ಕುಟುಂಬದ ಜವಾಬ್ದಾರಿ ಹೊತ್ತಿದ್ದ ರವಿ, ಶಶಿಯ ಟ್ರಾಕ್ಟರ್ ಓಡಿಸುತ್ತಿದ್ದ. ಸಾಮಾನ್ಯವಾಗಿ ಅಕ್ರಮ ಮರಳು ದಂಧೆ ನಡೆಯುವುದೇ ರಾತ್ರಿಯ ನಂತರವಾದ್ದರಿಂದ ರವಿಯ ಡ್ಯೂಟಿ ರಾತ್ರಿಯ ಹೊತ್ತೇ ಹೆಚ್ಚಿರುತ್ತಿತ್ತು. ಆಗಸ್ಟ್ 11ರಂದು ತಿಟ್ಟನಹೊಸಹಳ್ಳಿಯ ಶ್ರೀನಿವಾಸ್ ಎಂಬ ಮರಳು ದಂಧೆವಾಲ ಟ್ರಾಕ್ಟರ್ ಕಳಿಸಿಕೊಡುವಂತೆ ಶಶಿಗೆ ತಿಳಿಸಿದ್ದ. ಅದರಂತೆ ರಾತ್ರಿ ರವಿ ದಡಗ ಕೆರೆಯಲ್ಲಿ ಶ್ರೀನಿವಾಸನಿಗೆ ಸೇರಿದ್ದ ಮರಳನ್ನು ತುಂಬಿಸುತ್ತಿದ್ದ. ಮರಳುಗಳ್ಳರ ದುರಾಸೆ ಎಂತದ್ದೆಂದರೆ ಲಾರಿ ಅಥವಾ ಟ್ರ್ಯಾಕ್ಟರ್ ಲೋಡ್ ಆದಮೇಲೂ ಹೆಚ್ಚೆಚ್ಚು ತುಂಬಿಸಿ ಸಾಗಣೆ ಮಾಡುತ್ತಾರೆ. ಅವತ್ತು ಕೂಡಾ ಮರಳು ಓವರ್‌ಲೋಡ್ ಆದಕಾರಣ ಟ್ರಾಕ್ಟರ್ ಹಿಂದಕ್ಕೆ ಮಗುಚಿಕೊಂಡಿತ್ತು. ಇದರ ಸುಳಿವೇ ಇಲ್ಲದೆ ಕತ್ತಲಲ್ಲಿ ಟ್ರಾಕ್ಟರ್‌ನ ಹಿಂಬದಿಯಲ್ಲೇ ನಿಂತಿದ್ದ ರವಿ ಕ್ಷಣಮಾತ್ರದಲ್ಲಿ ಮರಳಿನಲ್ಲಿ ಹೂತು ಹೆಣವಾಗಿದ್ದ.

ರವಿ ಸತ್ತ ಸುದ್ದಿ ತಿಳಿಯುತ್ತಿದ್ದಂತೆಯೇ ಮರಳುಗಳ್ಳ ಶ್ರೀನಿವಾಸ್ ಟ್ರಾಕ್ಟರನ್ನು ಸ್ವಲ್ಪ ದೂರದ ನಾಲೆಯಲ್ಲಿ ಮಗುಚಿ ಬೀಳುವಂತೆ ಮಾಡಿ, ಟ್ರ್ಯಾಕ್ಟರ್ ಅಪಘಾತವಾಯಿತು, ಚಿಕಿತ್ಸೆಗೆಂದು ರವಿಯನ್ನು ಬಿಜಿಎಸ್ ಆಸ್ಪತ್ರೆಗೆ ದಾಖಲು ಮಾಡುವ ವೇಳೆಗೆ ಆತ ಸತ್ತುಹೋದ ಎಂಬ ಕಥೆ ಕಟ್ಟಿದ್ದ. ಶ್ರೀನಿವಾಸನದ್ದು ಅಕ್ರಮ ಮರಳು ದಂಧೆಯಲ್ಲಿ ಎತ್ತಿದ ಕೈ. ಅಕ್ರಮ ಮರಳುದಂಧೆ ನಡೆಸಿಯೇ ಕೋಟ್ಯಾಧೀಶನಾಗಿದ್ದಾನೆ. ದಡಗ ಕೆರೆಯ ಸುತ್ತಮುತ್ತ ಮರಳಿನ ಜಾಡು ಹೊಂದಿರುವ ರೈತರಿಂದ ಗುತ್ತಿಗೆ ಪಡೆದು ಮರಳು ಸಾಗಿಸುವ ಶ್ರೀನಿವಾಸ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಒಳ್ಳೆಯ ಒಡನಾಟ ಇಟ್ಟುಕೊಂಡಿದ್ದಾನೆ. ಪ್ರತಿನಿತ್ಯ 20ಕ್ಕೂ ಹೆಚ್ಚು ಲಾರಿಗಳಲ್ಲಿ ಅಕ್ರಮ ಮರಳು ಸಾಗಿಸುತ್ತಾನೆ. ಆದರೂ ಇವನನ್ನು ಮುಟ್ಟುವ ಧೈರ್ಯ ನಾಗಮಂಗಲ ಪೊಲೀಸರಿಗೆ ಇಲ್ಲ. ಯಾಕೆಂಬುದನ್ನು ಪೊಲೀಸರ ಬಾಯಲ್ಲಿ ಕಾಣುವ ಶ್ರೀನಿವಾಸನ ಕಡುಬುಗಳೇ ಬಿಚ್ಚಿಬಿಚ್ಚಿ ಹೇಳುತ್ತವೆ.



ನಾಗರಾಜ್

ಈ ಪ್ರಕರಣದಲ್ಲಿ ಟ್ರಾಕ್ಟರ್ ಮಗುಚಿ ಬಿದ್ದಿದ್ದ ಸ್ಥಳದಲ್ಲಿ ಸಾಕಷ್ಟು ಕೆಸರು ತುಂಬಿತ್ತು. ಆದರೆ ರವಿಯ ದೇಹಕ್ಕೆ ಸ್ವಲ್ಪವೂ ಕೆಸರು ಮೆತ್ತಿಕೊಂಡಿರಲಿಲ್ಲ. ಇದರಿಂದ ಅನುಮಾನಗೊಂಡ ಅಳಿಸಂದ್ರ ಗ್ರಾಮಸ್ಥರು ರವಿ ಅಪಘಾತದಿಂದ ಸತ್ತಿಲ್ಲ, ಮರಳು ತುಂಬುವಾಗ ಆದ ಅನಘಡದಿಂದ ಸತ್ತಿದ್ದಾನೆ ಎಂಬುದನ್ನು ಪತ್ತೆ ಹಚ್ಚಿದ್ದರು. ಅಲ್ಲದೇ ಪರಿಹಾರ ನೀಡದೇ ಹೋದಲ್ಲಿ ಶವಪರೀಕ್ಷೆ ಮಾಡಲು ಬಿಡುವುದಿಲ್ಲವೆಂದು ಪ್ರತಿಭಟನೆಗೆ ಸಜ್ಜಾಗಿದ್ದರು. ಅತಿರೇಕಕ್ಕೆ ಹೋದರೆ ತಮ್ಮ ಬುಡಕ್ಕೆ ಬರುತ್ತದೆ ಎಂದು ತಿಳಿದ ಶ್ರೀನಿವಾಸ್ ಹಾಗೂ ಶಶಿ ಪರಿಹಾರವಾಗಿ ಎರಡು ಲಕ್ಷ ರೂಪಾಯಿ ಕೊಡ್ತೀವಿ ಅಂತ ರಾಜೀ ಪಂಚಾಯಿತಿಗೆ ಮುಂದಾಗಿದ್ದರು. ಆದರೆ ಗ್ರಾಮಸ್ಥರು ಇನ್ನು ಹೆಚ್ಚಿಗೆ ಪರಿಹಾರ ಬೇಕೆಂದು ಪಟ್ಟು ಹಿಡಿದಿದ್ದರು. ಆಗ ಎರಡೂ ಗುಂಪಿನ ನಡುವೆ ಮಾತಿಗೆಮಾತು ಬೆಳೆದು ಪರಸ್ಪರ ಕೈ-ಮಿಲಾಯಿಸುವ ಮಟ್ಟ ತಲುಪಿತ್ತು.




ಅಕ್ರಮ ಮರಳುಗಾರಿಕೆಗೆ ಬಲಿಯಾದ ರವಿ


ಈ ವಿಚಾರ ತಿಳಿದ ಸ್ಥಳೀಯ ಪತ್ರಕರ್ತ ವೆಂಕಟೇಶ್, ದೇವರಾಜ್, ವಿಶ್ವಾಸ್ ಮೂವರು ವರದಿಗಾಗಿ ಘಟನೆ ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿದ್ದರು. ಫೋಟೋ ತೆಗೆಯಲು ಮುಂದಾದ ಪತ್ರಕರ್ತರಿಗೆ ಬೆದರಿಕೆ ಹಾಕಿದ ಮರಳುಗಳ್ಳರು ವಿಶ್ವಾಸ್ ಕೈಯಲ್ಲಿದ್ದ ಮೊಬೈಲ್ ಒಡೆದು ಹಾಕಿ, ವೆಂಕಟೇಶ್ ಬಳಿಯಿದ್ದ ಕ್ಯಾಮೆರಾ ಜಖಂ ಗೊಳಿಸಿದ್ದರು. ಪ್ರತಿರೋಧಿಸಿದ ವೆಂಕಟೇಶ್, ವಿಶ್ವಾಸ್ ಇಬ್ಬರ ಮೇಲೂ ಹಲ್ಲೆ ಮಾಡಿ ನೆತ್ತರು ಹರಿಯುವಂತೆ ಹೊಡೆದಿದ್ದರು. ಅಷ್ಟರಲ್ಲಾಗಲೆ, ವಿಷಯ ಪೊಲೀಸರಿಗೆ ತಲುಪಿತ್ತು. ಸ್ವತಃ ಡಿವೈಎಸ್ಪಿ ಉದೇಶ್, ಸಿಪಿಐ ಜಯರಾಂ ಆಗಮಿಸುತ್ತಿದ್ದಂತೆಯೇ ದಂಧೆಕೋರರು ಪರಾರಿಯಾಗಿದ್ದರು.

ಕೊನೆಗೆ ನಡೆದ ಸಂಧಾನದ ಸಭೆಯಲ್ಲಿ ತಿಟ್ಟನಹೊಸಳ್ಳಿ ಶ್ರೀನಿವಾಸ್ ಹಾಗೂ ಶಶಿ ತಲಾ 5 ಲಕ್ಷದಂತೆ ರವಿ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ಕೊಡಬೇಕೆಂಬ ತೀರ್ಮಾನಕ್ಕೆ ಬಂದಿದ್ದರಿಂದ ಪ್ರಕರಣದ ದೂರು ದಾಖಲಾಗಲೇ ಇಲ್ಲ.

ರಾಜಾರೋಷ ದಂಧೆ



ಮಂಡ್ಯ ಎಸ್ಪಿ ಭೂಷಣ್ ಜಿ.ಬೊರಸೆ



ಡಿವೈಎಸ್‌ಪಿ ಸವಿತಾ ಹೂಗರ್

ಕಂದಾಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಮಂತ್ಲಿ ಫಿಕ್ಸ್ ಮಾಡಿರುವುದರಿಂದ ನಾಗಮಂಗಲದಲ್ಲಿ ಅಕ್ರಮ ಮರಳುದಂಧೆ ನಿರಾತಂಕವಾಗಿ ನಡೆಯುತ್ತಿದೆ. ತಾಲ್ಲೂಕಿನ ದೇವಲಾಪುರ, ಕಸಬಾ ಹೊಣಕೆರೆ, ಬಿಂಡಿಗನವಿಲೆ ಹಾಗೂ ಬೆಳ್ಳೂರು ಹೋಬಳಿಗಳ ಹಲವು ಗ್ರಾಮಗಳಿಂದ 50ಕ್ಕೂ ಹೆಚ್ಚು ಲಾರಿಗಳ ಮೂಲಕ ರಾತ್ರೋರಾತ್ರಿ ಮರಳು ಬೆಂಗಳೂರಿಗೆ ಸಾಗಿಸಲಾಗುತ್ತಿದೆ.

ಹೊಣಕೆರೆ ಹೋಬಳಿಯ ಬೋಗಾದಿ ಬಳಿಯ ಕೊರವನಗುಂದಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ 50 ಎಕರೆ ಪ್ರದೇಶದಲ್ಲಿ ಅಕ್ರಮವಾಗಿ ಫಿಲ್ಟರ್ ಮರಳು ತೆಗೆಯುವ ದಂಧೆ ಜೋರಾಗಿ ನಡೆಯುತ್ತಿದೆ. ಮರಳು ದಂಧೆಕೋರರು ಮರಳು ತೆಗೆಯುವ ಕಾರ್ಯಕ್ಕಾಗೇ ನೂರಾರು ಮರಗಳನ್ನು ಕಡಿದು ಹಾಕಿದ್ದಾರೆ. ಇನ್ನು ದೊಡ್ಡ ಜಟಕ, ಚಿಕ್ಕಜಟಕ, ಕಾರಗೆರೆ, ಕಾಡಂಕನಹಳ್ಳಿ, ದೊಡ್ಡಗುಣಿ, ಗೊಂಡೇನಹಳ್ಳಿ, ಕೆಂಚಹಳ್ಳಿ, ಬಿದರಕೆರೆ, ಬಿ.ಮಲ್ಲೇನಹಳ್ಳಿ, ಕೊರವನಗುಂದಿ, ಬಿ.ಶೆಟ್ಟಹಳ್ಳಿ, ಹೊಣಕೆರೆ, ಅರಕೆರೆ, ರಾಮೇನಹಳ್ಳಿ, ಚಿನ್ನಾಪುರ, ಹಡೇನಹಳ್ಳಿ, ಪಿಟ್ಟೇಕೊಪ್ಪಲು, ಮಾಟಿಮೆಳ್ಳಹಳ್ಳಿ, ತಿಟ್ಟನಹೊಸಹಳ್ಳಿ, ಪಾಲ ಅಗ್ರಹಾರ, ಹುಲಿಕೆರೆ, ಕದಬಳ್ಳಿ, ಪಾಲ್ಕೆರೆ, ಲಾಳನಕೆರೆ ಮತ್ತು ಶಿಂಷಾನದಿ ಪಾತ್ರದಲ್ಲಿ ಅಕ್ರಮ ಮರಳು ಸಾಗಣೆಯ ಅಬ್ಬರ ಹೇಳತೀರದು.

ಗೆಜ್ಜೆ ಹೊಸಹಳ್ಳಿ ಲೋಕೇಶ್, ಚೋಳೇನಹಳ್ಳಿಯ ರಮೇಶ್, ದೊಂದೆ ಮಾದಹಳ್ಳಿಯ ಶಾಂತಾ ಮತ್ತು ಕೃಷ್ಣ ಪಾಲ ಅಗ್ರಹಾರ ಸೀತಾ, ಹಡೇನಹಳ್ಳಿ ರಮೇಶ್ ಸೇರಿದಂತೆ ಹಲವರು ಅಕ್ರಮ ಮರಳು ದಂಧೆಯ ಕಿಂಗ್‌ಪಿನ್‌ಗಳೆನಿಸಿದ್ದಾರೆ. ಇವರೆಲ್ಲ ತಮ್ಮ ದಂಧೆಯ ರಕ್ಷಣೆಗಾಗಿ ಖಾಸಗಿ ಬೆಂಗಾವಲು ಪಡೆಯನ್ನು ಕಟ್ಟಿಕೊಂಡಿದ್ದಾರೆ. ರಾತ್ರಿ ವೇಳೆ ಮರಳು ತುಂಬಿದ ಲಾರಿಗಳನ್ನು ತಾಲ್ಲೂಕಿನ ಗಡಿಭಾಗ ದಾಟಿಸಿ ಬರುವವರೆಗೂ ದಂಧೆಕೋರರು ರಕ್ಷಣೆ ಕೊಡುತ್ತಾರೆ. ಬೈಕ್, ಕಾರುಗಳ ಬೆಂಗಾವಲಿನಲ್ಲಿ ರಾತ್ರೋರಾತ್ರಿ ಮರಳು ಲಾರಿಗಳು ಬೆಂಗಳೂರಿನತ್ತ ಪ್ರಯಾಣ ಬೆಳೆಸುತ್ತವೆ. ಈ ಬಗ್ಗೆ ಪೊಲೀಸರನ್ನು ಕೇಳಿದರೆ ಅವರು ಪೆಚ್ಚುಮೋರೆ ಹಾಕುತ್ತಾರೆಯೇ ಹೊರತು ಮರಳು ಲಾರಿಗಳನ್ನು ತಡೆಗಟ್ಟಲು ಮುಂದಾಗುವುದಿಲ್ಲ. ಕಾರಣ ಕೇಳಿದರೆ ನಾವೇನು ಮಾಡೋಣ ಅಲ್ಲೆಲ್ಲೋ ಮರಳು ಸಾಗಿಸುತ್ತಿದ್ದಾರೆ ಬನ್ನಿ ಎಂದು ಫೋನ್ ಮಾಡಿ ಹೇಳಿ ನಾವು ಅತ್ತ ಕಡೆ ಹೋಗುತ್ತಿದ್ದಂತೆ ಮತ್ತೊಂದು ಕಳ್ಳ ದಾರಿಯಲ್ಲಿ ಮರಳು ಬೆಂಗಳೂರು ತಲುಪುವಂತೆ ನೋಡಿಕೊಳ್ಳುತ್ತಾರೆ ಎಂದು ಚಂದಾಮಾಮ ಕಥೆ ಹೇಳುತ್ತಾರೆ.

ಪೊಲೀಸ್ ಇಲಾಖೆಯಲ್ಲೇ ದಾಳಿಯ ಬಗ್ಗೆ ಮುನ್ಸೂಚನೆ ಕೊಡಲು ಒಂದಷ್ಟು ಮಂದಿಯನ್ನು ಹಣಕೊಟ್ಟು ದಂಧೆಕೋರರು ಸಾಕಿದ್ದಾರೆ. ದಾಳಿಗೂ ಮೊದಲೇ ದಂಧೆಕೋರರಿಗೆ ಮಾಹಿತಿ ನೀಡುವ ಪೊಲೀಸ್ ಬಾತ್ಮೀದಾರರನ್ನು ಕರೆಸಿ ಎಸ್ಪಿ ಭೂಷಣ್ ಜಿ.ಬೊರಸೆ ಎಚ್ಚರಿಕೆ ಕೊಡಬೇಕಿದೆ. ಇಲ್ಲದಿದ್ದರೆ ಕೆಲವು ಮಾನಗೆಟ್ಟ ಅಧಿಕಾರಿಗಳು ಪೊಲೀಸ್ ಇಲಾಖೆ[...] ಮಾನವನ್ನು ಮರಳುದಂಧೆಕೋರ[...] ಮಾರಿಕೊಳ್ಳುತ್ತಾರಷ್ಟೆ.

ಇನ್ನು ಅಕ್ರಮಮರಳು ಸಾಗಿಸು[...] ಲಾರಿಗಳ ಆರ್ಭಟದಿಂದ ರ[...] ಸಂಪೂರ್ಣವಾಗಿ ಹಾಳಾಗಿ ಹೋ[...] ಲೋಕೋಪಯೋಗಿ ಇಲಾಖೆ, ಪೊಲಿ[...] ಇಲಾಖೆ, ಕಂದಾಯ ಇಲಾಖೆ[...] ಅಧಿಕಾರಿಗಳು ಜಂಟಿಯಾಗಿ ಅಕ್ರ[...] ಮರಳು ದಂಧೆಕೋರರ ಮೇ[...] ಮುಗಿಬಿದ್ದು ಅವರನ್ನು ಬಂಧಿಸಿ ಜೈ[...] ಬಿಟ್ಟು ಬರಬೇಕು. ಆದರೆ ಅಂತಹ ಕೆಲ[...] ಅವರೇನೂ ಕೈಹಾಕಿಲ್ಲ. ಅಕ್ರಮ ಮರ[...] ದಂಧೆಯ ಬಗ್ಗೆ ಸಾರ್ವಜನಿಕರು ಮಾಹಿ[...] ನೀಡಿದರೆ, ಊರು ಕೊಳ್ಳೆ ಹೊಡೆದ ಮೇ[...] ಕೋಟೆ ಬಾಗಿಲು ಹಾಕಿದರೆಂಬಂತೆ ಎ[...] ಮುಗಿದ ಮೇಲೆ ತಹಶೀಲ್ದಾರ್ ಸೇರಿದ[...] ಪೊಲೀಸ್ ಇಲಾಖೆಯ ಅಧಿಕಾರಿ[...] ಸ್ಥಳಕ್ಕೆ ಬರುತ್ತಾರೆ. ಅಷ್ಟರಲ್ಲಿ ಅವ[...] ಬರುತ್ತಿರುವ ಮಾಹಿತಿ ತಿಳಿ[...] ದಂಧೆಕೋರರು ಮರಳಿನ ಸಮೇತ ಇ[...] ಪ್ರದೇಶವನ್ನೇ ತೆರವುಗೊಳಿ[...] ಕಾಲ್ಕಿತ್ತಿರುತ್ತಾರೆ. ಅಲ್ಲಿಯವರೆಗೂ ಹೋ[...] ಬಲಗೈಲಿ ವಾಪಸ್ ಬರುವ ಅಧಿಕಾರಿಗಳ ಈ ಕ[...] ಜನರಿಗೂ ಗೊತ್ತಾಗಿ ಅವರೆಲ್ಲಾ ಕಂದಾಯ, ಪೊಲೀ[...] ಇಲಾಖೆಯ ಅಧಿಕಾರಿಗಳಿಗೆ ಕ್ಯಾಕರಿಸಿ ಥೀ....ಥೂ.... ಎಂ[...] ಉಗಿಯುತ್ತಿದ್ದಾರೆ.

ಆರಂಭ ಶೂರತ್ವ

ತಾಲ್ಲೂಕಿಗೆ ಬರುವ ಎಲ್ಲಾ ಅಧಿಕಾರಿಗಳು ಮೊದ[...] ಆರಂಭ ಶೂರತ್ವ ತೋರಿ ಒಂದಷ್ಟು ಮರ[...] ದಂಧೆಕೋರರನ್ನು ಬಂಧಿಸಿ .ದಂಡ ಹಾಕಿ, ಕೇ[...] ಜಡಿಯುತ್ತಾರೆ. ನಂತರ ಮರಳುದಂಧೆಕೋರರಿಗಿರು[...] ರಾಜಕಾರಣಿಗಳ ಒತ್ತಡಕ್ಕೆ ಸಿಲುಕಿ ದಿನಕಳೆದಂತೆ ಏನ[...] ಮಾಡಲಾಗದೆ ಅವರೊಂದಿಗೆ ಅಡ್ಜಸ್ಟ್ ಆಗುತ್ತಾರೆ. ಇ[...] ಕೆಲವರು ಏನೂ ಬೇಡ ನಮಗೇಕೆ ದೊಡ್ಡ ನಾಯ[...] ಉಸಾಬರಿ, ಅವರ ತಂಟೆಯೇ ಬೇಡವೆಂದು ಸುಮ[...] ತಮ್ಮ ಪಾಡಿಗೆ ತಾವಿದ್ದು ಬಿಡುತ್ತಾರೆ. ಡಿವೈಎಸ್ಪಿಯಾ[...] ನಾಗಮಂಗಲಕ್ಕೆ ಬಂದ ಸವಿತಾ ಹೂಗಾರ್ ಎ[...] ಹೆಣ್ಣುಮಗಳು ಮರಳು ದಂಧೆಕೋರರಿಗೆ ತಲೆನೋವಾ[...] ಕಾರಣ ಆಕೆಯ ಮೇಲೆ ಲಾರಿ ಹತ್ತಿಸಿ ಕೊಲೆ ಮಾಡು[...] ವಿಫಲ ಯತ್ನವೂ ನಡೆದಿತ್ತು. ತಮ್ಮ ಕಾರ್ಯ[...] ಇಲಾಖೆಯಲ್ಲೇ ಪ್ರೋತ್ಸಾಹ ಸಿಗದ ಕಾರಣ ಹಾಗೂ [...] ಕೆಳಗಿನ ಅಧಿಕಾರಿಗಳು ದಿವ್ಯ ಮೌನದಿಂದ ಬೇಸತ್ತು ಅವ[...] ಕೂಡ ತಮ್ಮ ಪಾಡಿಗೆ ತಾವಿದ್ದು ಬಿಟ್ಟಿದ್ದಾರೆ.

ತಹಶೀಲ್ದಾರ್ ಎಂ.ಶಿವಲಿಂಗಮೂರ್ತಿ ಅಕ್ರಮ ಮರ[...] ಸಾಗಾಟಕ್ಕೆ ಕಡಿವಾಣ ಹಾಕುವ ಭಾಗವಾಗಿ ಕೆ[...] ಮಾಡುತ್ತಿದ್ದರೂ ಅಷ್ಟೇನು ನಿರೀಕ್ಷಿತ ಕೆಲಸವಾಗಿ[...] ಉಪವಿಭಾಗಾಧಿಕಾರಿ ಡಾ.ಎಚ್.ಎನ್.ನಾಗರಾ[...] ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿ ಎಂಬುದರಲ್ಲಿ ಎರ[...] ಮಾತಿಲ್ಲ. ತಹಸೀಲ್ದಾರ್ ಆಗಿದ್ದ ಸಂದರ್ಭದಲ್ಲಿ ಮದ್ದೂ[...] ಹಾಗೂ ಕೆ.ಆರ್.ಪೇಟೆಯಲ್ಲಿ ಅಕ್ರಮ ಮರಳು ದಂಧೆಕೋ[...] ಮೇಲೆ ಚಾಟಿ ಬೀಸಿದ್ದರು. ತಾವೇ ಸ್ವತಃ ಖುದ್ದಾಗಿ ಅಕ್ರ[...] ಮರಳು ಸಾಗಣೆ ಮಾಡುವ ಜಾಗಕ್ಕೆ ತೆರಳಿ ದಾಳಿ ನಡ[...] ಮರಳು ವಶಪಡಿಸಿಕೊಳ್ಳುತ್ತಿದ್ದರು. ಅವರ ಈ ಕಾರ್ಯ[...] ಇತರೆ ಅಧಿಕಾರಿಗಳು ಸರಿಯಾಗಿ ಸಾಥ್ ನೀಡದ ಕಾರ[...] ಅವರೇ ಏಕಾಂಗಿಯಾಗಿ ತೆರಳಿ ಮರಳುದಂಧೆಕೋ[...] ಮೇಲೆ ಮುಗಿಬೀಳುತ್ತಿದ್ದರು. ಅವರನ್ನು ಕೂಡ ಒಂದೆರ[...] ಬಾರಿ ಕೊಲ್ಲುವ ಸಂಚು ನಡೆದಿತ್ತು. ಈ[...] ಉಪವಿಭಾಗಾಧಿಕಾರಿಯಾಗಿರುವ ಡಾ.ಎಚ್.ಎನ್.ನಾಗರಾ[...] ಇನ್ನಾದರೂ ಕಂದಾಯ ಇಲಾಖೆ ಅಧಿಕಾರಿಗಳ ಮೈಚ[...] ಬಿಡಿಸಬೇಕಿದೆ. ಅಕ್ರಮ ಮರಳು ದಂಧೆಕೋರರ ಮೇ[...] ಕಠಿಣ ಕ್ರಮ ಕೈಗೊಳ್ಳಬೇಕಿದೆ.

ನಾಗಮಂಗಲದಲ್ಲಿ ಪೊಲೀಸರ ರಕ್ಷಣೆಯ[...] ಅಕ್ರಮವಾಗಿ ಮರಳು ದಂಧೆ ನಿರಾತಂಕವಾಗಿ ಸಾಗುತ್ತಿದ್ದ[...] ಎಸ್ಪಿ ಭೂಷಣ್ ಬೊರಸೆಯವರು ನೋಡಿಕೊಂ[...] ಸುಮ್ಮನಿರುವುದು ತಾಲ್ಲೂಕಿನ ಜನರ ಅಸಮಾಧಾನ[...] ಕಾರಣವಾಗಿದೆ. ಇನ್ನಾದರೂ ಮೈಕೊಡವಿ ಎದ್ದು ತಮ[...] ಇಲಾಖೆ ಅಧಿಕಾರಿಗಳನ್ನು ತಟ್ಟಿ ಎಬ್ಬಿಸದಿದ್ದರೆ ಮೊದ[...] ಬೆಂಗಾಡಾಗಿರುವ ನಾಗಮಂಗಲ ಸುಡುಗಾಡಾಗುವುದ[...] ಯಾವುದೇ ಸಂಶಯವಿಲ್ಲ. ಜಿಲ್ಲಾಧಿಕಾರಿ ಅಜಯ[...] ನಾಗಭೂಷಣ್ ಕೂಡಾ ಈ ವಿಚಾರದತ್ತ ಕೂಡ[...] ಕಾರ್ಯಪ್ರವೃತ್ತರಾಗಬೇಕಿದೆ.

■ ವರದಿಗಾ[...]

ಡಾ.ಕಲಬುರ್ಗಿ ದೇಹ ಹೊಕ್ಕ ಗುಂಡುಗಳ ಉದ್ದೇಶವೇನು?


ಕ್ರಾಂತಿಯೋಗಿ ಬಸವಣ್ಣನ ಕಗ್ಗೊಲೆಯ ...ವನ್ನು ಬಟ್ಟಬಯಲಾಗಿಸಿದ್ದ ಡಾ. ಎಂ.ಎಂ. ...ರ್ಗಿಯವರನ್ನೇ ಕೊಲ್ಲುವ ಮೂಲಕ ಸಮಾಜದ ...ಮನಸ್ಸುಗಳು ಒಂಬತ್ತು ಶತಮಾನಗಳ ನಂತರ ...ಸವಣ್ಣನನ್ನು ಕೊಂದಿವೆ. ಬಸವಣ್ಣನವರ ... ಸತ್ಯಕ್ಕೆ 'ಲಿಂಗೈಕ್ಯ' ಹೊಂದಿದರು ಎಂಬ ... ಹಬ್ಬಿಸಿದ್ದ ಮನುವಾದಿಗಳೇ ಇಂದು ...ರ್ಗಿ ಸಾವಿನಲ್ಲೂ ಮೊಸಳೆ ಕಣ್ಣೀರು ...ದ್ದಾರೆ. ಶಿವಸೇನೆಯ ಪ್ರಮೋದ್ ...ಲಿಕ್‌ನಂತಹವರು ಸಿಹಿ ಹಂಚಿ ...ಸುತ್ತಲೇ 'ಎಂ.ಎಂ. ಕಲಬುರ್ಗಿ ಹತ್ಯೆಯ ...ಹಿಂದೂಪರ ಸಂಘಟನೆಗಳ ಕೈವಾಡವಿದೆ ...ಯಾರು ಹೇಳುತ್ತಾರೋ ಮೊದಲು ಅಂಥವರ ...ತನಿಖೆ ನಡೆಸಿ' ಅಂತ ಹೇಳಿದ್ದಾನೆಂದರೆ, ಅದು ...ಗಲು ಮುಟ್ಟಿ ನೋಡಿಕೊಂಡ ...ತವಲ್ಲದೇ ಮತ್ತಿನ್ನೇನು?

...ಮೂಗಳು ಆತ್ಮರಕ್ಷಣೆಗಾಗಿ ಆಯುಧಗಳನ್ನು ...ಳ್ಳಬೇಕು ಎಂದು ಹುಬ್ಬಳ್ಳಿಯ ಮೂರು ...ಮಠದ ಆವರಣದಲ್ಲಿ ತ್ರಿಶೂಲ ದೀಕ್ಷೆ ನೀಡಿದ್ದ ...ಕ್, 'ಧರ್ಮ'ದ ಕಾರ್ಖಾನೆಯಲ್ಲಿ ವಿಕೃತ ...ಗಳನ್ನು ಸೃಷ್ಟಿ ಮಾಡಿ ಕೊಲೆ, ದರೋಡೆ ...ಲ್ಲಿ ನೂರಾರು ಧರ್ಮೋನ್ಮತ್ತ ಯುವಕರನ್ನು ...ಪಾಲಾಗಿಸಿದ್ದಾನೆ.

... ಹೇಳಿ, ಮೂಢನಂಬಿಕೆ ವಿರುದ್ಧ ...ಟಗಳನ್ನು ರೂಪಿಸಿದ್ದ ಮಹಾರಾಷ್ಟ್ರದ ...ದ ನರೇಂದ್ರ ದಾಭೋಲ್ಕರ್, ಗೋವಿಂದ ...ಯವರನ್ನು ಕೊಲೆ ಮಾಡಿದ ಸಂಸ್ಕೃತಿಯ ... ಸುಪಾರಿ ಶಾರ್ಪ್‌ಶೂಟರ್‌ಗಳನ್ನು ...ನಾಡಿ ಡಾ. ಕಲಬುರ್ಗಿಯವರನ್ನು ...ವುದು ಮೇಲ್ನೋಟಕ್ಕೇ ಕಂಡುಬರುತ್ತಿದೆ. ...ಳ ಹಿಂದಷ್ಟೇ ಸುದ್ದಿಗೋಷ್ಠಿ ನಡೆಸಿದ್ದ ...ಂದ ಸ್ವಾಮಿ ಎಂಬ ತಿಕ್ಕಲು ಆಸಾಮಿ ...ವಿರೋಧಿ ಹೇಳಿಕೆ ನೀಡುತ್ತಿರುವ ಡಾ. ... ಸೇರಿದಂತೆ ರಾಜ್ಯದ ಐದು ಜನರು ...ಗಳ ನಂಬಿಕೆಗಳಿಗೆ ಧಕ್ಕೆ ...ಮಾಡುತ್ತಿದ್ದಾರೆ" ಎಂದಿದ್ದ ಅಂಶ ಇಲ್ಲಿ ...ರ್ಣವಾದುದು.

...ಬಿಕ ವಿಚಾರ

...ಬುರ್ಗಿಯವರ ಹತ್ಯೆ ತನಿಖೆ ಆರಂಭಗೊಳ್ಳುವ



ದಕ್ಕೂ ಮೊದಲೇ ಅದರ ಜಾಡು ತಪ್ಪಿಸಲು ಕೊಲೆಗೆ ಕೌಟುಂಬಿಕ ಆಯಾಮ ನೀಡುವ ಹುನ್ನಾರಗಳೂ ನಡೆದಿವೆ. ಸಿಐಡಿ ತನಿಖೆಯಲ್ಲಿ ಇದು ಕೂಡಾ ಒಂದು ಆಯಾಮವಾಗಿದೆ. ಆದರೆ ಕಲಬುರ್ಗಿಯವರ ವ್ಯಕ್ತಿಗತ ಬದುಕನ್ನು ಗಮನಿಸಿದಾಗ ಕೌಟುಂಬಿಕ ಕಲಹಗಳು ಅವರನ್ನು ಹತ್ಯೆ ಮಾಡುವ ಸಾಧ್ಯತೆ ಕಿಂಚಿತ್ತೂ ಇಲ್ಲ.


ವಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಗುಬ್ಬೇವಾಡ ಗ್ರಾಮದವರಾದ ಕಲಬುರ್ಗಿಯವರದು ಅವಿಭಕ್ತ ಕುಟುಂಬ. ಇದುವರೆಗೆ ಆಸ್ತಿ ಹಂಚಿಕೆಯ ತಗಾದೆಯೇ ಬರದಂತೆ ಆ ಕುಟುಂಬ ನಡೆದುಕೊಂಡು ಬಂದಿದೆ. ಇನ್ನು ಇವರಿಗೆ ಇರುವುದು ಒಬ್ಬನೇ ಮಗ. ಆತ ಶ್ರೀವಿಜಯ. ಆತನ ಎಂ.ಎ, ಎಂಬಿಎ ವ್ಯಾಸಂಗ ಮುಗಿಸಿ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸದಲ್ಲಿದ್ದಾನೆ. ಅವರಿಗೆ ಇರುವ ಮೂವರು ಹೆಣ್ಣುಮಕ್ಕಳೆಲ್ಲ ಮದುವೆಯಾಗಿದ್ದಾರೆ. ಪೂರ್ಣಿಮಾ ಬೆಂಗಳೂರಿನಲ್ಲಿದ್ದರೆ, ಪ್ರತಿಮಾ ವಿಜಯಪುರದಲ್ಲಿದ್ದು ಕೊನೆ ಮಗಳಾದ ರೂಪದರ್ಶಿ ದೆಹಲಿಯಲ್ಲಿದ್ದಾರೆ.

ಅವರಲ್ಲಿ ಹಿರಿಯ ಮಗಳ ಗಂಡ ಎರಡು ವರ್ಷಗಳ ಹಿಂದೆಯೇ ಕ್ಯಾನ್ಸರ್ ಕಾರಣಕ್ಕೆ ನಿಧನರಾದರು. ವಿಜಯಪುರದಲ್ಲಿರುವ ಹಿರಿಯ ಮಗಳ ಆಸ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿತ್ತು, ಅದು ಕೂಡಾ ಇತ್ತೀಚೆಗೆ ರಾಜಿ ಸಂಧಾನದ ಮೂಲಕ ಬಗೆಹರಿದಿದೆ. ಹಾಗಾಗಿ ಆ ನಿಟ್ಟಿನಿಂದ ಕೊಲೆಯಾಗುವ ಸಾಧ್ಯತೆಯೂ ಕ್ಷೀಣ.

ಕೊಲೆ ಮಾಡಿದ ಇಬ್ಬರು ಯುವಕರು ಹೆಗಲಿಗೆ ಬ್ಯಾಗ್ ಹಾಕಿಕೊಂಡು ವಿದ್ಯಾರ್ಥಿಗಳ ಸೋಗಿನಲ್ಲೇ ಬಂದಿದ್ದರು. ಡಾ. ಕಲಬುರ್ಗಿಯವರ ಜೊತೆ ಚರ್ಚಿಸಲು ದಿನನಿತ್ಯ ಹಲವಾರು ಸಾಹಿತಿಗಳು, ಚಿಂತಕರು ಮತ್ತು ವಿದ್ಯಾರ್ಥಿಗಳೂ ಬರುತ್ತಿದ್ದರು. ಕನ್ನಡದಲ್ಲಿ ಮಾತನಾಡಿ 'ಸರ್ ಅವರನ್ನು ಭೇಟಿಯಾಗಬೇಕು' ಎಂದಾಗ ಪತ್ನಿ ಉಮಾದೇವಿ ಅಂತಹುದೇ ವಿದ್ಯಾರ್ಥಿಗಳಿರಬೇಕೆಂದು ಭಾವಿಸಿ ಬಾಗಿಲು ತೆಗೆದು ತಮ್ಮ ಕೆಲಸದಲ್ಲಿ ತೊಡಗಿಕೊಂಡಿದ್ದರು. ಹುಬ್ಬಳ್ಳಿಯ ಬಿವಿಬಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿರುವ ಮಗನನ್ನು ನೋಡಲು ವಾರದ ಹಿಂದಷ್ಟೆ ದೆಹಲಿಯಿಂದ ಬಂದಿದ್ದ ಮಗಳು ರೂಪದರ್ಶಿ ತಮ್ಮ ಪಾಡಿಗೆ ತಾವು ಕೋಣೆಯಲ್ಲಿದ್ದರು.

ಕಲಬುರ್ಗಿಯವರನ್ನು ಕಂಡೊಡನೆ ಅವರ ಮೇಲೆ ಗುಂಡು ಹಾರಿಸಿ ಆಗಂತುಕರು ಪರಾರಿಯಾದರು. ಗುಂಡಿನ ಸದ್ದು ಕೇಳಿಸಿಕೊಂಡ ಮೇಲಷ್ಟೆ ಮಗಳು ಮತ್ತು ಅವರ ಪತ್ನಿ ಹೊರಬಂದದ್ದು.

1987ರಲ್ಲಿ ಧಾರಾವಾಡದ ಕಲ್ಯಾಣನಗರ ಸಮೀಪದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಕ್ವಾಟರ್ಸ್‌ನಲ್ಲಿದ್ದ ಕಾನೂನು ಪ್ರಾಧ್ಯಾಪಕ ಶೇಷಾದ್ರಿ ಅವರನ್ನು ಕೂಡಾ ವಿದ್ಯಾರ್ಥಿಗಳ ಸೋಗಿನಲ್ಲಿ ಬಂದು ಗುಂಡಿಟ್ಟು ಕೊಲ್ಲಲಾಗಿತ್ತು, ಡಾ. ಕಲಬುರ್ಗಿಯವರ ಕೊಲೆ ಕೂಡಾ ಅದೇ ಮಾದರಿಯಲ್ಲೇ ನಡೆದಿದೆ. ನಿಖರವಾಗಿ ಹಣೆ ಮತ್ತು ಎದೆಯ ಭಾಗಕ್ಕೆ ಗುಂಡು ತಾಕಿಸಿರುವುದೇ ಕೊಲೆಗಾರ ಸುಪಾರಿ ಕಿಲ್ಲರ್



ಎಂಬುದನ್ನು ಸಾಬೀತುಪಡಿಸುತ್ತವೆ.


ಕಲಬುರ್ಗಿಯವರ ದಿನಚರಿಯ ಬಗ್ಗೆ ಅಭ್ಯಾಸ ಮಾಡಿದ್ದ ಬಲಪಂಥೀಯ ವಿಚಾರಧಾರೆಯ ಸ್ಥಳೀಯ ಯುವಕ ಇದಕ್ಕೆ ಸಾಥ್ ನೀಡಿದ್ದಾನೆ ಎಂಬ ಬಗ್ಗೆಯೂ ಮಾತುಗಳು ಕೇಳಿಬರುತ್ತಿವೆ.

ತಮ್ಮ ಕೊಲೆಯಾಗುವುದಕ್ಕೆ ಅರ್ಧಗಂಟೆ ಮೊದಲು ಚಿತ್ರದುರ್ಗದ ಇತಿಹಾಸ ಸಂಶೋಧಕ ಬಿ. ರಾಜಶೇಖರಪ್ಪ, ನಂತರ ವಿಜಯಪುರದ ಇತಿಹಾಸ ಸಂಶೋಧಕ ಕೃಷ್ಣ ಕೊಲ್ಹಾರ ಕುಲಕರ್ಣಿ ಜೊತೆ ಫೋನ್ ಸಂಭಾಷಣೆ ನಡೆಸಿದ್ದರು. ಕೊನೆಯದಾಗಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಜೊತೆ ಮಾತನಾಡುತ್ತಿದ್ದಾಗಲೇ ಕಾಲಿಂಗ್ ಬೆಲ್ ರಿಂಗಣಿಸಿದ್ದು.

"ಹಿಂದೂ ಎಂಬುದು ಧರ್ಮವೇ ಅಲ್ಲ, ಇದಕ್ಕೆ ಧರ್ಮಗ್ರಂಥವೂ ಇಲ್ಲ, ಭಗವದ್ಗೀತೆ ಹಿಂದೂಗಳ ಧರ್ಮಗ್ರಂಥವಲ್ಲ" ಎಂದಿದ್ದ ಕಲಬುರ್ಗಿಯವರ ಸತ್ಯದ ವಾದವನ್ನು ಎದುರಿಸಲಾರದೆ ಮನುವಾದಿಗಳು ಈ ಕೃತ್ಯ ನಡೆಸಿದಂತಿದೆ. ಕೇಂದ್ರದಲ್ಲಿ ಮೋದಿ ನೇತೃತ್ವದ, ಆರ್‌ಎಸ್‌ಎಸ್ ಕೃಪಾಪೋಷಿತ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಬಲಪಂಥೀಯ ಸನಾತನ ಮೂಲಭೂತವಾದದ ಕರಾಳ ಮುಖದರ್ಶನವಾಗುತ್ತಿದೆ. ದೆಹಲಿ ಚರ್ಚ್ ಮೇಲಿನ ದಾಳಿ ಇರಬಹುದು, ಘರ್‌ವಾಪಸಿಯಂತಹ ವಿಕೃತಿಗಳಿರಬಹುದು, ಯೋಗ-ಭಗವದ್ಗೀತೆಯಂತಹ ಧಾರ್ಮಿಕ ಸಂಕೇತಗಳ ರಾಷ್ಟ್ರೀಕರಣವಿರಬಹುದು, ಇವೆಲ್ಲವೂ ಭವಿಷ್ಯದ ಅಪಾಯದ ಮುನ್ಸೂಚನೆಗಳು. ಅದಕ್ಕೆ ಎಂ.ಎಂ.ಕಲಬುರ್ಗಿಯವರ ಹತ್ಯೆ ಹೊಸ ಸೇರ್ಪಡೆ. ಈ ಕೊಲೆಯ ಮೂಲಕ ಪ್ರಗತಿಪರ ಸಾಹಿತ್ಯ ಮತ್ತು ಸಂಶೋಧನಾ ವಲಯಗಳಲ್ಲಿ ಭಯ ಸೃಷ್ಟಿಸಬೇಕು ಮತ್ತು ಆ ಮೂಲಕ ತಮ್ಮ ಕೇಸರೀಕರಣ ಹಾದಿಯನ್ನು ಸುಗಮಗೊಳಿಸಿಕೊಳ್ಳಬೇಕು ಎಂಬುದೇ ಹಿಡನ್ ಅಜೆಂಡಾವಾಗಿದೆ.

■ ಹುಬ್ಬಳ್ಳಿಯಾಂವ

...ಲೆ ಕೆಟ್ಟ ಪ್ರಭಾಕರ ಭಟ್ಟ



...ಬುಧವಾರ ಬೆಳಗ್ಗೆ ಕೊಡಗಿನ ದಿನಪತ್ರಿಕೆಯೊಂದರಲ್ಲಿ ದಕ್ಷಿಣ ಕನ್ನಡದ ...ರ ಕಲ್ಲಡ್ಕ ಪ್ರಭಾಕರ ಭಟ್ಟರ ಸಂದರ್ಶನ ಪ್ರಕಟವಾಗಿತ್ತು, ಓದುಗರು ...ವನ್ನು ಓದುತ್ತಿದ್ದ ವೇಳೆಯಲ್ಲಿಯೇ ಡಾ। ಎಂ.ಎಂ. ಕಲಬುರ್ಗಿಯವರ ...ಚಾರ ಟಿವಿಗಳಲ್ಲಿ ಬಿತ್ತರಿಸಲಾಗುತ್ತಿತ್ತು, ಡಾ। ಕಲಬುರ್ಗಿಯವರ ...ಂತಹ ವೈಚಾರಿಕತೆಯನ್ನು ಒಪ್ಪಿಕೊಳ್ಳದ, ಸತ್ಯವನ್ನು ಅರಗಿಸಿಕೊಳ್ಳದ ...ದ್ದಾರೆ ಎಂಬುದು ಕಟುಸತ್ಯ.

...ವಾಗಿ ಪ್ರಭಾಕರ ಭಟ್ಟರವರ ಸಂದರ್ಶನವನ್ನು ಗಮನಿಸಿದರೆ ಇದರ ...ಸಹುದಾದಂತಹ ಸಮಾಜಘಾತುಕ ಶಕ್ತಿಗಳು ಯಾವುವು ಎಂಬುದು ...ದೆ. ಪ್ರಭಾಕರ ಭಟ್ಟರಿಗೆ ಅ'ನೈತಿಕ ಪೊಲೀಸ್‌ಗಿರಿ' ಅಗತ್ಯ ಎಂದು ...ಸಂದರ್ಶನದಲ್ಲಿ ಅ'ನೈತಿಕ ಪೊಲೀಸ್‌ಗಿರಿ' ಅಗತ್ಯವಿದೆಯೆಂದು ...ಸಿದ್ದಾರೆ. ಅಂದರೆ ದಕ್ಷಿಣ ಕನ್ನಡ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲೆಡೆ ನಡೆಯುತ್ತಿರುವ ಅ'ನೈತಿಕ ಪೊಲೀಸ್‌ಗಿರಿ'ಯ ಹಿಂದೆ ಸಂಘ ಪರಿವಾರದ ಕೈವಾಡವಿರುವುದು ಸ್ಪಷ್ಟವಾಗಿದೆ.

"ರಾಜಕಾರಣಿಗಳಿಂದ ವ್ಯವಸ್ಥೆಗಳು ಹಾಳಾಗಿವೆ, ಅಧಿಕಾರ ನಡೆಸುತ್ತಿರುವ ರಾಜಕಾರಣಿಗಳು ಪೊಲೀಸರಿಗೆ ಸರಿಯಾಗಿ ಕರ್ತವ್ಯ ನಿರ್ವಹಿಸಲು ಬಿಡುತ್ತಿಲ್ಲ, ಹಾಗಾಗಿ ಶತಮಾನಗಳಿಂದ ಹಿಂದೂ ಸಮಾಜ ಕುಗ್ಗಿಹೋಗಿದೆ. ಹಿಂದೂ ಸಮಾಜವನ್ನು ಶಾಂತಿಯ ಹೆಸರಿನಲ್ಲಿ ದುರ್ಬಲ ಮಾಡಲಾಗಿದೆ. ಆದ್ದರಿಂದ ಅಕ್ರಮ ಮತ್ತು ಅನ್ಯಾಯ ಕಂಡುಬಂದಾಗ ಪ್ರತಿಭಟನೆ ಅನಿವಾರ್ಯ" ಎಂದು ಅವರು ಹೇಳಿದ್ದಾರೆ. ಹಿಂದೂ ಸಮಾಜವನ್ನು ಸಂರಕ್ಷಿಸುವ ಜವಾಬ್ದಾರಿ ಪ್ರಭಾಕರ ಭಟ್ಟ ಮತ್ತು ಅವರ ಬಳಗದ ಮೇಲೆ ಇದೆ; ಹಾಗಾಗಿ ನೈತಿಕ ಪೊಲೀಸ್‌ಗಿರಿಗೆ ತಮ್ಮ ಬೆಂಬಲ ಎನ್ನುವಂತೆ ಅವರು ಮಾತನಾಡಿದ್ದಾರೆ.

ಇವರ ಚಿತಾವಣೆಯಿಂದಲೇ ಇಂತಹ ಘಟನೆಗಳು ನಡೆಯುತ್ತವೆ ಎನ್ನುವುದಕ್ಕೆ ಡಾ। ಕಲಬುರ್ಗಿಯವರು ಹತ್ಯೆಗೆ ಒಳಗಾದ ಸಂದರ್ಭದಲ್ಲಿ ಮಂಗಳೂರಿನಲ್ಲಿ ಟ್ವಿಟರ್‌ನಲ್ಲಿ ಭುವಿತ್ ಶೆಟ್ಟಿ ಎಂಬ ಸಂಘ ಪರಿವಾರದ ಕಾರ್ಯಕರ್ತನೊಬ್ಬ ಡಾ। ಎಂ.ಎಂ. ಕಲಬುರ್ಗಿಯವರ ರೀತಿಯಲ್ಲಿಯೇ ಪ್ರೊ। ಕೆ.ಎಸ್. ಭಗವಾನ್‌ರನ್ನು ಹತ್ಯೆ ಮಾಡಲಾಗುವುದು ಎಂಬ ಬೆದರಿಕೆಯನ್ನು ಹಾಕಿದ್ದಾನೆ.

ಅಂದರೆ ಖಂಡಿತವಾಗಿಯೂ ಈ ಹತ್ಯೆಗಳ ಹಿಂದೆ ಸಂಘ ಪರಿವಾರದ ಕೈವಾಡವಿದೆ ಎನ್ನುವುದು ಖಚಿತವಾಗುತ್ತದೆ. ಈ ಹಿಂದೆ ಡಾ। ಅನಂತಮೂರ್ತಿಯವರು ನಿಧನ ಹೊಂದಿದ ವೇಳೆಯಲ್ಲಿಯೂ, ಸಂಘ ಪರಿವಾರದವರು ಸಂಭ್ರಮಾಚರಣೆಯನ್ನು ಮಾಡಿದ್ದರು. ರೋಗಗ್ರಸ್ತ ಮನಸಿನ ವ್ಯಕ್ತಿಗಳ ಭಾವನೆಗಳು ಇದು.

ಪ್ರಭಾಕರ ಭಟ್ಟ ಇಷ್ಟಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡಿಲ್ಲ, ದೇಶದಲ್ಲಿ ಉಗ್ರರನ್ನು ಸದೆ ಬಡಿಯಬೇಕಾದರೆ ಗಲ್ಲು ಶಿಕ್ಷೆಯೇ ಅಂತಿಮ ಶಾಸ್ತಿ ಎಂದು ಹೇಳಿದ್ದಾರೆ. "ಯಾಕೂಬ್ ಮೆಮನ್ 257 ಮಂದಿ ಅಮಾಯಕರ ಹತ್ಯೆಗೆ ಕಾರಣನಾಗಿದ್ದಾನೆ. ಹಾಗೆಯೇ ಅಫ್ಜಲ್ ಗುರು ಮತ್ತು ಕಸಬ್ ಕೂಡ ಅಮಾಯಕರನ್ನು ಹತ್ಯೆ ಮಾಡಿದ್ದು, ಕ್ಷಮೆಗೆ ಆಗ್ರಹಿಸುತ್ತಿರುವವರ ಮನೆ ಮಂದಿಗೆ ಅನ್ಯಾಯವಾಗಿದ್ದರೆ ಕ್ಷಮಿಸುತ್ತಿದ್ದರೇ ಎಂದು ಅವರು ಪ್ರಶ್ನಿಸಿದ್ದು, ಉಗ್ರರ ಗಲ್ಲು ಶಿಕ್ಷೆಗೆ ಕೋಟ್ಯಂತರ ಮಂದಿ ಖುಷಿ ಪಟ್ಟಿದ್ದಾರೆ. ಉಗ್ರರ ಪರವಾಗಿರುವವರು ಗಲ್ಲು ಶಿಕ್ಷೆಯ ಹಿಂದಿನ ರಾತ್ರಿಯವರೆಗೂ ನ್ಯಾಯಾಲಯದ ಕದ ತಟ್ಟಿದ್ದಾರೆ. ನ್ಯಾಯಾಲಯ ನ್ಯಾಯವನ್ನು ಒದಗಿಸಿದೆ. ಉಗ್ರರಿಗೆ ಮಾನವೀಯತೆ ಅಲ್ಲ, ಗಲ್ಲು ಶಿಕ್ಷೆಯೇ ಅಗತ್ಯ. ಇದರಿಂದ ಉಗ್ರರನ್ನು ಹತೋಟಿಯಲ್ಲಿ ಇಡಬಹುದು" ಎನ್ನುವುದರ ಮೂಲಕ ತನ್ನ ಮಾನಸಿಕ ಸ್ಥಿತಿ ಏನು ಎಂಬುದನ್ನು ಪ್ರದರ್ಶಿಸಿದ್ದಾರೆ.

ಇದರ ಜೊತೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯಾಗಬೇಕು. "ದೇಶದ ಹಿತ ಕಾಯುವಂತಹ ಶಿಕ್ಷಣವನ್ನು ಜಾರಿಗೆ ತರಬೇಕು. ಹಿಂದೆ ಮುರಳಿ ಮನೋಹರ್ ಜೋಷಿ ಬದಲಾವಣೆ ತರಲು ಪ್ರಯತ್ನಿಸಿದಾಗ ಕೇಸರೀಕರಣ ಎನ್ನಲಾಯಿತು. ದೇಶದ ಧರ್ಮ, ಸಂಸ್ಕೃತಿ, ಜೀವನ ಮೌಲ್ಯವನ್ನು ಉಳಿಸುವ ಹೋರಾಟ ಇದಾಗಿತ್ತು. ಇದು ಜಾರಿಯಾಗದೇ ಇರುವುದರಿಂದ ನಮ್ಮಲ್ಲಿ ಮಹಾಪುರುಷರ ಬಗ್ಗೆ ಗೌರವವಿಲ್ಲ" ಎಂದಿದ್ದಾರೆ. ಅವರ ಲೆಕ್ಕದಲ್ಲಿ ಮಹಾತ್ಮ ಗಾಂಧಿ, ನೆಹರೂ ಮುಂತಾದವರು ಮಹಾಪುರುಷರಲ್ಲ, ಗೋಡ್ಸೆಯಂತಹವರು ಮಹಾಪುರುಷರು.

ಅ'ನೈತಿಕ ಪೊಲೀಸ್‌ಗಿರಿ'ಯನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳುವ ಪ್ರಭಾಕರ ಭಟ್ಟ ಮತ್ತು ಅವರ ತಂಡದ ಚಟುವಟಿಕೆಗಳನ್ನು ರಾಜ್ಯ ಸರಕಾರ ನಿಯಂತ್ರಿಸಲೇಬೇಕಾದಂತಹ ಅಗತ್ಯತೆ ಇದೆ. ಜೊತೆಗೆ ಡಾ। ಎಂ.ಎಂ. ಕಲಬುರ್ಗಿಯವರ ಹತ್ಯೆಯ ಹಿಂದಿನ ತನಿಖೆಯನ್ನು ಇಲ್ಲಿಂದಲೇ ಆರಂಭಿಸಬೇಕಾಗುತ್ತದೆ.


■ ಬಿ.ಎನ್. ಮನುಶೆಟ್ಟಿ

ನೈತಿಕ ಪೊಲೀಸ್‌ಗಿರಿ ಬೇಕೆಂದ ಸುಬ್ಬಯ್ಯ

ಪ್ರಭಾಕರ ಭಟ್ಟರ ಸಂದರ್ಶನ ಪ್ರಕಟವಾದ ದಿನವೇ ಎ.ಕೆ. ಸುಬ್ಬಯ್ಯನವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ನೈತಿಕ ಪೊಲೀಸ್‌ಗಿರಿ ಅಗತ್ಯ ಎಂದು ಪ್ರಭಾಕರ ಭಟ್ಟ ಹೇಳಿರುವುದರ ಬಗ್ಗೆ ಪ್ರತಿಕ್ರಿಯಿಸಿ "ನನಗೂ ನೈತಿಕ ಪೊಲೀಸ್‌ಗಿರಿ ಅಗತ್ಯ ಎಂದು ಅನಿಸುತ್ತದೆ. ಪ್ರಭಾಕರ ಭಟ್ಟರಂತಹ ವ್ಯಕ್ತಿಗಳು ಇಂತಹ ಮಾತುಗಳನ್ನು ಆಡುವಾಗಲೇ ಅವರಿಗೆ ಒದೆ ಬೀಳಬೇಕು. ಅದಕ್ಕಾಗಿಯಾದರೂ ನೈತಿಕ ಪೊಲೀಸ್‌ಗಿರಿ ಅಗತ್ಯ" ಎಂದಿದ್ದಾರೆ!



ಈರುಳ್ಳಿ ರಾಜಕೀಯ



ಈರುಳ್ಳಿ ಭಾರತೀಯರ ಮಟ್ಟಿಗೆ ಅತಿ ಅಗತ್ಯವಾದ ನಿತ್ಯಬಳಸುವ ತರಕಾರಿ. ಕ್ಷಮಿಸಿ, ಹೀಗೆ ಇಡಿಯಾಗಿ ಭಾರತೀಯರ ಖಾದ್ಯ ಎಂದುಬಿಟ್ಟರೆ ಕೆಲವು ಕಟ್ಟರ್ ಪಂಥೀಯ ಬ್ರಾಹ್ಮಣರು ಮತ್ತು ಜೈನರು ಆಕ್ಷೇಪಿಸಬಹುದು. ಹೀಗೆ ಈರುಳ್ಳಿ ತಿನ್ನದ 'ಶೇಕಡ 3 -4ರಷ್ಟು ಜನಸಂಖ್ಯೆಯನ್ನು ಹೊರತುಪಡಿಸಿ' ಎನ್ನುವುದು ಸೂಕ್ತ. ಇಂಥಾ ಈರುಳ್ಳಿಯ ಬೆಲೆ ಈಗ ಗಗನಕ್ಕೇರಿ ಮುಖಪುಟದ ಸುದ್ದಿಯಾಗುತ್ತಿದೆ.


ದೇಶದ ಒಟ್ಟಾರೆ ಆರ್ಥಿಕತೆಯಲ್ಲಿ ಈರುಳ್ಳಿಯ ಪಾತ್ರ ತೀರಾ ನಗಣ್ಯವೇ ಇರಬಹುದು. ಆದರೆ ರಾಜಕಾರಣದಲ್ಲಿ ದಿನೇ ದಿನೇ ಈರುಳ್ಳಿ ಹೆಚ್ಚೆಚ್ಚು ಮಾನ್ಯತೆ ಪಡೆದುಕೊಳ್ಳುತ್ತಿದೆ. ಹೀಗಾಗಿ ದಿನಪತ್ರಿಕೆಗಳ ಹೆಡ್‌ಲೈನ್‌ಗಳಲ್ಲೂ ಅದರದೇ ಸುದ್ದಿ. ಬೆಲೆಯೇರಿಕೆ ಬಗ್ಗೆ ಮಾತು ಬಂತೆಂದರೆ ಈರುಳ್ಳಿ ಪ್ರಸ್ತಾಪವಿಲ್ಲದೆ ಚರ್ಚೆ ಅಪೂರ್ಣ. ಅಸೆಂಬ್ಲಿ - ಪಾರ್ಲಿಮೆಂಟುಗಳಲ್ಲೂ ಭಾರೀ ಗದ್ದಲ ಮಾಡುತ್ತಿರುವ ಈರುಳ್ಳಿ ಬೆಲೆಯೇರಿಕೆ ಪ್ರಮುಖ ವಿವಾದಾಸ್ಪದ ವಿಷಯವಾಗಿ ಪರಿಣಮಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಈರುಳ್ಳಿ ಬೆಲೆ ಬಗ್ಗೆ ಚಿತ್ರವಿಚಿತ್ರ ಜೋಕುಗಳು ಸೃಷ್ಟಿಯಾಗಿ ಜನರಿಗೆ ಮನರಂಜನೆ ಒದಗಿಸುತ್ತಿವೆ. ಈ ಹಿಂದೆ 1998ರ ಚುನಾವಣೆಯಲ್ಲಿ ದೆಹಲಿ ಮತ್ತು ರಾಜಸ್ಥಾನಗಳ ಸರ್ಕಾರಗಳು ಕುಸಿದುಬೀಳಲು ಈರುಳ್ಳಿ ಬೆಲೆಯೇರಿಕೆ ಕಾರಣ ಎಂದು ಮಾಧ್ಯಮಗಳು ವಿಶ್ಲೇಷಿಸಿದ್ದವು. 1980ರಲ್ಲಿ ಕೇಂದ್ರ ಸರ್ಕಾರ ಬೀಳುವುದರಲ್ಲಿ ಕೂಡ ಈರುಳ್ಳಿ ರಾಜಕೀಯ ಇದೆ ಎಂಬುದು ಕೆಲ ರಾಜಕೀಯ ವಿಶ್ಲೇಷಕರ ಮಾತು.

ಈ ಮಾತಿಗೆ ಪುರಾವೆಯೆಂಬಂತೆ ಈ ಹಿಂದೆ ಬಿಜೆಪಿ ಪಕ್ಷ ತನ್ನ ಕಾರ್ಯಕರ್ತರ ಕೊರಳಿಗೆ ಈರುಳ್ಳಿ ಹಾರ ಹಾಕಿ ಪ್ರತಿಭಟನಾ ಮೆರವಣಿಗೆ ನಡೆಸಿತ್ತು. 2010ರಲ್ಲಿ ಹೀಗೆ ಬೆಲೆಯೇರಿಕೆಯಾದಾಗ ಪ್ರಧಾನಿ ಮನಮೋಹನ್‌ಸಿಂಗ್ ಖುದ್ದಾಗಿ ಈರುಳ್ಳಿ ಬೆಲೆ ನಿಯಂತ್ರಣದ ಬಗ್ಗೆ ಮಾತಾಡಬೇಕಾಗಿ ಬಂದಿತ್ತು.

ಈಗ ಮತ್ತೆ ಈರುಳ್ಳಿ ರಾಜಕೀಯ ಪಡಸಾಲೆಗಳಲ್ಲಿ ಜಾಗ ಪಡೆದುಕೊಂಡಿದೆ. ಆಂಧ್ರ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಕಡಿಮೆ ದರದಲ್ಲಿ ಪಡಿತರದ ಮೂಲಕ ಈರುಳ್ಳಿ ಸರಬರಾಜು ಮಾಡಲು ಕ್ರಮ ಕೈಗೊಂಡಿವೆ. ತೆಲಂಗಾಣ ಸರ್ಕಾರ 20 ರೂಪಾಯಿಗೆ ಒಂದು ಕೆಜಿಯಂತೆ ರೈತ ಬಜಾರ್ ಹೆಸರಿನಲ್ಲಿ ನೇರವಾಗಿ ರೈತರಿಂದಲೇ ಗ್ರಾಹಕರಿಗೆ ಈರುಳ್ಳಿ ಹಂಚುವ ಯೋಜನೆ ಹಾಕಿಕೊಂಡಿದೆ. ಅದೂ ಒಂದು ಕಾರ್ಡಿಗೆ 2 ಕೆಜಿ ಮಾತ್ರ. ಅದಕ್ಕೂ ನೂಕುನುಗ್ಗಲು ಜಾಸ್ತಿಯಾಗುತ್ತಿದ್ದಂತೆ ಒಂದು ಕೆಜಿಗೆ ಇಳಿಸಲಾಗಿದೆ. ಕೈಯಲ್ಲಿ ಆಧಾರ್ ಕಾರ್ಡ್, ಓಟರ್ ಐಡಿ ಇತ್ಯಾದಿ ಹಿಡಿದುಕೊಂಡು ಈರುಳ್ಳಿ ಖರೀದಿ ಮಾಡಲು ಜನರು ಉದ್ದನೆಯ ಕ್ಯೂನಲ್ಲಿ ನಿಲ್ಲುವುದು ಚಾನೆಲ್‌ಗಳಿಗೆ ಹಬ್ಬದೂಟ. ಕ್ಯೂನಲ್ಲಿ ನಿಂತು ಈರುಳ್ಳಿ ಪಡೆದುಕೊಂಡ ನಂತರ ಮತ್ತೊಮ್ಮೆ ಕ್ಯೂನಲ್ಲಿ ನಿಲ್ಲುವುದನ್ನು ತಪ್ಪಿಸಲು ಮತದಾರರಿಗೆ ಶಾಯಿ ಗುರುತು ಹಚ್ಚುವಂತೆ ಬೆರಳಿಗೆ ಇಂಕ್ ಮಾರ್ಕ್ ಹಾಕಲಾಗುತ್ತದಂತೆ.

ಈ ಜನಪ್ರಿಯ ಯೋಜನೆಯನ್ನು ಕಂಡು ಕೋಲ್ಕತ್ತದಲ್ಲೂ ಮಮತಾ ದೀದಿ ಈರುಳ್ಳಿ ಹಂಚಲು ಆರಂಭಿಸಿದ್ದಾರೆಂದು ಸುದ್ದಿ. ಹೀಗಿರುವಾಗ. ಮಹಾರಾಷ್ಟ್ರದ ಮಂಡಿಯೊಂದರಲ್ಲೊಬ್ಬ ರೈತನ 700 ಕೆಜಿ ಹಾಗೂ ಮತ್ತೊಬ್ಬ ರೈತನ 2000 ಕೆಜಿ ಈರುಳ್ಳಿ ಕಳವಾಯಿತು. ನಂತರದ ದಿನಗಳಲ್ಲಿ ಹೈದರಾಬಾದ್ ಮತ್ತು ವಿಶಾಖಪಟ್ಟಣಗಳ ಈರುಳ್ಳಿ ಮಾರುಕಟ್ಟೆಗಳಲ್ಲಿ ಸಿಸಿಟಿವಿಗಳನ್ನು ಹಾಕಲಾಗಿಧೆ. ಪೊಲೀಸ್ ಕಾವಲು ಹಾಕಿ ಐಡಿ ಕಾರ್ಡ್ ಚೆಕ್ ಮಾಡಿದ ನಂತರವೇ ಮಾರುಕಟ್ಟೆ ಆವರಣಕ್ಕೆ ಪ್ರವೇಶ ಅನುಮತಿ! ಈರುಳ್ಳಿಗೆ ಎಂಥ ಯೋಗ ಬಂತಪ್ಪ ?!



ಈರುಳ್ಳಿಗೆ ರಾಜಕೀಯದ ಹಿಂದಿನ ಮರ್ಮವೇನು?

ಭಾರತದಲ್ಲಿ ಈರುಳ್ಳಿ ಬೆಳೆಯುವವರಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರದೇ ನಿರ್ಣಾಯಕ ಪಾಲು. ಮಹಾರಾಷ್ಟ್ರ ಮತ್ತು ಕರ್ನಾಟಕ ಎರಡು ರಾಜ್ಯಗಳಲ್ಲೇ ಅರ್ಧದಷ್ಟು ಈರುಳ್ಳಿ ಉತ್ಪಾದನೆಯಾಗುತ್ತದೆ. ಬೆಲೆ ಎಷ್ಟೇ ಏರಿದರೂ ರೈತರಿಗೆ ದಕ್ಕುವುದು ಬಿಡಿಗಾಸು ಮಾತ್ರವೇ. ಈಗ ಕೆಜಿ ಈರುಳ್ಳಿ ಸರಾಸರಿ 70 ರೂಪಾಯಿಗೆ ಮಾರಾಟವಾಗುತ್ತಿದ್ದರೆ ರೈತರಿಗೆ ಸಿಗುವುದು ಕೇವಲ 10ರಿಂದ 14 ರೂಪಾಯಿ ಮಾತ್ರ.

ಈಗ ಇದ್ದಕ್ಕಿದ್ದಂತೆ ಈರುಳ್ಳಿ ಬೆಲೆಯೇರಿಕೆಯಾಗಲು ಬರಗಾಲ, ಕಡಿಮೆ ಉತ್ಪಾದನೆ ಕಾರಣ ಎಂದು ಬಹಳಷ್ಟು ಮಂದಿ ನಂಬಿಕೊಂಡಿದ್ದಾರೆ. ಆದರೆ ವಾಸ್ತವದಲ್ಲಿ ವರ್ಷದಿಂದ ವರ್ಷಕ್ಕೆ ಉತ್ಪಾದನೆ ಹೆಚ್ಚುತ್ತಾ ಸಾಗಿದೆ. 2007-08ರಲ್ಲಿ 9.14 ದಶಲಕ್ಷ ಟನ್ ಇದ್ದ ಈರುಳ್ಳಿ ಉತ್ಪಾದನೆ 2014-15ರಲ್ಲಿ 19.36 ದಶಲಕ್ಷ ಟನ್‌ಗಳಿಗೆ ಏರಿದೆ. ಇಂದಿನ ಒಟ್ಟಾರೆ ದೇಶದ ಈರುಳ್ಳಿ ಬೇಡಿಕೆ ಸುಮಾರು 17 ದಶಲಕ್ಷ ಟನ್‌ಗಳು. ಒಂದಷ್ಟು ಪ್ರಮಾಣದ ಸರಕು ವಿದೇಶಗಳಿಗೆ ರಫ್ತಾಗುತ್ತದೆ. ಈ ವರ್ಷದ ಉತ್ಪಾದನೆ ಕೂಡ 18.9 ದಶಲಕ್ಷ ಟನ್‌ಗಳಷ್ಟಿದ್ದು ತೃಪ್ತಿಕರ ಮಟ್ಟದಲ್ಲಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಶೇ 3ರಷ್ಟು ಮಾತ್ರ ಕಡಿಮೆ ಉತ್ಪಾದನೆಯಾಗಿದೆ.

ಹಾಗಿದ್ದರೆ ಉತ್ಪಾದನೆ ಕುಂಠಿತ ಕಾರಣವಲ್ಲ ಎಂದಾಯ್ತು. ಬೇರೆ ಏನು ಕಾರಣ ಇರಬಹುದು?

ಕಾರಣ ವಿಚಿತ್ರ ಎನಿಸಿದರೂ ಅದೇ ಸತ್ಯ. ಇಡೀ ದೇಶದ ಈರುಳ್ಳಿ ವ್ಯಾಪಾರ ಕೆಲವೇ ಕುಟುಂಬಗಳ ಏಕಸ್ವಾಮ್ಯಕ್ಕೆ ಸಿಲುಕಿದ್ದು ಈ ಆಗಾಗ್ಗೆ ಸಣ್ಣಪುಟ್ಟ ನೆಪಗಳನ್ನು ಹಿಡಿದು ದಾಸ್ತಾನುಗಳನ್ನು ಬಚ್ಚಿಟ್ಟು ಬೆಲೆಯೇರಿಸಿ ಕೋಟಿಕೋಟಿಗಳನ್ನು ಬಾಚುತ್ತಿದ್ದಾರೆ. ಒಂದು ಉ ನೋಡಿ. ಇಡೀ ದೇಶದ ಈರುಳ್ಳಿ ಮಾರುಕಟ್ಟೆಯಲ್ಲಿ ಸುಮಾರು ಅ ವಹಿವಾಟು ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಲಸಾಲ್‌ಗಾಂವ್‌ನಲ್ಲಿ ನ ಇದಕ್ಕೆ ಏಷ್ಯಾದಲ್ಲೇ ಅತಿದೊಡ್ಡ ಈರುಳ್ಳಿ ಮಾರುಕಟ್ಟೆ ಎಂಬ ಹೆಗ್ಗ ಇಲ್ಲಿ ಕೇವಲ 40 - 50 ವರ್ತಕರು ಇಡೀ ವಹಿವಾಟನ್ನು ನಿಯಂ ಅಷ್ಟು ಮಾತ್ರವಲ್ಲ ಅವರೆಲ್ಲರೂ ಬೆರಳೆಣಿಕೆಯಷ್ಟು ಕುಟುಂಬಗಳಿಗೆ ಸೆ ಆಗಿದ್ದಾರೆ. ಅದರಲ್ಲಿ ಮಾರ್ವಾಡಿ ಜೈನ್‌ಗಳದೇ ಪ್ರಾಬಲ್ಯ. ಈರು ವ್ಯಾಪಾರದಿಂದ ಹಿಡಿದು ಸಾಗಾಣಿಕೆಯವರೆಗೂ ಇವರದೇ ಏಕಸ್ವಾಮ್ಯ ಸ ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರ ಎಪಿಎಂಸಿ ಕಾಯ್ದೆಯಲ್ಲಿ ತಿದ್ದುಪ ರಿಲಯನ್ಸ್, ಫ್ಯೂಚರ್ ಗ್ರೂಪ್ ಮುಂತಾದ ಕಾರ್ಪೋರೇಟ್ ಕಂಪ ಲೈಸೆನ್ಸ್ ಒದಗಿಸಲಾಗಿದೆ.

ಈ ಸಮಸ್ಯೆಯ ಬಗ್ಗೆ ಬೆಂಗಳೂರಿನ ಐಸೆಕ್ ಸಂಸ್ಥೆ ಒಂದು ಕೈಗೊಂಡಿತ್ತು. 2012ರಲ್ಲಿ ಅದು ಕೊಟ್ಟ ವರದಿಯಲ್ಲಿ ಈ ಮಹಾರಾಷ್ಟ್ರ ಮತ್ತು ಕರ್ನಾಟಕದ ಈರುಳ್ಳಿ ವ್ಯಾಪಾರದ ಮೇಲೆ ಸ್ಥಾಪಿಸಿರುವ ಬಗ್ಗೆ ವಿವರಿಸಲಾಗಿದೆ. ಒಬ್ಬನೇ ವರ್ತಕ ಶೇ 20ರಷ್ಟು ವಾ ನಿಯಂತ್ರಿಸುತ್ತಿದ್ದುದನ್ನು ದಾಖಲಿಸಿದ್ದಾರೆ. ಮುಕ್ತ ಹರಾಜು ಎಂಬ ಇಲ್ಲಿ ಅನ್ವಯಿಸುವುದೇ ಇಲ್ಲ. ಈ ವ್ಯಾಪಾರಿಗಳ ದುಷ್ಟಕೂಟ ರೈತರಿಗೆ ನಾಮ ಹಾಕಿದರೆ, ಮತ್ತೊಂದು ಕಡೆ ಗ್ರಾಹಕರ ಜೇಬ ಹಾಕುತ್ತಿದ್ದಾರೆ.

ಇದಕ್ಕೆ ಪುರಾವೆ ಎಂಬಂತೆ 2011ರಲ್ಲಿ ನಡೆದ ಘಟನೆ ನೋಡಿ. ಜನವರಿ 7ನೇ ತಾರೀಖು ಅಂದಿನ ಹಣಕಾಸು ಸಚಿವ ಪ್ರಣಬ್ ಈರುಳ್ಳಿ ಬೆಲೆ ನಿಯಂತ್ರಣಕ್ಕೆ ಒಂದು ಕ್ರಮ ತೆಗೆದುಕೊಂಡರು. ಲಸಾ ಸುತ್ತಲಿನ ದೊಡ್ಡ ದೊಡ್ಡ ವರ್ತಕರ ಗೋದಾಮುಗಳ ಮೇಲೆ ತೆರಿಗೆ ಅಧಿಕಾರಿಗಳಿಂದ ದಾಳಿ ಮಾಡಿಸಿದರು. ರಾತ್ರಿ ದಾಳಿಯಾಗಿ ಬೆಳಗಾಗುವುದರೊಳಗೆ ಈರುಳ್ಳಿಯ ಬೆಲೆ ಶೇ 60ರಷ್ಟು ಇಳಿಕೆ

ಈ ವ್ಯಾಪಾರಿಗಳು ಕೇವಲ ಲಾಭಬಡುಕರು ಮಾತ್ರವಲ್ಲ; ರ ದಾಳಗಳಾಗಿಯೂ ಕೆಲಸ ಮಾಡುತ್ತಾರೆಂಬ ಆರೋಪವಿದೆ. ಶರದ್ ಎನ್‌ಸಿಪಿ, ಬಿಜೆಪಿ ಮತ್ತು ಕಾಂಗ್ರೆಸ್ ಎಲ್ಲ ಪಕ್ಷಗಳೂ ಈರುಳ್ಳಿ ವ ಕೈವಾಡ ನಡೆಸುತ್ತಿದ್ದಾವೆ.

ಈಗ ಬಿಹಾರದ ಚುನಾವಣೆ ಸಮೀಪಿಸುತ್ತಿರುವುದರಿಂದ ಮೋದಿ ಕೀಕಲಾಟ. ಹೀಗಾಗಿ ರಫ್ತಿನ ಮೇಲೆ ನಿರ್ಬಂಧ ವಿಧಿಸಿದೆ; ಕೂಡಲೆ ಆಮದಿಗೆ ಮುಂದಾಗಿದೆ. ಈಜಿಪ್ಟ್‌ನಿಂದ 200 ಕಂಟೈನರ್‌ಗಳು ಮಾರ್ಗದಲ್ಲಿ ಸಾಗಿ ಮುಂಬೈ ಕಡೆಗೆ ಬರುತ್ತಿವೆಯಂತೆ. ಆಫ್ಘಾನಿಸ್ತಾನದಿಂದ ಭೂಮಾರ್ಗದಲ್ಲಿ ದೆಹಲಿಗೆ ಟ್ರಕ್ಕುಗಳಲ್ಲಿ ಈರುಳ್ಳಿ ಬರುತ್ತಿದೆಯಂತೆ. ಒಂದೆರಡು ವಾರಗಳಲ್ಲಿ ಬೆಲೆ ನಿಯಂತ್ರಣ ಬರಬ ಅಂದಾಜಿಸಲಾಗಿದೆ.


ಕಳ್ಳದಾಸ್ತಾನುದಾರರ ಮೇಲೆ ಕ್ರಮ ಕೈಗೊಂಡು, ರಫ್ತಿನ ಮೇ ನಿಯಂತ್ರಣ ಹಾಕಿದರೆ ದೇಶೀ ಮಾರುಕಟ್ಟೆಯಲ್ಲಿ ಈರುಳ್ಳಿ ಸರ ಸಮತೋಲನ ಕಾಪಾಡುವುದು ಅಷ್ಟೊಂದು ಕಷ್ಟದ ಸಂಗತಿಯೇನ ಇಚ್ಛಾಶಕ್ತಿ ಅಂತ ಒಂದಿರಬೇಕಲ್ಲ, ಅದೇ ಇಲ್ಲದಿದ್ದರೆ ...?

■ ದೊಡ್ಡಿಪಾಳ್ಯ ನರಸಿಂಹಮ

ಮೋದಿ ಕಾನೂನಿಗೆ ಸೋಲು

ಮೋದಿ ಜಾರಿಗೆ ತರಲು ಹೊರಟಿದ್ದ ಒಂದು ಸರ್ವಾಧಿಕಾರಿ ಕಾನೂನಿಗೆ ಗುಜರಾತ್‌ನ ಹೈಕೋರ್ಟ್ ಆಗಸ್ಟ್ 20ನೇ ತಾರೀಕು ತಡೆಯಾಜ್ಞೆ ನೀಡಿದೆ.

2011ರಲ್ಲಿ ಆಗಿನ ಸಿಎಂ ಮೋದಿ ನೇತೃತ್ವದಲ್ಲಿ ಗುಜರಾತ್ ಸರ್ಕಾರ ಮಸೂದೆಯೊಂದನ್ನು ಅಂಗೀಕರಿಸಿತ್ತು. "ಗುಜರಾತ್ ಸ್ಥಳೀಯ ಸಂಸ್ಥೆಗಳ ಕಾನೂನು(ತಿದ್ದುಪಡಿ) ಮಸೂದೆ - 2009" ಎಂಬ ಹೆಸರಿನ ಈ ಕಾನೂನು ಸ್ಥಳೀಯ ಚುನಾವಣೆಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ಮತ ಚಲಾವಣೆ ಮಾಡುವುದನ್ನು ಕಡ್ಡಾಯಗೊಳಿಸಿತ್ತು. ಮತ ಚಲಾವಣೆ ಮಾಡದವರಿಗೆ ದಂಡ ವಿಧಿಸುವ ಪ್ರಸ್ತಾಪವೂ ಈ ಮಸೂದೆಯಲ್ಲಿತ್ತು. ಇದು ವಿಧಾನಸಭೆಯಲ್ಲಿ ಪಾಸಾದರೂ ರಾಜ್ಯಪಾಲರ ಅಂಕಿತ ಬಿದ್ದಿರಲಿಲ್ಲ. ಆಗಿನ ರಾಜ್ಯಪಾಲರಾಗಿದ್ದ ಶ್ರೀಮತಿ ಕಮಲ ಬೇನಿವಾಲ್ ಈ ಕಡತಕ್ಕೆ ಸಹಿ ಹಾಕದೆ ವಾಪಸ್ ಕಳಿಸಿದ್ದರು. ಈ ಕಾನೂನು ಪ್ರಜೆಗಳ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುವುದರಿಂದ ಈ ಅಂಶವನ್ನು ಮರುಪರಿಶೀಲಿಸಬೇಕೆಂದು ಸರ್ಕಾರಕ್ಕೆ ಕಿವಿಮಾತು ಹೇಳಿದ್ದರು.




ಹಲವು ಸಂವಿಧಾನ ತಜ್ಞರು ಈ ಕಾನೂನನ್ನು ವಿರೋಧಿಸಿದ್ದರು. ಅಷ್ಟೇ ಏಕೆ, ಚುನಾವಣಾ ಆಯುಕ್ತ ಎಚ್ ಎಸ್ ಬ್ರಹ್ಮ ಕೂಡ ಇದು ಅಪ್ರಾಯೋಗಿಕ ಕಾನೂನು ಎಂದು ಅಭಿಪ್ರಾಯಪಟ್ಟಿದ್ದರು. ಯಾರು ಏನೇ ಹೇಳಲಿ, ಮೋದಿ ತನ್ನ ಕತ್ತೆಗೆ ಮೂರೇ ಕಾಲು ಎಂದರೆ ಎಲ್ಲರೂ ಹೂಂಗುಡುತ್ತಾರೆಂದು ನಂಬಿದವರು. ತಾನು ಪ್ರಧಾನಿ ಪಟ್ಟಕ್ಕೇರಿ ಗುಜರಾತ್ ರಾಜ್ಯಪಾಲರ ಹುದ್ದೆಗೆ ಆರೆಸ್ಸೆಸ್ ಪಟು ಓಂಪ್ರಕಾಶ್ ಕೋಹ್ಲಿಯನ್ನು ನೇಮಿಸಿಕೊಂಡರು. ವಿರೋಧ ಪಕ್ಷಗಳ ಪ್ರತಿರೋಧವನ್ನು ಲೆಕ್ಕಿಸದೆ ಕಳೆದ 2014ರಲ್ಲಿ ಸಿಎಂ ಆನಂದಿಬೆನ್ ಪಟೇಲ್ ಮತ್ತೊಮ್ಮೆ ಇದೇ ಮಸೂದೆಯನ್ನು ಅಸೆಂಬ್ಲಿಯಲ್ಲಿ ಮಂಡಿಸಿ ಪಾಸ್ ಮಾಡಿಸಿದರು. ನಿರೀಕ್ಷೆಯಂತೆ ಇದಕ್ಕೆ ರಾಜ್ಯಪಾಲ ಕ ಅಂಕಿತವೂ ಬಿದ್ದು ಕಾನೂನಾಗಿಬಿಟ್ಟಿತು.

ಗುಜರಾತ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚ ಸಮೀಪಿಸುತ್ತಿರುವುದರಿಂದ ಈ ಮೂಲಕ ತಮ ಮತ ಬರುತ್ತದೆಂಬುದು ಮೋದಿ ಹವಣಿಕೆಯಾಗಿತ್ತು. ಆದರೆ ಅಷ್ಟರಲ್ಲಿ ಹೈ ವಕೀಲರೊಬ್ಬರು ಈ ಕಾನೂನಿನ ಸಂವಿಧಾನಬ ಪ್ರಶ್ನಿಸಿ ಸಾರ್ವಜನಿಕ-ಹಿತಾಸಕ್ತಿ ಮೊಕದ್ದಮೆ ಹ ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್ ಪಿ ಕಾನೂನಿಗೆ ತಡೆಯಾಜ್ಞೆ ಕೊಟ್ಟಿದೆ. ಆ ಮೂಲ ಹಾಕದ ಮತದಾರರಿಗೆ ಅಧಿಕಾರಿಗಳ ಕಿರುಕುಳ ಸದ್ಯಕ್ಕೆ ದೂರಾಗಿದೆ.

ಭಾರತದ ಪ್ರಜೆಗಳಿಗೆ ಓಟು ಹಾಕುವ ಹಕ್ಕ ಓಟು ಹಾಕದಿರುವ ಹಕ್ಕೂ ಕೂಡ ನಮ್ಮ ನೀಡಿದೆ. ಇದು ವಾಕ್‌ಸ್ವಾತಂತ್ರ್ಯದ ಅವಿಭಾಜ್ಯ ಸಂವಿಧಾನದ ವಿಧಿ 19(1)ರಲ್ಲಿ ಈ ಅಂಶದ ಉ ಭಾರತದಲ್ಲಿ ಮಾತ್ರವಲ್ಲ, ಯಾವುದೇ ನಾಗರಿಕ ಸಂವಿಧಾನ ಇಂಥಾ ಮೂಲಭೂತ ಹಕ ಒಳಗೊಂಡಿರುತ್ತದೆ.

ಆದರೆ ಮೋದಿ ಮಾದರಿಗೆ ಸಂವಿಧಾನ ಪ ಯಾವುದೂ ಬೇಕಿಲ್ಲ. ಈ ಮಾದರಿಗೆ ಬೇ ಪ್ರಜೆಗಳ ಮೇಲೆ ಪ್ರಭುಗಳ ಸಂಪೂರ್ಣ ಹಿ ದೇಶದಲ್ಲಿ ಸಂವಿಧಾನಕ್ಕೆ ಹೆಚ್ಚಿನ ಮಾನ್ಯತೆ ಉಳಿ ನಮ್ಮ ಅದೃಷ್ಟ.

...ಬಾಮಾನ ಆಂಜನೇಯನೂ, ಅಪ್ಪನ್ನಿನ 'ಹಿಂದು' ಶ್ರೇಣಿಯೂ



■ ಗಿರೀಶ್ ತಾಳಿಕಟ್ಟೆ

...ಮು ಸಂದೇಶ: ಅಮೆರಿಕ ಅಧ್ಯಕ್ಷ ಬರಾಕ್ ...ಯಾವಾಗಲು 'ಆಂಜನೇಯ'ನ ಗುಣಗಾನ ...ರೆ

...ರಾಜಕಾರಣಿಗಳು ಜಾತ್ಯತೀತತೆಯ ಸೋಗಲ್ಲಿ ...ಳೆ ಬೇಯಿಸಿಕೊಳ್ಳುತ್ತಿದ್ದಾರೆ)

...ವ: 2008ರ ಅಧ್ಯಕ್ಷೀಯ ಚುನಾವಣೆ ಪ್ರಚಾರದ ...ದಲ್ಲಿ 'ನಿಮ್ಮ ಅಚಲತೆಗೆ (ದೃಢತೆಗೆ) ಮುಖ್ಯ ...ನು' ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಒಬಾಮಾ ...ನಿಂದ ಒಂದೆರಡು ವಸ್ತುಗಳನ್ನು ಹೊರತೆಗೆದು ...ಇವೇ ನನ್ನ ಲಕ್ಕಿ ಚಾರ್ಮ್‌ಗಳು' ಎಂದಿದ್ದರು ... ವಸ್ತುಗಳಲ್ಲಿ ಇರಾಕ್‌ನಲ್ಲಿ ಕಾದಾಡಿದ ಒಬ್ಬ ...ಡಾಲರ್, ಮೇಸನಿಕ್ ಲಾಂಛನ ಹೋಲುವ ...ಜೊತೆಗೆ ಒಂದು **Monkey God** ಶಿಲ್ಪವೂ ...ಸಂಗತಿಯೇ ಮೇಲಿನ 'ಗುಣಗಾನ' ಹುಟ್ಟಲು ...ಮು ನಿಜ ಎನ್ನುವುದಾದರೂ ಸೈನಿಕನ ಡಾಲರ್, ... ಕಲ್ಲುಗಳಂತೆ 'ಲಕ್' ಎಂಬ ವೈಯಕ್ತಿಕ ...ಆಗಿ 'ಮಂಕಿ ಗಾಡ್' ಒಬಾಮಾರ ಬಳಿ ...ರದೇ ವಿನಾಃ ಹಿಂದೂ ಧರ್ಮದ ಮೇಲಿನ ...ವಾ ಹನುಮಾನ್ ಚಾಲೀಸ ಮಂತ್ರ ಪಠಣದ ...ನ್ನಲಿಕ್ಕಾಗದು. ಏಕೆಂದರೆ ಈ ವಸ್ತುಗಳಂತೆಯೇ ...ಕ್ರಿಶ್ಚಿಯನ್ನರಾದ ಒಬಾಮಾ ತಮ್ಮ ವಿದ್ಯಾರ್ಥಿ ...ವಲೂ ಲಕ್ಕಿ ಅಂತ ಭಾವಿಸಿಕೊಂಡೇ ...ಒಂದನ್ನು ತಮ್ಮ ಕೈಬೆರಳುಗಳಲ್ಲಿ ಜತನ ...ಡು ಬಂದಿದ್ದಾರೆ. ಅದರ ಮೇಲೆ **There is** ... **Except Allah** ಎಂದು ಬರೆಯಲಾಗಿದೆ. ...ರಾ?

...ೀ 'ಮಂಕಿ ಗಾಡ್' ಉಲ್ಲೇಖ ಬರುವುದು ...ಪುರಾಣದಲ್ಲಿ (ಆಂಜನೇಯ) ಮಾತ್ರವೇ ಅಲ್ಲ, ...ಐತಿಹ್ಯ ಸಾಂಪ್ರದಾಯಿಕ ಕೃತಿಗಳಲ್ಲೂ 'ಸುನ್' ... ಎಂಬ ಮಂಗ ಮನುಷ್ಯನ ಉಲ್ಲೇಖವಿದೆ. ...ಅತಿ ಪುರಾತನ ನಾಗರಿಕತೆಗಳಲ್ಲಿ ಒಂದೆಂದು ...ಮಾಯನ್ನರ ನಾಗರಿಕತೆಗೆ ಸೇರಿದ ವಾನರರೂಪಿ ...ಗ್ರಹಗಳು ಪತ್ತೆಯಾಗಿವೆ. ಅವುಗಳಲ್ಲಿ ಕೋಪನ್ ...ನಾಗಿರುವ 'ಹೌಲ್ಲರ್ ಮಂಕಿ' ವಿಗ್ರಹ ಕೂಡಾ ...ಯ ಗಿಡಮರ, ಪ್ರಾಣಿಪಕ್ಷಿಗಳನ್ನೇ ಆರಾಧಿಸುತ್ತಾ ...ನ ಬುಡಕಟ್ಟು (ಹಿಂದೂಧರ್ಮದ ಸಂಬಂಧವೇ ...ವು) ನಾಗರಿಕತೆಗಳಲ್ಲಿ ಮನುಷ್ಯರೂಪಿ ಮಂಗ ...ಬಿಡುವ ನಿದರ್ಶನಗಳಿರುವಾಗ ಒಬಾಮಾರ ...ೆ 'ಮಂಕಿ ಗಾಡ್' ವಿಗ್ರಹ ಹಿಂದೂ ಪುರಾಣದ ...ದ್ದೇ ಎಂದೇಳುವ ಪುರಾವೆಗಳಿಲ್ಲ, ಏಕೆಂದರೆ ... ಕೈಯಲ್ಲಿನ್ನೂ ಎನ್ನಲಾದ ಮಂಕಿಗಾಡ್ ... ಕೂಲಂಕಷವಾಗಿ ಗಮನಿಸಿದಾಗ ಆ ವಿಗ್ರಹ ...ಲ ಕಲ್ಪಿತ ರೂಪಕ್ಕೂ ಹಲವು ವಿಚಾರಗಳಲ್ಲಿ ...ಸವುದು ಕಂಡುಬರುತ್ತದೆ. ಆ ವಿಗ್ರಹದಲ್ಲಿ ...ಗೆ ನಾಲ್ಕು, ಕೈಗಳಿವೆ, ಅದಕ್ಕೂ ಮುಖ್ಯವಾಗಿ ...ನ ಪ್ರಧಾನ ಆಯುಧ ಎನ್ನಲಾಗುವ ಗದೆಯೇ ...ಲ್ಲವು, ಬದಲಾಗಿ ಕಲ್ಲುಗುಂಡು, ತ್ರಿಶೂಲ, ... ಅಸಂಬದ್ಧ ಆಯುಧಗಳಿವೆ. ಅಲ್ಲದೇ

ಸಾಮಾನ್ಯವಾಗಿ ಬಹುತೇಕ ಹನುಮಂತನ ವಿಗ್ರಹಗಳು ಮತ್ತು ಚಿತ್ರಗಳಲ್ಲಿ ತಲೆಗೆ ಕಿರೀಟ ಹಾಕಲಾಗಿರುತ್ತದೆ. ಅಲ್ಲಿ ಅದೂ ನಾಪತ್ತೆಯಾಗಿದೆ. ಒಟ್ಟಿನಲ್ಲಿ ವಾನರರೂಪಿ ಎನ್ನುವುದನ್ನು ಹೊರತುಪಡಿಸಿ ಆಂಜನೇಯನ ಕಲ್ಪನೆಯನ್ನು ಅದು ಹೋಲುವುದೇ ಇಲ್ಲ. ಒಬಾಮಾನ ಬಳಿ ಹನುಮನ(?) ವಿಗ್ರಹ ಇರುವುದನ್ನು ಭಾರತದಲ್ಲಿ ಹೆಚ್ಚು ಪ್ರಚುರಪಡಿಸಿದ 'ಎಕನಾಮಿಕ್ ಟೈಮ್ಸ್' ಪತ್ರಿಕೆಯೇ ಇಂತಹದ್ದೊಂದು ಅಭಿಪ್ರಾಯವನ್ನು ಹೊರಹಾಕಿತ್ತು. ಜೂನ್ 10, 2008ರ ತನ್ನ ಆವೃತ್ತಿಯಲ್ಲಿ **Obama seeks Hanuman's blessing for White House race** ಎನ್ನುವ ಶೀರ್ಷಿಕೆ ಲೇಖನದಲ್ಲಿ **`That "tiny monkey god," of course, appears to be a statue of the Hindu monkey god, Hanuman, says the posting but editors and the photographer has not identified it as such.'** (ಸಣ್ಣ ಮಂಕಿಗಾಡ್, ಖಂಡಿತ, ಅದು ಹಿಂದೂ ವಾನರ ದೇವತೆ, ಹನುಮಂತನ ವಿಗ್ರಹದಂತೆ ಕಾಣುತ್ತದೆ ಎಂದು ಪ್ರಕಟಣೆ ತಿಳಿಸಿದ್ದರೂ, ಸಂಪಾದಕರು ಮತ್ತು ಛಾಯಾಚಿತ್ರಗಾರರು ಅದನ್ನು ಹನುಮಂತನ ವಿಗ್ರಹ ಎಂದು ಸ್ಪಷ್ಟಪಡಿಸಿಲ್ಲ) ಎನ್ನುವ ಮೂಲಕ ಅದು ಹನುಮಂತನ ವಿಗ್ರಹ ಆಗಿರಲಿಕ್ಕಿಲ್ಲ ಎಂಬ ಅನುಮಾನ ಹೊರಹಾಕಿತ್ತು.

ಬರಾಕ್ ಒಬಾಮಾರನ್ನು ಕೇಂದ್ರವಾಗಿಸಿಕೊಂಡು ಧರ್ಮಡ ಪ್ರತಿಷ್ಠೆಯ ಕದನಕ್ಕೆ ಇಳಿಯಬಯಸುವವರು (ಹನುಮಂತನ ವಿಗ್ರಹ ಇದೆ ಅಂತ ಹಿಂದೂಗಳು, ಆತನ ಹೆಸರಲ್ಲಿ 'ಹುಸೇನ್' ಎಂಬ ನಾಮವಿದೆ ಹಾಗೂ ಉಂಗುರದಲ್ಲಿ ಅಲ್ಲಾವಿನ ಉಲ್ಲೇಖವಿದೆ ಅಂತ ಮುಸ್ಲಿಮರು, ಇನ್ನು ಆತ ಅಧಿಕೃತ ಪ್ರೊಟೆಸ್ಟೆಂಟ್ ಪಂಥಿಗ ಅಂತ ಕ್ರಿಶ್ಚಿಯನ್ನರು) ಕೊಂಚ ವ್ಯವಧಾನದಿಂದ ಆತ ಬೆಳೆದುಬಂದ ವಾತಾವರಣದ ಹಿನ್ನೆಲೆಯನ್ನು ಗಮನಿಸುವುದು ಒಳಿತು. ಯಾಕೆಂದರೆ ಬಹುಸಂಸ್ಕೃತಿಯ ಆವರಣದಲ್ಲೇ ಒಬಾಮರ ವ್ಯಕ್ತಿತ್ವ ರೂಪುಗೊಂಡಿರುವಂತದ್ದು. ಆತ ಮೂಲತಃ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಆಗಿದ್ದರೂ ಆತನ ಬೇರುಗಳು ಇಸ್ಲಾಂ ಧರ್ಮದೊಂದಿಗೆ, ಬೆಸೆದುಕೊಂಡಿವೆ. ಅಸಲಿಗೆ ಒಬಾಮಾ ಹುಟ್ಟಿದ್ದು ಬರಾಕ್ ಹುಸೇನ್ ಒಬಾಮಾ ಸೀನಿಯರ್ ಎಂಬ ಕೀನ್ಯಾ ಪ್ರಜೆ ಹಾಗೂ ಆತನ ಅಮೆರಿಕಾ ಮಡದಿ ಸ್ಟ್ಯಾನ್ಲಿ ಆ್ಯನ್ ಡುನ್‌ಹ್ಯಾಮ್ ಮಿಶ್ರದಂಪತಿಗಳ ಮಗನಾಗಿ. ಈ ಸೀನಿಯರ್ ಒಬಾಮನ ಅಪ್ಪ ಅಂದರೆ ಪ್ರೆಸಿಡೆಂಟ್ ಒಬಾಮಾನ ತಾತ ಓನ್ಯಂಗಾ ಒಬಾಮಾ ಕೀನ್ಯಾದ ತನ್ನ ಬುಡಕಟ್ಟು ಸಂಪ್ರದಾಯದಿಂದ ಇಸ್ಲಾಂ ಧರ್ಮಕ್ಕೆ ಮತಾಂತರವಾಗಿದ್ದ. ಹಾಗಾಗಿ ತನ್ನ ತಂದೆಯ ಬೇರಿನಿಂದ ಬರಾಕ್ ಒಬಾಮಾಗೆ ಮುಸ್ಲಿಂ ನಂಟಿದೆ. ಆದರೆ ಸೀನಿಯರ್ ಹುಸೇನ್ ಒಬಾಮಾ ಮತ್ತು ಸ್ಟ್ಯಾನ್ಲಿ ಆ್ಯನ್ ಡುನ್‌ಹ್ಯಾಮ್ ಗಂಡಹೆಂಡತಿಯಾಗಿ ಬಾಳಿದ್ದು ಕೇವಲ ಮೂರು ವರ್ಷ ಮಾತ್ರ (**1960**ರಲ್ಲಿ ಮದುವೆ ಮತ್ತು **1964**ರ ಆರಂಭದಲ್ಲೇ ಡೈವೋರ್ಸ್). ಹಾಗಾಗಿ ಕ್ರಿಶ್ಚಿಯನ್ ತಾಯಿ ಮತ್ತು ಅಜ್ಜಅಜ್ಜಿಯ (ತಾಯಿಯ ಅಪ್ಪಅಮ್ಮ) ಬಳಿಯಲ್ಲೇ ಬೆಳೆದ ಪ್ರೆಸಿಡೆಂಟ್ ಒಬಾಮಾಗೆ ಅಪ್ಪನಿಂದ 'ಹುಸೇನ್' ಎಂಬ ಹೆಸರಿನ ಹೊರತಾಗಿ ಇಸ್ಲಾಂ ಧರ್ಮದ ಯಾವ ನಂಟಸ್ತಿಕೆಯೂ? ಉಳಿದುಕೊಳ್ಳಲಿಲ್ಲ. ಒಬಾಮಾಗೆ **1988**ರಲ್ಲಿ ಯುನೈಟೆಡ್ ಕ್ರೈಸ್ಟ್ ಆಫ್ ಚರ್ಚ್‌ನಲ್ಲಿ ಕ್ರಿಶ್ಚಿಯನ್ ಪದ್ಧತಿಯಂತೆ ಬ್ಯಾಪ್ಟಿಸಂ ಕೂಡಾ ನಡೆದಿದೆ.

ಸ್ಟ್ಯಾನ್ಲಿ ಆ್ಯನ್ ಡುನ್‌ಹ್ಯಾಮ್, ಸೀನಿಯರ್ ಒಬಾಮಾನಿಂದ ವಿಚ್ಛೇದನ ಪಡೆದ ನಂತರ ಮದುವೆಯಾದದ್ದು ಇಂಡೋನೇಷ್ಯಾ ಮೂಲದ ಲೋಲೊ ಸೊಯಿಟೊರೊ ಎಂಬಾತನನ್ನು. ಹಾಗಾಗಿ ತಾಯಿಯ ಜೊತೆ ಇಂಡೋನೇಷ್ಯಾಕ್ಕೆ ವಲಸೆ ಬಂದ ಬರಾಕ್ ಒಬಾಮ ತನ್ನ ಹತ್ತನೇ ವಯಸ್ಸಿನವರೆಗೆ ಅಲ್ಲಿಯೇ ಬಾಲ್ಯ, ಓದುಗಳನ್ನು ಮುಗಿಸಬೇಕಾಯ್ತು. ಇಂಡೋನೇಷ್ಯಾ ಮುಸ್ಲಿಂ ಪ್ರಾಬಲ್ಯದ ರಾಷ್ಟ್ರವಾಗಿದ್ದರೂ ಅಲ್ಲಿ ಹಿಂದೂ ಬೇರುಗಳು ಐತಿಹಾಸಿಕ ಹಿನ್ನೆಲೆ ಮತ್ತು ಪ್ರಸ್ತುತ ಪ್ರಭಾವ ಉಳಿಸಿಕೊಂಡಿರುವುದನ್ನು ಹಿಂದಿನ ಸಂಚಿಕೆಯಲ್ಲೇ ವಿಸ್ತೃತವಾಗಿ ವಿವರಿಸಲಾಗಿದೆ. ಗಾಢವಾಗಿ ಅಲ್ಲದೇ ಹೋದರೂ ಆ ಸೌಹಾರ್ದತೆಯ ವಾತಾವರಣ ಬರಾಕ್ ಒಬಾಮರನ್ನು ಈ ಹಿಂದೆ ಕಂಡಿರದಿದ್ದ ಮತ್ತೊಂದು ಜೀವನಸಂಸ್ಕೃತಿಗೆ ಮುಕ್ತವಾಗಿಸಿತ್ತು. ಹನ್ನೊಂದನೇ ವಯಸ್ಸಿಗೆ ಅಮೆರಿಕಕ್ಕೆ ವಾಪಾಸಾದ ಒಬಾಮಾ ಕ್ರಿಶ್ಚಿಯನ್ ಅಜ್ಜಅಜ್ಜಿಯ ತೆಕ್ಕೆಯಲ್ಲೆ ಬೆಳೆದು ದೊಡ್ಡವರಾದದ್ದು. ಹೀಗೆ ಹಲವು ಸಂಸ್ಕೃತಿಗಳ ಪರೋಕ್ಷ ಛಾಯೆಯಿಂದ ಬರಾಕ್ ಒಬಾಮಾ ಎಂಬ ವ್ಯಕ್ತಿತ್ವ ರೂಪುಗೊಂಡಿರುವಾಗ ಆತನನ್ನು ಮುಂದಿಟ್ಟುಕೊಂಡು 'ಧರ್ಮಪ್ರತಿಷ್ಠೆ'ಯನ್ನು ಕ್ಲೇಮ್ ಮಾಡಿಕೊಳ್ಳುವುದೇ ಹಾಸ್ಯಾಸ್ಪದ ಎನಿಸುತ್ತದೆ.


ಕೊನೆಯದಾಗಿ, ಒಬಾಮಾ ತನ್ನ ಲಕ್ಕಿ ಚಾರ್ಮ್ ವಸ್ತುಗಳನ್ನು ಪ್ರದರ್ಶಿಸಿದ್ದು ಅಧ್ಯಕ್ಷೀಯ ಚುನಾವಣಾ ಸಂದರ್ಭದಲ್ಲಿ ಎಂಬುದೂ ಗಮನಾರ್ಹ. ಏಕೆಂದರೆ ಯುದ್ಧದಾಹಿ ಅಮೆರಿಕನ್ನರ ಒಲವನ್ನು ಸೈನಿಕನ ಡಾಲರ್ ಗಳಿಸಿಕೊಟ್ಟಷ್ಟೇ ಭಾವನಾತ್ಮಕವಾಗಿ ಅಮೆರಿಕದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಭಾರತೀಯರ ಒಲವನ್ನು ಮಂಕಿಗಾಡ್ ವಿಗ್ರಹ ದಕ್ಕಿಸಿಕೊಡಬಹುದೆನ್ನುವ ಲೆಕ್ಕಾಚಾರವೂ ಒಬಾಮಾಗೆ ಇದ್ದಿರಬಹುದಲ್ಲವೇ? (**2008**ರ ಅಂಕಿಅಂಶದಂತೆ ಅಮೆರಿಕದಲ್ಲಿ ಸುಮಾರು **1.15** ಮಿಲಿಯನ್ ಭಾರತೀಯ ಮತದಾರರು ಇದ್ದರು).

ಒಂದುವೇಳೆ, ಹಿಂದೂ 'ಕಥಾ'ನಕಗಳ ಹನುಮಂತನಿಗೆ ಮಾರುಹೋಗಿಯೇ ಬರಾಕ್ ಒಬಾಮಾ ಆ ಮಂಕಿಗಾಡ್ ವಿಗ್ರಹವನ್ನು ತನ್ನ ಬಳಿಯಲ್ಲಿ ಜತನ ಮಾಡಿಟ್ಟುಕೊಂಡಿದ್ದಾರೆ ಅಂತಲೇ ಎಂದಿಟ್ಟುಕೊಳ್ಳೋಣ. ಆಗ ಬರಾಕ್ ಒಬಾಮಾನಿಂದ ನಾವು ಪರಧರ್ಮ ಸಹಿಷ್ಣುತೆ, ಸಹಬಾಳ್ವೆಯ ಪಾಠ ಕಲಿಯಬೇಕೆ ವಿನಾಃ ಧರ್ಮಶ್ರೇಷ್ಠತೆಯ ಅಹಮ್ಮನ್ನು ಆವಾಹಿಸಿಕೊಂಡವರಂತೆ ಈ ರೀತಿಯ ಕೋಮುದಳ್ಳುರಿಯನ್ನು ಹರಡುವ ಹೀನಕ್ಕೆ ಕೈಹಾಕಬಾರದು.

ಕೋಮುಸಂದೇಶ: ಅಫ್ಘಾನಿಸ್ತಾನದ ಒಂದು ಪರ್ವತದ ಹೆಸರೇಕೆ 'ಹಿಂದುಕುಶ್'?

(ಹಿಂದೂ ಧರ್ಮದ ಪ್ರಖರತೆ ಅಲ್ಲೆಲ್ಲ ಹರಡಿರುವಾಗ, ನಮ್ಮ ಹಿಂದೂಸ್ಥಾನದಲ್ಲೆ ಅದನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿವೆ ಸೋಕಾಲ್ಡ್ ಸೆಕ್ಯುಲರಿಗಳು)

ಸತ್ಯಾಂಶ: ಮೊದಲನೆಯದಾಗಿ ಹಿಂದುಕುಶ್ ಎಂಬುದು 'ಒಂದು' ಪರ್ವತವಲ್ಲ, ಅದೊಂದು ಸುಮಾರು **800** ಕಿಲೋಮೀಟರ್ ಉದ್ದದ ಪರ್ವತಗಳ ಶ್ರೇಣಿ ಮತ್ತು ಕಣಿವೆ. ಆ ಶ್ರೇಣಿಗೆ ಹಿಂದುಕುಶ್ ಎಂಬ ಹೆಸರು ಹೇಗೆ ಬಂದಿತೆಂಬ ಬಗ್ಗೆ ನಿರ್ದಿಷ್ಟ ಉತ್ತರ ಲಭ್ಯವಿಲ್ಲದೇ ಹೋದರು ಹಲವಾರು ವಿಭಿನ್ನ ಸಿದ್ಧಾಂತಗಳು ಅದಕ್ಕೆ ಹೆಸರು ಬಂದಿರುವಿಕೆಯ ಪ್ರಕ್ರಿಯೆಯನ್ನು ವಿಶದಪಡಿಸುತ್ತವೆ. ಆದರೆ ಆ ಯಾವ ಸಿದ್ಧಾಂತದಲ್ಲೂ ಈ ಪ್ರಶ್ನೆ ಕೇಳಿದವರು ಅಂದುಕೊಂಡಿರುವಂತಹ 'ಹಿಂದುತ್ವ ಪ್ರಾಬಲ್ಯ ಪ್ರಜ್ಞೆ'ಗೆ ಅವಕಾಶವಿಲ್ಲ ಎನ್ನುವುದು ಮುಖ್ಯ. ಒಂದು ಸಿದ್ಧಾಂತದ ಪ್ರಕಾರ ಅಲೆಕ್ಸಾಂಡರ್‌ನ ಕಾಲದಲ್ಲಿ ಈ ಪರ್ವತಶ್ರೇಣಿಯನ್ನು **``Caucasus of the Indus River''** ಎಂದು ಕರೆಯಲಾಗುತ್ತಿತ್ತು, ಮುಂದೆ ಇಂಡಸ್ ಎಂಬುದು ಹಿಂದು ಆಗಿ ರೂಪಾಂತರಗೊಂಡಿರಬಹುದು ಎನ್ನುತ್ತದೆ. ಮತ್ತೊಂದು ಸಿದ್ಧಾಂತದ ಪ್ರಕಾರ ಮೊದಲನೇ ಶತಮಾನದಲ್ಲಿ ಕುಶಾನ್ ಸಾಮ್ರಾಜ್ಯದ ಕೇಂದ್ರವಾಗಿದ್ದ ಕುಶಾನ ಕಣಿವೆಯ ಉತ್ತುಂಗ ಶಿಖರವನ್ನು ಮಾತ್ರ ಹಿಂದುಕುಶ್ ಎಂದು ಕರೆಯಲಾಗುತ್ತಿತ್ತು. ಇನ್ನು ಪರ್ಷಿಯನ್ ಇಂಗ್ಲಿಷ್ ನಿಘಂಟುವಿನ ಪ್ರಕಾರ 'ಕೊಶ್' ಎಂಬುದು ಕೊಲ್ಲುವಿಕೆ ಎಂಬ ಕ್ರಿಯಾಪದದ ರೂಪಾಂತರವಾಗಿದೆ. ಎನ್‌ಸೈಕ್ಲೋಪಿಡಿಯಾ ಅಮೆರಿಕಾನಾ ಕೂಡಾ ಇದನ್ನೇ ದೃಢಪಡಿಸುತ್ತದೆ. ಅದರ ಪ್ರಕಾರ ಹಿಂದುಕುಶ್ ಎಂದರೆ 'ಹಿಂದುಗಳನ್ನು ಕೊಲ್ಲುವುದು' ಎಂದರ್ಥ (ಇಲ್ಲಿ ಹಿಂದೂ ಎಂದರೆ ಸಿಂಧೂ ನದಿ ನಾಗರಿಕತೆ ಭೌಗೋಳಿಕತೆಯ ಜನ). ಭಾರತೀಯ ಉಪಖಂಡದಿಂದ ಗುಲಾಮಿ ಜನರನ್ನು ಮಧ್ಯ ಏಷ್ಯಾ ರಾಷ್ಟ್ರಗಳತ್ತ ಕೊಂಡೊಯ್ಯುವಾಗ ವಾತಾವರಣದ ವೈಪರೀತ್ಯ ಮತ್ತು ಪರ್ವತ ಕಣಿವೆಯ ವ್ಯತಿರಿಕ್ತ ಪರಿಣಾಮದಿಂದ ಈ ಭಾಗದಲ್ಲಿ ಹೆಚ್ಚು ಜನ ಸಾವಿಗೀಡಾಗುತ್ತಿದ್ದರು. ಹೀಗೆ ಭಾರತದಿಂದ ಸಾಗಿಸಲ್ಪಡುತ್ತಿದ್ದ ಗುಲಾಮಿ ಜನ ಈ ಭಾಗದಲ್ಲಿ ಸಾವನ್ನಪ್ಪುತ್ತಿದ್ದರಿಂದ ಇದನ್ನು ಹಿಂದು ಕುಶ್ ಎಂದು ಕರೆಯಲಾಗುವುದು ಎನ್ನಲಾಗುತ್ತಿದೆ. ಮಧ್ಯಕಾಲೀನ ಬರ್ಬೇರಿಯನ್ ಪ್ರವಾಸಿಗನಾದ ಇಬ್ನ್ ಬಟೂಟನ ಬರವಣಿಗೆಗಳಲ್ಲೂ ಹಿಂದೂಕುಶ್‌ನ ಉಲ್ಲೇಖವಿದೆ. ಆತನ ಪ್ರಕಾರ ಸಿಂಧೂ ನಾಗರಿಕತೆ ಭಾಗದ ಜನರ ಸಾಂಪ್ರದಾಯಿಕ




ವೈರಿಗಳಾಗಿದ್ದ ಅಫ್ಘಾನಿಸ್ತಾನದ ಗುಡ್ಡಗಾಡು ಜನಾಂಗಗಳು, ಆ ಪ್ರದೇಶದೊಂದಿಗೆ ತಮಗಿದ್ದ ಒಡನಾಟದ ಸರಾಗತೆಯ ಲಾಭ ಪಡೆದುಕೊಂಡು, ಪರ್ವತ ಕಣಿವೆ ಮೂಲಕ ಸಾಗುತ್ತಿದ್ದ ಸಿಂಧೂ ನಾಗರಿಕತೆಯ ಜನರ ಕೊಲೆ ಮಾಡುತ್ತಿದ್ದರು. ಆದ್ದರಿಂದ ಇದನ್ನು ಹಿಂದುಕುಶ್ ಎಂದು ಆತ ದಾಖಲಿಸಿದ್ದಾಗಿ ಮತ್ತೊಂದು ವಾದ ಹೇಳುತ್ತದೆ. ಒಟ್ಟಿನಲ್ಲಿ ಇತಿಹಾಸದ ಸಕಾರಣ ಪ್ರಜ್ಞೆಯಿಲ್ಲದೇ ಇವತ್ತಿನ ಭೌಗೋಳಿಕ ಸೀಮಿತತೆಗೆ ಹೋಲಿಸಿಕೊಂಡು ಐತಿಹ್ಯ ಉಲ್ಲೇಖಗಳನ್ನು ತಮ್ಮ ಶ್ರೇಷ್ಠತೆ ಎಂದು ಬಿಂಬಿಸಿಕೊಳ್ಳುವುದು ಮುಠ್ಠಾಳತನವಲ್ಲದೆ ಮತ್ತೇನೂ ಅಲ್ಲ. ■





ಒಬಾಮಾರ ಕೈಯಲ್ಲಿರುವ 'ಮಂಕಿಗಾಡ್' ವಿಗ್ರಹ



ಮೌರ್ಯ ನಾಗರಿಕತೆಯ 'ಹೌವ್ಲರ್ ಮಂಕಿಗಾಡ್' ವಿಗ್ರಹ

ನಿಮ್ಮ ಮನೆಗೆ ಹಾವು ಬಂದಿದೆ ಕಂಡ್ರಿ!

ಪಕ್ಕದ ಮನೆಯ ರಾಜೇಶ್ ಹತ್ತಿರದ ಬೀದಿಯಲ್ಲಿ ಮನೆ ಕಟ್ಟಿಸುತ್ತಿದ್ದಾನೆ. ಅದು ಹೌಸಿಂಗ್ ಬೋರ್ಡ್ ಮನೆಯಾದ್ದರಿಂದ ಅದರ ಒಳಗೋಡೆಗಳನ್ನು ಹೊಡೆದು ರೂಮು ಕಟ್ಟಿ ಸ್ಟೇರ್‌ಕೇಸ್ ಹಾಕಿಸಬೇಕೆಂದರೆ ಮತ್ತೊಂದು ಮನೆ ಕಟ್ಟಿದಂತಾಗುತ್ತದೆ. ಆದ್ದರಿಂದ ಅವರ ಮನೆಯ ಆವರಣದಲ್ಲಿ ಜಲ್ಲಿ, ಮರಳು, ಇಟ್ಟಿಗೆ, ಪೈಪು ಇವೆಲ್ಲಾ ಅಸ್ತವ್ಯಸ್ತವಾಗಿ ರಾಶಿ ಬಿದ್ದಿದ್ದವು. ಇಂತಹ ಸಮಯದಲ್ಲಿ ಅಕ್ಕಪಕ್ಕದವರು ಅಸಹನೆಯಿಂದಿರುತ್ತಾರೆ. ಅದರಲ್ಲೂ ನೆರೆಹೊರೆಯವರು ಹುಟ್ಟುತ್ತಲೇ ಹೊಟ್ಟೆಕಿಚ್ಚಿನ ಕಿಡಿಯನ್ನಿಟ್ಟುಕೊಂಡವರಾಗಿದ್ದರೆ ಸದಾ ಕಿರಿಕಿರಿ ತಪ್ಪಿದ್ದಲ್ಲ. ಸೂಕ್ಷ್ಮ ಮನಸ್ಸಿನ ರಾಜೇಶ್ ಇಂತದ್ದಕ್ಕೆಲ್ಲಾ ತಲೆಕೆಡಿಸಿಕೊಳ್ಳುವ ಆಸಾಮಿಯಲ್ಲ. ಆದರೂ ಇತ್ತೀಚೆಗೆ ಒಬ್ಬ ವೇಗವಾಗಿ -ಬೈಕಿನಲ್ಲಿ -ರಾಜೇಶರ ಮನೆಗೆ ಬಂದು,

"ರೀ, ನಿಮ್ಮ ಮನೆ ಹತ್ರ ಹಾವು ಬಂದಿದೆ" ಎಂದು ಇದೀಗ ತಾನೆ ಅದರ ಆಕ್ರಮಣದಿಂದ ತಪ್ಪಿಸಿಕೊಂಡು ಬಂದವನಂತೆ ನಡುಗುವ ದನಿಯಲ್ಲಿ ಹೇಳಿದ.

ಆವಾಗ ತಾನೆ ಕಾಲೇಜಿನಿಂದ ಬಂದಿದ್ದ ರಾಜೇಶ್ "ಹೌದಾ? ಯಂತ ಹಾವು ಮಾರಾಯ್ರೆ?" ಎಂದ.

"ಯಂತ ಹಾವೊ ಕಂಡ್ರಿ ಬಂದಿದೆ."

"ಕೇರೆ ಹಾವಿರಬೇಕಲ್ಲ."

"ನೀವೇ ಬಂದು ನೋಡಿ."

"ಕೇರೆ ಹಾವಾದರೆ, ಅದಕ್ಕೆ ವಿಷ ಇರುವುದಿಲ್ಲ, ಇಲಿ, ಕಪ್ಪೆಗಳನ್ನು ಹುಡುಕಿಕೊಂಡು ಬರುವುದುಂಟು. ಬಂದರೂ ಅದು ಇರುವುದಿಲ್ಲ. ಬಂದಷ್ಟೇ ಗಡಿಬಿಡಿಯಿಂದ ಹೋಗುವುದುಂಟು. ಆದ್ದರಿಂದ ನೀವು ಹೆದರುವ ಅಗತ್ಯವಿಲ್ಲ."

"ರೀ, ಅದು ಕೇರೆ ಹಾವಲ್ಲ ಕಂಡ್ರಿ, ಅಷ್ಟುದ್ದ ಇಲ್ಲ."

"ಹಾಗಾದರೆ ನೀರಾವಿರಬೇಕು, ಅದಕ್ಕೂ ಅಷ್ಟೆ, ವಿಷ ಇರುವುದಿಲ್ಲ. ಚರಂಡಿಯಲ್ಲಿ ಕಪ್ಪೆ ಹುಡುಕುತ್ತ ತಿರುಗುವುದುಂಟು. ಅವುಗಳು ಇದ್ದಲ್ಲೇ ಆಹಾರ ಸಿಗುವುದಿಲ್ಲ ಅಲ್ಲವ, ಅದಕ್ಕಾಗಿ ಹೊರಟುಹೋಗುವುದುಂಟು."

"ನೀರಾವು ಅಲ್ಲ ಕಂಡ್ರಿ ದಪ್ಪಾಗಿದೆ."

"ಎಷ್ಟು ದಪ್ಪ ಉಂಟು?"

"ರಟ್ಟೆ ಗಾತ್ರ ಇದೆ."



"ರಟ್ಟೆ ಗಾತ್ರ ಇರುವುದು ಕಾಳಿಂಗ ಸರ್ಪ ಮಾರಾಯ."

"ಕಾಳಿಂಗ ಸರ್ಪ ನನಿಗೊತ್ತಿಲ್ಲವೇನ್ರಿ. ಅದಲ್ಲ ಇದು."

"ನಿಮ್ಮ ಗಾಬರಿ ನೋಡಿದರೆ ಅದು ನಾಗರಹಾವೇ ಇರಬೇಕು. ನಾಗರಹಾವಿಗೆ ಪಶು, ಪಕ್ಷಿ, ಪ್ರಾಣಿಗಳೆಲ್ಲಾ ಹೆದರುವುದುಂಟು. ಇನ್ನ ನೀವು ಹೆದರಿ ಓಡಿಬಂದಿದ್ದರಲ್ಲಿ ಆಶ್ಚರ್ಯವಿಲ್ಲ, ಒಂದು ಕೆಲಸ ಮಾಡಿ ಸ್ನೇಕ್ ಕಿರಣ್ ಅಂತ ಒಬ್ಬ ಹಾವಾಡಿಗವುಂಟು. ಅವನಿಗೆ ಫೋನ್ ಮಾಡಿ. ಬಂದು ಹಿಡಿದುಕೊಂಡು ಹೋಗುತ್ತಾನೆ ಮತ್ತೆ ಹಣ ತಕ್ಕೊಳ್ಳುವುದಿಲ್ಲ."

"ನಾನ್ಯಾಕ್ರಿ ಫೋನ್ ಮಾಡ್ಲಿ? ಹಾವು ಬಂದಿರದು ನಿಮ್ಮನೆಗೆ."

"ಹಾವು ನಮ್ಮ ಮನೆಗೆ ಬಂದರೆ ನಿಮಗೆಂತ ಕಷ್ಟ?"

"ನಾವು ಅಕ್ಕಪಕ್ಕ ಇರೋರು. ಆಕಸ್ಮಾತ್ ನಮ್ಮ ಮನೆಗೂ ಬಂದರೆ? ಅದರಲ್ಲೂ ನಾಗರಾವು ಕಂಡ್ರೀ ನಾಗ್ರಾವು."

"ನಾಗರಹಾವು ಅಂತ ಹೇಳಿ. ನೀವು ತುಂಬ ಹೆದರುವ ಅಗತ್ಯವಿಲ್ಲ, ಮನುಷ್ಯರನ್ನು ಕಂಡರೆ ಅದಕ್ಕೆ ನಿಮ್ಮಷ್ಟೇ ಭಯವುಂಟು. ಈ ಬಡಾವಣೆಯನ್ನು ನಿರ್ಮಿಸುವಾಗ ಎಷ್ಟು ನಾಗರಹಾವುಗಳನ್ನು ಕೊಂದಿದ್ದಾರೆ ಗೊತ್ತುಂಟ. ನಿಜಕ್ಕೂ ಒಂದು ಕಾಲದಲ್ಲಿ ಇದು ಅವರ ಜಾಗ ಆಗಿತ್ತು. ಈಗ ನಾವು ಆಕ್ರಮಿಸಿಕೊಂಡಿದ್ದೇವೆ. ಅಂದಿನಿಂದ ಉಳಿದ ಕೆಲವೇ ಕೆಲವು ಹಾವು ನಮಗೆ ಕಾಣದಂತೆ ಜೀವನ ಮಾಡ್ತಾವುಂಟು. ಅಷ್ಟಕ್ಕೂ ನಾಗರ ಹಾವು ಕಡಿಯುವುದೆಂದರೆ ಸುಮ್ಮನೆ ಕಡಿಯುವುದಿಲ್ಲ, ನಾವು ತುಳಿದಾಗ ಮಾತ್ರ ಕಚ್ಚುವುದು. ನಾವು ತುಳಿಯುವುದೇಕೆ ಗೊತ್ತುಂಟ? ನೆಲ ನೋಡಿದರೆ ತಾನೆ. ಅಂತ ಅಹಂಕಾರ ನಮಗೆ. ವಿಷವಿದ್ದ ಕಾರಣಕ್ಕೆ ನಾಗರ ಹಾವಿಗೂ ಅಹಂಕಾರ ಉಂಟು. ಅದಕ್ಕೆ ಅದು ಹೆಡೆಬಿಚ್ಚ ಹೆದರಿಸುವುದು. ಆದರೂ ನಮ್ಮ ಮನೆಗೆ ಬಂದಿರುವ ಹಾವು ನಿಮ್ಮ ಮನೆಗೆ ಬರುವುದಿಲ್ಲ ಮಾರಾಯ."

"ಅದ್ಯಂಗೇಳ್ತಿರಿ? ಅದನ್ನೇನು ಸಾಕಿದ್ದೀರ ನೀವು?"

"ನೀವು ಇಷ್ಟು ಹೇಳಿದ ಮೇಲೆ ನಾವು ಸಾಕಿದ್ದೌದು."

"ಏನೇನೂ ಮಾತಾಡ್ತಿರಲ್ರಿ. ನನಿಗೆ ಸಿಟ್ಟು ಬರುಸಬ್ಯಾಡಿ."

"ಈ ಸಿಟ್ಟನ್ನ ನೀನು ಹಾವಿನ ಮೇಲೆ ತೋರಿಸಬಹುದಿತ್ತು."

"ಸಾಕಿದ್ದಿನಿ ಅಂತ ಹೇಳ್ತಿರಲ್ರಿ."

"ಸಾಕಿದ್ದೌದು. ಆದರೆ ನೀವು ಸಾಯಿಸಲಿಕ್ಕೆ ಮಾಡುವುದಿಲ್ಲ, ಹೋಗಿ ಸಾಯಿಸಿ."

"ನಿಮ್ಮ ಮನೆಗೆ ಬಂದಿರೊ ನಾಗರ ಹಿಡಸಬೇಕಾದೋರು ನೀವಲ್ಲವೇನ್ರಿ?"

"ಮತ್ತೆ ನೀನು ಅದನ್ನೇ ಹೇಳುವುದು ಬೇ ಹಾವಿಗೆ ನಮ್ಮ ಮನೆಯಲ್ಲಿ ಇಲಿ, ಕಪ್ಪೆ ಸಿಗಲಿಲ್ಲ ಹೋಗುವುದುಂಟು. ತಾನಾಗಿ ಹೋಗುವ ಹಿಡಿಸುವುದೆಂತಕ್ಕೆ?"

"ನಮ್ಮ ಮನೆಗೆ ಬಂದ್ರೆ ಅಂತ."

"ಬರುವುದಿಲ್ಲ, ನಾನು ಬೇಕಾದರೆ ಭರವಸೆ ಕೊ

"ಅದ್ಯಂಗೇಳ್ತಿರಿ?"

"ನಿಮ್ಮ ಮನೆಯಲ್ಲಿ ಇಟ್ಟಿಗೆ, ಮರಳು, ಜಲ್ಲಿ ರಾಶಿಯುಂಟ? ಸೊಳ್ಳೆ ಕೂಡ ನಿಮ್ಮ ಮನೆಯ ಮಾಡಲಾಗುವುದಿಲ್ಲ. ಇನ್ನ ರಟ್ಟೆ ಗಾತ್ರದ ಬರುವುದುಂಟ."

"ನಾನು ಹೋಗಿ ಹೋಗಿ ನಿನಿಗೇಳಕ್ಕೆ ಬಂದೆ ನೋ

"ಬಂದದ್ದು ಒಳ್ಳೆದಾಯ್ತು, ನಮ್ಮ ಮನ ಹಾವಿರುವುದು ನಿಮ್ಮಿಂದ ಗೊತ್ತಾಯ್ತಲ್ಲ, ಥ್ಯಾಂಕ

"ಹೋಗ್ರಿ, ನಿಮ್ಮತ್ರ ಯಾವನು ಮಾತಾಡ್ತನೆ" ಬೈಕಿನವನು ಸಿಟ್ಟನಿಂದ ಗಾಡಿ ಸ್ಟಾರ್ಟ್ ಮಾಡಿಕ ಹೊರಟುಹೋದ. ಒಂದು ಹೊಡೆದಾಟ ನಡೆಯಬ ಜಗಳ ಬಿಡಿಸಲೆಂದು ಬಂದಿದ್ದ ನಾನು, ತರ್ಕದಿ ಸೋಲಿಸಿ ಕಳಿಸಿದ ರಾಜೇಶನ ಬಗ್ಗೆ ಮೆಚ್ಚುಗೆಯಿ

"ಏನೇ ಆಗ್ಲಿ ರಾಜೇಶ, ದಕ್ಷಿಣ ಕನ್ನಡದವರು ವೀರರು. ಅವರನ್ನು ಸೋಲಿಸಕ್ಕೆ ಸಾಧ್ಯವೇ ಅವುನ್ಯಾವನೊ ನಮ್ಮ ಕಡಿಯೋನಿರಬೇಕು ಪಾಪ"

"ಅಲ್ಲ ಗೌಡರೆ, ಅವ ನೋಡಿ ಎಷ್ಟು ಹೆದರಿದ ಅವ ಇದ್ದಿದ್ದರೆ ಇನ್ನು ಪಾಠ ಮಾಡ್ತಾಯಿದ್ದೆ. ನಾನು ಮಾಡುವುದು ಜೀವಶಾಸ್ತ್ರದ ಬಗ್ಗೆ. ಹಾವಿನ ಬಗ್ಗೆ ನಲವತ್ತು ನಿಮಿಷ ಹೇಳ್ತಾಯಿದ್ದೆ" ಎಂದು ನಕ್ಕರ

ನಾನೂ ನಕ್ಕು ಹಾವಿನ ಪಾಠದಿಂದ ತಪ್ಪಿಸಿಕೊ

ಬಿ.ಚಂದ್ರೇಗ

ಅಂಬೇಡ್ಕರ್ ಮೀಸಲಾತಿ ವಿರೋಧ ಇದ್ದರೆ?

ಮತ್ತೆ ಮೀಸಲಾತಿ ಸದ್ದು ಮಾಡುತ್ತಿದೆ.

'ನಾವು ಹಿಂದೆ ಉಳಿದಿದ್ದೇವೆ. ನಮ್ಮ ಸಮುದಾಯವನ್ನು ಇತರೆ ಹಿಂದುಳಿದ ಜಾತಿಯ ಗುಂಪಿಗೆ ಸೇರಿಸಿ!'

ಗುಜರಾತಿನ ಪಟೇಲ್ ಸಮುದಾಯದ ಕೂಗು ಇದು.

ಬಹಳವಾಗಿ ಇದು ಬರುತ್ತಿರುವುದು ಯುವ ಸಮುದಾಯದಿಂದ. ಇಪ್ಪತ್ತೆರಡರ ಹರಯದ ಹಾರ್ದಿಕ ಪಟೇಲನದ್ದು ಅದರ ನಾಯಕತ್ವ.

ಪಟೇಲ್ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮುಂದುವರೆದವರು. ಅಲ್ಲಿನ ಶೇಕಡ ಎಂಬತ್ತರಷ್ಟು ಭೂಮಿ ಅವರಿಗೆ ಸೇರಿದ್ದು. ಬಹುಪಾಲು ಕೈಗಾರಿಕೆಗಳ ಒಡೆತನ ಅವರದ್ದು. ವಾಣಿಜ್ಯೋದ್ಯಮದಲ್ಲೂ ಅವರ ಸಿಂಹಪಾಲು. ವಿದೇಶದಲ್ಲಿರುವವರೂ ಉತ್ತಮ ಆರ್ಥಿಕ ಸ್ಥಿತಿ ಹೊಂದಿದ್ದಾರೆ. ಹೀಗಿರುವಾಗ ಇತರೆ ಹಿಂದುಳಿದ ವರ್ಗಗಳ ಪಟ್ಟಿಗೆ ತಮ್ಮ ಸಮುದಾಯ ಸೇರಿಸಬೇಕೆಂಬ ಒತ್ತಾಯ ನ್ಯಾಯಸಮ್ಮತ ಅಲ್ಲ. ಇಂತಹ ಬೇಡಿಕೆ ಅರ್ಥಹೀನ ಎಂದರೆ ಅದು ಅವರಿಗೆ ಒಪ್ಪಿಗೆ ಇಲ್ಲ. ಅದಕ್ಕೆ ಅವರ ತಕರಾರು ಹೀಗಿದೆ:

ಜನರ ಈ ಕಲ್ಪನೆಯಲ್ಲಿ ಹುರುಳಿಲ್ಲ. ನಮ್ಮ ಸಮುದಾಯದ ಶೇಕಡ ಐದರಿಂದ ಹತ್ತು ಮಂದಿ ಆರ್ಥಿಕವಾಗಿ ಮುಂದುವರೆದಿರಬಹುದು. ಉಳಿದವರು ಹಾಗಲ್ಲ. ಅವರ ಮುಖ್ಯ ಕಸುಬು ವ್ಯವಸಾಯ. ಅದು ಈಗ ನಷ್ಟದ ಬಾಬತ್ತು. ಸಾಲದ ಸುಳಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡಿರುವವರಲ್ಲಿ ಪಟೇಲ ಸಮುದಾಯದವರೇ ಹೆಚ್ಚು ಮಂದಿ. ಅವರ ಮಾಲೀಕತ್ವದ ಕೈಗಾರಿಕೆಗಳು ಮುಚ್ಚವೆ ಇಲ್ಲ ಮುಚ್ಚುವ ಸ್ಥಿತಿಗೆ ಬಂದಿವೆ. ವಜ್ರ ಪಾಲಿಷ್ ಘಟಕಗಳು ಏದುಸಿರುಬಿಡುತ್ತಿವೆ. ಹೀಗಾಗಿ ವ್ಯಾಸಂಗ ಮುಂದುವರೆಸಲು ಹಣದ ಕೊರತೆ ಬಾಧಿಸುತ್ತಿದೆ. ಉತ್ತಮ ಅಂಕ ಪಡೆದರೂ ಸ್ಕಾಲರ್‌ಶಿಫ್‌ಗೆ ಮೀಸಲಾತಿ ಭೂತ ಅಡ್ಡ ಬರುತ್ತೆ. ಉದ್ಯೋಗ ಅರಸಿ ಹೋದರೂ ಅಲ್ಲಿಯೂ ಅದೇ ಭೂತದ ಅಡ್ಡಿ. ಇಡೀ ಪಟೇಲ್ ಜನಾಂಗ ಸಂಕಷ್ಟದಲ್ಲಿ ಸಿಲುಕಿದೆ. 'ಗುಜರಾತ್ ಮಾದರಿ' ಎಂಬುದು ಬೊಗಳೆ, ಸುಳ್ಳಿನ ಕಂತೆ. ಗ್ರಾಮೀಣ ಗುಜರಾತ್ ನೋಡಿದರೆ ಸತ್ಯದ ಅರಿವಾಗುತ್ತದೆ. ಇದು ವಸ್ತು ಸ್ಥಿತಿ.

ಈ ತರ್ಕ ಮಂಡಿಸಲು ಅಂತರ್ಜಾಲ ಸುದ್ದಿ ಪ್ರಸಾರ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಹೆಚ್ಚು ಹೆಚ್ಚು ಜನರು ಇದಕ್ಕೆ ಆಕರ್ಷಿತರಾಗುತ್ತಿದ್ದಾರೆ. ಹತಾಶೆ ಹೊಂದಿದ ಯುವ ಜನತೆಗೆ ಹಾರ್ದಿಕ್ ಪಟೇಲ್ ಆಶಾಕಿರಣ ಆಗಿದ್ದಾನೆ. ಅವರ ಆಕ್ರೋಶಕ್ಕೆ ಬಾಯಿಯಾಗಿದ್ದಾನೆ. ಕೇವಲ ಎರಡು ತಿಂಗಳ ಹಿಂದೆ ಅನಾಮಿಕನಾಗಿದ್ದ ಯುವಕ ಈಗ ಪಟೇಲ್ ಸಮುದಾಯದ ಕಣ್ಮಣಿಯಾಗಿದ್ದಾನೆ. ಅವನ ಒಂದು ಕೂಗಿಗೆ ಲಕ್ಷಾಂತರ ಮಂದಿ ಓಗೊಡುತ್ತಿದ್ದಾರೆ.

ಹಾರ್ದಿಕ್ ಪಟೇಲ್ ವಾದವನ್ನು ಹಲವರು ಮೆಚ್ಚುತ್ತಾರೆ. ಆರೆಸ್ಸೆಸ್ ಪ್ರಮುಖರಲ್ಲಿ ಒಬ್ಬರಾದ ಎಂ.ಜಿ. ವೈದ್ಯ ಇವರಲ್ಲೊಬ್ಬರು ಅವರು 'ಜಾತಿ ಅನ್ನುವುದೇ ಅಪ್ರಸ್ತುತ. ಈಗ ಯಾವ ಜಾತಿಯೂ ಹಿಂದುಳಿದಿಲ್ಲವಾದುದರಿಂದ ಜಾತಿ ಆಧಾರಿತ ಮೀಸಲಾತಿ ಅವಶ್ಯಕತೆ ಇಲ್ಲ. ಅನಿವಾರ್ಯವೆಂದಾದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಹತ್ತು ವರ್ಷಗಳಿಗೆ ಇದನ್ನು ಮುಂದುವರೆಸಿ. ನಂತರ ಅದನ್ನೂ ತೆಗೆದುಹಾಕಿ' ಎನ್ನುತ್ತಾರೆ. ಅವರನ್ನು ಬಿಟ್ಟು ಇತರರಿಗೆ ಮೀಸಲಾತಿ ಸೌಲಭ್ಯ ವಿಸ್ತರಿಸಬಾರದೆಂಬುದೇ ಅವರ ಸ್ಪಷ್ಟ ನುಡಿ. ಅದರ ಬದಲು ಆರ್ಥಿಕತೆ ಆಧಾರದ ಮೇಲೆ ಮೀಸಲಾತಿ ಇರಲಿ ಎನ್ನುವ ಸಲಹೆ ನೀಡುತ್ತಾರೆ. ಇಂತಹ ಆಕ್ರೋಶ ಗುಜರಾತಿನ ಪಟೇಲ್ ಸಮುದಾಯದ ಯುವಕರಿಗೆ ಸೀಮಿತ ಅಲ್ಲ. ಹಾರ್ದಿಕ್ ಪಟೇಲ್ ತನ್ನ ತರ್ಕ ಮಂಡಿಸಲು ಗುಜರಾತಿ ಭಾಷೆಯನ್ನು ಬಳಸುತ್ತಿರುವುದರಿಂದ ಅದು ಗುಜರಾತಿಗೆ ಸೀಮಿತ ಆಗಿದೆ. ಹಿಂದಿಯಲ್ಲೋ, ಇಂಗ್ಲಿಷಿನಲ್ಲೋ ಬಳಸಿದ್ದರೆ ಇಡೀ ಭಾರತವೇ ಇದರಿಂದ ಪ್ರಭಾವಿತವಾಗುತ್ತಿತ್ತು ಎಂಬುದು ಕೆಲವರ ನಿಲುವು. ಅದೇನೇ ಇರಲಿ, ಗುಜರಾತಿನ ಪಟೇಲರು ಮಂಡಲ್ ವರದಿ ಬಂದಾಗ ಅದನ್ನು ವಿರೋಧಿಸಿದ್ದರು. ಈಗ ಇತರೆ ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಲು ಹೋರಾಡುತ್ತಿರುವುದು ಇತಿಹಾಸದ ವ್ಯಂಗ್ಯವೇ ಸರಿ.

ಮೀಸಲಾತಿ ಪರ-ಇರುವವರ ವಾದವು ಇನ್ನೊಂದು ಪರಿಯಾಗಿದೆ. ಮೀಸಲಾತಿ ಬಡತನ ನಿರ್ಮೂಲನಾ ಕಾರ್ಯಕ್ರಮ ಅಲ್ಲ. ಸಾಮಾಜಿಕವಾಗಿ ಹಿಂದುಳಿದವವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಅಷ್ಟೆ. ಬಡತನಕ್ಕೂ ಮೀಸಲಾತಿಗೂ ಸಂಬಂಧ ಕಲ್ಪಿಸಬಾರದು. ಗುಜರಾತಿನಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಹಿಂದೆ ಬೃಹತ್ ಹುನ್ನಾರ ಇದೆ. ತಳ ಸಮುದಾಯದವರ ಅಲ್ಪಸ್ವಲ್ಪ ಚೇತರಿಕೆ ಅವರ ಕಣ್ಣು ಕಿಸುರು ಆಗಿದೆ. ಅದನ್ನು ಅವರು ಅರಗಿಸಿಕೊಳ್ಳಲು ಆಗುತ್ತಿಲ್ಲ. ಅವರ ಉದ್ದೇಶ ಮೀಸಲಾತಿ ಸೌಲಭ್ಯವನ್ನೇ ಕಿತ್ತು ಹಾಕುವುದೇ ಪರಂತು ಅದರ ಒಳಕ್ಕೆ ಬರುವುದಲ್ಲ ಎಂಬ ತಮ್ಮ ಅನ್ನಿಸಿಕೆಗಳನ್ನು ಹೊರ ಹಾಕುತ್ತಾರೆ.

ಮೀಸಲಾತಿ ಕುರಿತು ಅಂಬೇಡ್ಕರ್ ಅಭಿಪ್ರಾಯ ಏನಿತ್ತು ಎಂಬುದು ಕುತೂಹಲಕಾರಿ. ಕುಲದೀಪ್ ನಯ್ಯರ್ ಎಂಬ ಹಿರಿಯ ಪತ್ರಕರ್ತರು ತಮ್ಮ 'Beyond the lines' ಎಂಬ ಆತ್ಮಕಥೆಯಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ಬಿ.ಆರ್. ಪೂರ್ಣಿಮಾ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದರ ಹೆಸರು 'ಒಂದು ಜೀವನ ಸಾಲದು!' ಅದರ ಎರಡನೆ ಮುದ್ರಣದ ಪ್ರತಿಯ 99-100ನೇ ಪುಟಗಳಲ್ಲಿ ಹೀಗೆ ದಾಖಲಿಸಿದ್ದಾರೆ:

ಬಡವರನ್ನು ಪ್ರತಿನಿಧಿಸುತ್ತಿದ್ದ ದಲಿತ ನಾಯಕ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ಮಸೂದೆಯ ಮಾರ್ಗದರ್ಶಿಯಾಗಿದ್ದರು. ಅಂಬೇಡ್ಕರ್ ಅವರಿಗೆ ಸಂವಿಧಾನದ ಪ್ರಮುಖ ವಿಚಾರಗಳಲ್ಲಿ ನೆಹರು ಮತ್ತು ಪಟೇಲ್ ಅವರುಗಳ ಜೊತೆ ಅಷ್ಟೇನೂ ಭಿನ್ನಾಭಿಪ್ರಾಯ ಇರಲಿಲ್ಲ. ವಿಶೇಷವೆಂದರೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಾತಿ ಬೇಡವೇ ಬೇಡ ಎಂದು ಅಂಬೇಡ್ಕರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಮೀಸಲಾತಿ ಒಂದು ರೀತಿಯಲ್ಲಿ 'ಊರುಗೋಲು ತರಹ ಆಗಿಬಿಡುತ್ತದೆ' ಎಂದು ಅನುಮಾನ ವ್ಯಕ್ತಪಡಿಸಿದ್ದರು. ಕೇವಲ ಹತ್ತು ವರ್ಷಗಳ ಕಾಲವಾದರೂ ಮೀಸಲಾತಿ ಇರಲಿ ಎಂದು ಬಹಳ ಕಷ್ಟಪಟ್ಟು ಅಂಬೇಡ್ಕರ್ ಅವರನ್ನು ಒಪ್ಪಿಸಲಾಯಿತು.

ಪಟೇಲ್ ನೇತೃತ್ವದ ಮೀಸಲಾತಿ ಕುರಿತ ಸಮಿತಿ ಉದ್ದೇಶಿತ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡವಲ್ಲದೆ ಮುಸ್ಲಿಮರಿಗೂ ಮೀಸಲಾತಿ ಕಲ್ಪಿಸಬೇಕೆಂದು ಸಲಹೆ ನೀಡಿತು. ಆದರೆ ಮುಸ್ಲಿಮ್ ನಾಯಕರು ಅದನ್ನು ತಿರಸ್ಕರಿಸಿದರು. ತಮಗೆ ಪ್ರತ್ಯೇಕ ಅಥವಾ ವಿಶೇಷ ಎನ್ನುವ ಯಾವುದೇ ಹಣೆಪಟ್ಟಿ ಬೇಡವೆಂದು ಅಭಿಪ್ರಾಯಪಟ್ಟರು. ಮುಸ್ಲಿಮರಾಗಿ ವಿಭಜನೆಯ ಸಂದರ್ಭದಲ್ಲಿ ಸಾಕಷ್ಟು ಸಂಕಷ್ಟಕ್ಕೆ ಒಳಗಾಗಿದ್ದು ಮೀಸಲಾತಿಯಿಂದ ಮತ್ತಷ್ಟು ತೊಂದರೆಗೆ ಒಳಗಾಗುವುದು ಬೇಡ ಎಂದು ಅವರು ಹೇಳಿಬಿಟ್ಟರು.

ಮೇಲಿನ ಮಾತು ಕುರಿತಂತೆ ಅಭಿಪ್ರಾಯ ಬೇಧಗಳು ಇರಬಹುದು. ಇದರ ಸ್ಪಷ್ಟೀಕರಣ ಆಗಬೇಕಾಗಿದೆ.

ಇದು ಏನೇ ಇರಲಿ. ಮೀಸಲಾತಿ ಇರಬೇಕು ತಳಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರೆಯುವವರೆವಿಗೂ ಮೀಸಲಾತಿ ಮುಂದುವರೆಯಬೇಕೆಂಬುದು ಸಾರ್ವಜನಿಕ ಸತ್ಯ.

ಮೀಸಲಾತಿ ಸೌಲಭ್ಯ ಪಡೆಯುತ್ತಿರುವ ಸಮುದಾಯಗಳ ಬಗ್ಗೆ ಆಕ್ರೋಶ ಇರುವುದು ಕೇವಲ ಗುಜರಾತಿನಲ್ಲಲ್ಲ. ಕರ್ನಾಟಕದಲ್ಲೂ ಇದು ಬೂದಿ ಮುಚ್ಚಿದ ಕೆಂಡದಂತಿದೆ. ನನ್ನ ಅನುಭವವನ್ನು ಹೇಳುತ್ತೇನೆ. ನನ್ನ ನಾದಿನಿಯ ಮಗಳು ಪ್ರೀಯೂನಿವರ್ಸಿಟಿ ಪರೀಕ್ಷೆಯಲ್ಲಿ ಉನ್ನತ ದರ್ಜೆ ಪಾಸಾಗಿದ್ದಳು. ಒಳ್ಳೆಯ ಅಂಕಗಳನ್ನು ಪಡೆದಿದ್ದಳು. ಆಕೆಗೆ ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ದೊರೆಯಲಿಲ್ಲ. ಇದರಿಂದ ಖಿನ್ನಗೊಂಡ ಅವಳು ಆಕ್ರೋಶದಿಂದ ಹೇಳಿದ್ದು- ಈ ಎಸ್ಸಿಗ ಸುಟ್ಟಾಕ್ಬುಡಬೇಕು!

ಈ ಘಟನೆಯಾದ ಮಾರನೆಯ ದಿವಸ ಬೆಂಗ ಕಾನಿಷ್ಕ ಹೊಟೇಲಿನಲ್ಲಿ ಅಹಿಂದ ಸಭೆ ಇತ್ತು. ಅಧ್ಯಕ್ಷ ಮಾಜಿ ಮಂತ್ರಿಗಳಾದ ಲಕ್ಷ್ಮೀಸಾಗರ್ ಅವರು ಪ್ರಧಿ ಕೆ. ರಾಮದಾಸ್ ಅವರ ಮುಖ್ಯ ಭಾಷಣ. ಅವರು ಭಾಷಣದಲ್ಲಿ ಜಾತಿವರ್ಗಗಳಾಗಿ ಮಾರ್ಪಾಡುಗ ಅಂತಿಮವಾಗಿ ವರ್ಗ ವಿನಾಶ ಆಗುವ ಅವಶ್ಯಕತ ಒತ್ತಿ ಹೇಳಿದರು. ನನ್ನ ಸರದಿ ಬಂದಾಗ ನಾನ ನಾದಿನಿಯ ಮಗಳ ವಿಷಯ ಪ್ರಸ್ತಾಪಿಸಿದೆ. ಮೀಸಲ ಮೂಲಭೂತ ತತ್ವದ ಅರಿವು ಆಕೆಗೆ ಇದ್ದಿದ್ದರೆ ಈ ರೀತಿಪ್ರತಿಕ್ರಿಯಿಸುತ್ತಿರಲಿಲ್ಲ. ಶಾಲಾದಿನಗಳ ಇದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು ಅವರಿಗೆ ಅಂತರ್ಗತವಾಗುವಂತೆ ಮಾಡಬೇಕು ಹೇಳಿದೆ. ಅದು ಯಾಕೋ ಅಧ್ಯಕ್ಷರಿಗೆ ಅಷ್ಟಾಗಿ ಹಿಡಿ ತೋರಲಿಲ್ಲ. ನನ್ನ ಮಾತನ್ನು ಮೊಟಕುಗೊಳಿಸಿದ

ಈಗ ಏನಾಗಿದೆ ನೋಡಿ. ಮೀಸಲಾತಿ ಎ ರಾಜಕಾರಣಿಗಳ ಕೈ ಅಸ್ತ್ರ ಆಗಿದೆ. ಹಿಂದಿರು ಯಾವ ಮಾನದಂಡವನ್ನೂ ಅನುಸರಿಸದೆ ರಾ ಲಾಭ ಪಡೆಯಲು ಬಳಕೆಯಾಗುತ್ತಿದೆ. ಇತರೆ ಹಿಂ ಜಾತಿಗಳ ಪಟ್ಟಿ ವರ್ಷ ವರ್ಷ ಲಂಬವಾಗುತ್ತಿದೆ. ನ್ಯಾ ಹಿಂದುಳಿದಿರುವಿಕೆಯ ಮಾನದಂಡದಿಂದ ಹೊರ ಜಾತಿಪಟ್ಟಿಯಿಂದಲೂ ಹೊರಗಿರಬೇಕಾಗಿತ್ತು. ಹಾಗೆ ಆಗುತ್ತಿಲ್ಲ.

ಈಗ ಸೌಲಭ್ಯ ಪಡೆದವರೇ ಮತ್ತೆ ಪಡೆಯುತ್ತಿದ್ದಾರೆ. ಅವರದ್ದೇ ಜನಾಂಗದ ಬಹು ಜನರಿಗೆ ಇದು ವಿಸ್ತರಣೆ ಆಗುತ್ತಿಲ್ಲ. ಸೌಲಭ್ಯ ಪಡೆದ ಒಂದು ಜಾತಿಯಾಗಿ ರೂಪುಗೊಳ್ಳುವ ಅಪಾಯ ಇದು ತಪ್ಪಬೇಕು. ಮೀಸಲಾತಿ ನೀತಿ ಬದಲಾಗ ಎರಡು ತಲೆಮಾರುಗಳಿಗೆ ಮಾತ್ರ ಮೀಸಲಾತಿ ಸೀಮಿತಗೊಳಿಸಬೇಕು. ಮತ್ತು 'ಕೆನೆ ಪದರ ಮೀಸಲಾತಿ ಪಟ್ಟಿಯ ಒಳಗೇ ಇರಬೇಕೆ?' ಪ್ರಶ್ನೆ. ಪಟ್ಟಿಯಿಂದ ಖಂಡಿತ ಹೊರಗೆ ಹಾಕಬೇಕು.

ಗುಜರಾತಿನ ಪಟೇಲರ ಚಳವಳಿ ಮೀಸ ಬಗೆಗಿನ ಚರ್ಚೆಗೆ ಎಡೆ ಮಾಡಿಕೊಟ್ಟಿದೆ. ಮಿ ನೀತಿಯ ಪರಿಷ್ಕರಣೆಗೂ ಇದು ಸಕಾಲ ಎನಿಸು

■ ಎ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸಿದ್ಧಾರ್ಥನ ಅನ್ವೇಷಣೆ

ರ್ಮನ್ ಹೆಸ್ಸೆಯ ಸಿದ್ಧಾರ್ಥ ಮುಕ್ತ ಮನಸ್ಸಿನ ಕಾಲ ಧೋರಣೆಯ ವ್ಯಕ್ತಿತ್ವದವನಾಗಿದ್ದು ಅವನ ಹುಡುಕಾಟಕ್ಕೆ ಮತ್ತು ವಸ್ತುವಿಷಯಗಳ ಅರಿವಿಗೆ ಾಣಿಕವಾಗಿ ಮತ್ತು ವಿಶ್ರಾಂತವಾಗಿ ವವನಾಗುತ್ತಾನೆ. ಎಲ್ಲವನ್ನೂ ಅಚ್ಚರಿಯಿಂದ ಅವನ ಕಣ್ಣುಗಳಲ್ಲಿ ಪ್ರೇಮವಿರುತ್ತದೆ ಮತ್ತು ರುತ್ತದೆ.

ಘೋಷಗಳು ಕೇಳುವ, ಋತ್ವಿಕ್ಕುಗಳು ಅಧ್ಯಯನ ರುವ ಪರಿಸರದಲ್ಲಿ ಹುಟ್ಟಿ ಬೆಳೆದ ತಂದೆಗೆ ಕಂಡರೆ ಆನಂದ ಅವನ ಎದೆಯಲ್ಲಿ. ಕಲಿಕೆಯಲ್ಲಿ ಜೊತೆಗೆ ಜ್ಞಾನದಾಹ. ಚತುರನೂ ಪಂಡಿತನೂ ಯುವುದನ್ನು ನೋಡುತ್ತಿದ್ದ. ಬ್ರಾಹ್ಮಣರಲ್ಲಿ ಇವ ಮಾರನಾಗಿರುತ್ತಾನೆ ಎಂದು ಭಾವಿಸಿದ್ದ.

ುರು ಮನಸೋಲುವ ಸುಂದರನೂ ಹೌದವನು. ನಡೆದಾಡುವಾಗ ನನ್ನ ಹೃದಯದ ರುತ್ತದೆ. ಅವನು ನನ್ನ ಕಣ್ಣಲ್ಲೇ ಮನೆ ನೆ. ಅವನು ನನ್ನ ತುಟಿಗಳ ಮೇಲೆ ನನಗೆ ನಿಜಕ್ಕೂ ಸೌಜನ್ಯವನ್ನು ಮೀರಿ ನ ಎಲ್ಲೆಯನ್ನು ಪ್ರವೇಶಿಸುವೇನೋ ಯವಾಗುತ್ತದೆ. ಅವನ ಕನಸು ಕಾಣದೇ ಂದು ದಿನವೂ ನಡೆಯದು" ವಂತಹ ವ್ಯಕ್ತಿತ್ವ ಅವನದು.

ರ್ಥನ ಗೆಳೆಯ ಗೋವಿಂದನ ವೇ ಅವನು. ಗೋವಿಂದನು ದಲ್ಲಿ ಸಂಧಿಸುವ ಗೆಳೆಯ ಸಿದ್ಧಾರ್ಥನಿಗೆ ಳುತ್ತಾನೆ: "ನಿನ್ನ ಕಣ್ಣುಗಳನ್ನು, ನಿನ್ನ ಧ್ವನಿಯನ್ನು ನಾನು ಪ್ರೀತಿಸುತ್ತೇನೆ. ಯುವುದನ್ನು ನೋಡುವುದೇ ನಾನು ನದಿಂದ. ನೀನು ಮಾಡುವ ದನ್ನೂ ನಾನು ಮೆಚ್ಚುತ್ತೇನೆ. ನನಗೆ ುವ ಚೈತನ್ಯ[illegible] ಪಾರದರ್ಶಕತೆ, ಹ ವಿಚಾರಗಳು, ನಿನ್ನ ದೃಢ ನಿರ್ಧಾರ, ನಿನ್ನ ಮಾತಿನಲ್ಲಿರುವ ಕರೆ ಎಲ್ಲವೂ ನನ್ನ ಅಭಿಮಾನಕ್ಕೆ . ನನಗೆ ಗೊತ್ತಿದೆ ಗೆಳೆಯನೇ, ನೀನೊಬ್ಬ ವಾದ ಬ್ರಾಹ್ಮಣನಾಗಲಾರೆ ಎಂದು. ಪೂಜೆ ಮಾಡಿಸುವ ಸೋಮಾರಿ ಅರ್ಚಕನೋ, ನ್ನು ನಿರರ್ಥಕವಾಗಿ ಉಗುಳುವ ದುರಾಸೆಯ ನೋ ನೀನಾಗಲಾರೆ. ಹಾಗೆಯೇ ಬರಿದೇ ವಾದ ಪಂಡಿತನೋ, ವಂಚಿಸುವ ಪುರೋಹಿತನೋ ಾರೆ. ಹತ್ತು ಮಂದಿಯಲ್ಲಿ ಒಬ್ಬನಾಗಿ ರೆಯಲ್ಲಿರುವ ಮೂರ್ಖ ಕುರಿಯಂತೆ ನೀನು ಆಗಲಾರೆ. ಇಲ್ಲ, ನಿನ್ನ ಹಾಗೆಯೇ ನಾನೂ ರೆಯಲ್ಲಿಯ ಒಂದು ಕುರಿಯಾಗಲಾರೆ. ಸಾವಿರಾರು ಲ್ಲಿ ಒಬ್ಬನಾಗಲಾರೆ. ನಾನು ನಿನ್ನನ್ನು ಅನುಸರಿಸುವೆ ನೀನು ನನ್ನ ಪ್ರೀತಿಪಾತ್ರನಾದ ತೇಜಸ್ವಿ. ಂದು ದಿನವು ಬರುವುದು. ಆಗ ನೀನೇ ಯನಾದ ದೇವನಾಗುವೆ. ಆಗಲೂ ನಾನು ಇರುವೆ ಸಿದ್ಧಾರ್ಥ. ನಿನ್ನ ಸ್ನೇಹಿತನಾಗಿ, ನಿನ್ನ ಗಿ, ನಿನ್ನ ಸೇವಕನಾಗಿ, ನಿನ್ನ ಆಯುಧವನ್ನು ಂಡು ಹಿಂಬಾಲಿಸುವವನಾಗಿ, ನಿನ್ನ ನೆರಳಾಗಿ ಸಿದ್ಧಾರ್ಥ."

ಸಿದ್ಧಾರ್ಥನು ಎಲ್ಲರಿಂದಲೂ ಸುವವನು. ಅವನು ಉತ್ಸಾಹದ ಚಿಲುಮೆ, ಸಿಲೆ ಪ್ರತಿಯೊಬ್ಬರಿಗೂ. ನಮ್ಮೆಲ್ಲರಿಗೂ ಮುದ ನು.


ತನ್ನ ಆನಂದದ ಚಿಲುಮೆಯಾಗಿ ಸಿದ್ಧಾರ್ಥನೇ

ಮು ಸೀರಿನಿಂದ ಹರಿದುಬರುತ್ತಿರುವ, ರಾತ್ರಿಯ ನಕ್ಷತ್ರಗಳಿಂದ ಸೂಸುತ್ತಿರುವ, ಸೂರ್ಯನ ಪ್ರಭೆಯ ದ ಇಳಿಯುತ್ತಿರುವ ನನ್ನ ಕನಸುಗಳೊಡನೆ, ತ ವಿಚಾರಗಳೊಡನೆ ನಾನು ಹೇಗೆ ಸಿಲಿ? ನನ್ನ ಆತ್ಮದ ಅತೃಪ್ತಿಗೆ ಹಸಿದಸಿಯಾಗಿ ರುವ ಆ ವಿಚಾರಗಳನ್ನು ಋಗ್ವೇದದ ಗಲಿ, ಯಜ್ಞಗಳಾಗಲಿ, ವೃದ್ಧ ಬ್ರಾಹ್ಮಣರ ಗಳಾಗಲಿ ತಣಿಸಲಾರವು.." ಇದು ಅವನ .

ದಿನೇ ತನ್ನ ಅಸಂತೃಪ್ತಿಯನ್ನು ಸಿಕೊಳ್ಳುತ್ತಿದ್ದ ಸಿದ್ಧಾರ್ಥ. "ನನ್ನ ತಂದೆ, ತಾಯಿ, ಗೋವಿಂದ, ನನ್ನ ಮೇಲಿನ ಇವರ ಪ್ರೇಮವು ನಾದ ಆನಂದವನ್ನು ತರಲಾರದು. ನನ್ನ

ಪೋಷಿಸಲಾರದು, ತೃಪ್ತಿಗೊಳಿಸಲಾಗದು. ತಂದೆ ಮತ್ತು ಇತರ ಶಿಕ್ಷಕರು, ಚತುರ ಬ್ರಾಹ್ಮಣರು ತನ್ನ ಅಪೇಕ್ಷೆಯ ಬಟ್ಟಲಿಗೆ ತಮ್ಮ ಸಂಪದವನ್ನು ಈಯುತ್ತಿದ್ದಾರೆ. ಆದರೆ, ಅದು ತುಂಬಿಲ್ಲ, ನನ್ನ ಆತ್ಮವು ತೃಪ್ತಿಗೊಂಡಿಲ್ಲ, ನನ್ನ ಹೃದಯವು ಸಂತುಷ್ಟವಾಗಿಲ್ಲ, ಅವರ ಆ ಸಂಪ್ರೋಕ್ಷಣೆಯು ಒಳ್ಳೆಯದೇ. ಆದರೆ ಅದು ಬರಿಯ ನೀರು. ಅದು ಪಾಪಗಳನ್ನು ತೊಳೆಯದು. ನನ್ನ ಚೈತನ್ಯದ ದಾಹವನ್ನು ಹಿಂಗಿಸದು. ಅದು ನನ್ನೆದೆಯ ಭಯವನ್ನು ಹೋಗಲಾಡಿಸದು" ಎಂದುಕೊಳ್ಳುತ್ತಿದ್ದ ಸಿದ್ಧಾರ್ಥನಿಗೆ ಹಲವಾರು ಪ್ರಶ್ನೆಗಳೇಳುತ್ತಿದ್ದವು.

ಈ ಪ್ರಪಂಚವನ್ನು ನಿಜವಾಗಿ ಸೃಷ್ಟಿಸಿದವನು ಪ್ರಜಾಪತಿಯೇ? ಈ ಆತ್ಮವೆಂಬುದು ಸಂಪೂರ್ಣವಾಗಿ ಒಂಟಿಯಲ್ಲವೇ? ದೇವರುಗಳೆಂದರೆ ನನ್ನಂತೆಯೇ ಕಾಲಕ್ಕೆ ಸೀಮಿತವಾಗಿ, ಭೌತಿಕವಾಗಿ ಸೃಷ್ಟಿಗೊಳಗಾದವರಲ್ಲವೇ? ದೇವತೆಗಳಿಗೆ ಯಜ್ಞಗಳನ್ನು ಸಮರ್ಪಿಸುತ್ತಿರುವುದು ಒಳಿತೇ?






ಸರಿಯೇ? ಅರ್ಥಪೂರ್ಣವೇ? ಯಾರಿಗಾಗಿ ಈ ಯಜ್ಞಗಳನ್ನು ಅರ್ಪಿಸಬೇಕು? ಆತ್ಮಕ್ಕೇ ಅಲ್ಲವೇ? ಆತ್ಮವೆಂಬುದು ದೊರಕುವುದಾದರೂ ಎಲ್ಲಿ? ಯಾವುದನ್ನು ಯಾರಿಂದಲೂ ಬೇರ್ಪಡಿಸಲಾಗುವುದಿಲ್ಲವೋ ಅದನ್ನು ಹುಡುಕುವುದಾದರೂ ಎಲ್ಲಿ? ಯಾರೂ ಇಂತಹ ದಾರಿಯನ್ನು ತೋರಿಸಲಿಲ್ಲ. ತಂದೆ ಮತ್ತು ಇತರ ಶಿಕ್ಷಕರು, ಪಂಡಿತರು, ಅಥವಾ ಯಜ್ಞದ ಸೂಕ್ತಗಳು ಯಾವುವೂ ನನಗೆ ಆ ದಾರಿ ತೋರಿಸಲಿಲ್ಲ.

ಆಗಲೇ ಸಮಾನರ ಪರಿಚಯ ಅವನಿಗಾಗುವುದು. "ಏಕಾಂತವೇ ಅವರನ್ನು ಸುತ್ತುವರಿದಿದೆ. ಅವರು ಈ ಲೋಕದ ಜನರಿಗೆ ಅಪರಿಚಿತರೂ, ಶತ್ರುಗಳೂ ಆಗಿದ್ದಾರೆ. ಅವರ ಭಾವ ತೀವ್ರತೆಯಿಂದ ಬರುವ ಗಂಧವನ್ನು ಆಘ್ರಾಣಿಸು ಗೋವಿಂದ. ನಿರ್ದಾಕ್ಷಿಣ್ಯವಾಗಿ ತಮ್ಮ ಭೌತಿಕ ಇರುವನ್ನು ನಿರಾಕರಿಸುತ್ತಾರೆ. ಗೆಳೆಯ, ನಾಳೆ ಮುಂಜಾನೆ ಸಿದ್ಧಾರ್ಥ ಸಮಾನರಲ್ಲಿಗೆ ಹೋಗುವನು. ಸಮಾನನಾಗುವನು" ಎಂದು ನಿರ್ಧರಿಸುತ್ತಾನೆ. ಹೀಗೆ ಸಿದ್ಧಾರ್ಥ ಯಾವ ನಿರ್ಧಾರಕ್ಕೂ ದೀರ್ಘಕಾಲದ ತೀರ್ಮಾನವನ್ನು ತೆಗೆದುಕೊಳ್ಳದೇ ತನ್ನ ಒಳದೋಟಿಯ ತುಡಿತ ಮತ್ತು ಸೆಳೆತಕ್ಕೆ ತಕ್ಕಂತೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುತ್ತಾನೆ.

ಆದರೆ ತಂದೆ ಒಪ್ಪುವುದಿಲ್ಲ, ಸಿದ್ಧಾರ್ಥ ರಾತ್ರಿಯಿಡೀ ನಿಲ್ಲುವನು. ಕಾಯುವನು. ಹಟ ಹಿಡಿಯುವನು. ಕೊನೆಗೆ ಒಪ್ಪುವ ತಂದೆಯು "ನೀನು ಕಾಡಿಗೆ ಹೋಗು. ಸಮಾನನಾಗು. ನಿನಗೆ ನಿನ್ನ ಸಾಧನೆಯಿಂದ ಆ ಕಾಡಿನಲ್ಲಿ ಆನಂದ ದೊರಕಿದರೆ ಮತ್ತೆ ಮನೆಗೆ ಬಂದು ನನಗೆ ಆನಂದವಾಗಿರುವುದನ್ನು ಹೇಳಿಕೊಡು. ಒಂದು ವೇಳೆ ನಿನಗಲ್ಲಿ ನಿರಾಶೆಯಾದರೂ ಕೂಡ ಮನೆಗೆ ಮರಳಿ ಬಾ. ಮತ್ತೆ ನಾನು ಮತ್ತು ನೀನು ಒಟ್ಟಾಗಿ ದೇವರುಗಳಿಗೆ ಪ್ರಾರ್ಥನೆಗಳನ್ನು ಸಲ್ಲಿಸೋಣ. ಆದರೆ ಈಗ ನಾನು ನದಿಗೆ ಹೋಗಬೇಕು. ನನ್ನ ಮೊದಲನೆಯ ತರ್ಪಣಕ್ಕೆ ಕಾಲವಾಗಿದೆ" ಎಂದು ತನ್ನ ಅನುಮತಿಯನ್ನು ಸಹಜವಾಗಿಯೇ ನೀಡುವನು.

ಆದರೆ ಸಮಾನರೊಡನೆ ಮೂರು ವರ್ಷಗಳನ್ನು ಕಳೆಯುವ ಸಿದ್ಧಾರ್ಥನಿಗೆ ಅವನ ಮನಸ್ಸು ಹೇಳುವುದಾದರೂ ಏನು? "ನೀನು ಸಮಾನರಿಂದ ಸಾಕಷ್ಟು ಕಲಿತೆ. ನೋವು, ಹಸಿವು, ದಣಿವು ಈ ಎಲ್ಲದರ ಮೂಲಕ ನಿನ್ನ ದೇಹದ ಮೇಲೆ ನಿಯಂತ್ರಣ ಸಾಧಿಸಿದೆ. ವಿವಿಧ ಕೆಲಸಗಳನ್ನು ಮಾಡುವ ವಿವಿಧ ಜನರನ್ನು ನೋಡುತ್ತಿದ್ದೀಯೆ. ಆದರೆ ಅವೇನೂ ನಿನಗೆ ಸತ್ಯವನ್ನು ಹೇಳುತ್ತಿಲ್ಲ ಅಲ್ಲವೇ ಸಿದ್ಧಾರ್ಥ? ನಿನ್ನ ಮುಂದೆ ಒಂದು ಗುರಿಯಿದೆ. ಒಂದೇ ಗುರಿ. ಬರಿದಾಗುವುದು. ದಾಹವಿಲ್ಲದೇ, ಏನನ್ನೂ ಬಯಸದೇ, ಕನಸುಗಳಿಲ್ಲದೇ, ಸುಖದುಃಖಗಳಿಲ್ಲದೇ ಬರಿದಾಗುವುದು. ಬರಿದೇ ಬರಿದಾಗುವುದು. ಸಿದ್ಧಾರ್ಥ, ಧ್ಯಾನ, ಧಾರಣವೇ ಮೊದಲಾದ ಸಾಧನೆಯ ಮಾರ್ಗಗಳಿಂದ ನಿನ್ನನ್ನು ನೀನು ಸಾವಿರಾರು ಬಾರಿ ತ್ಯಜಿಸಿದ್ದೀಯೆ. ನೀನು ನೀನಲ್ಲದೇ ಗಂಟೆಗಳನ್ನು, ದಿನಗಳನ್ನು ಕಳೆದಿದ್ದೀಯೆ. ಆದರೆ, ನಿನ್ನತನದಿಂದ ನೀನು ಎಷ್ಟೇ ಹೊರಗೆ ಹೋದರೂ ಮತ್ತೆ ನಿನ್ನತನಕ್ಕೇ ನೀನು ಮರಳಿ ಬರುತ್ತೀಯ ಅಲ್ಲವೇ ಸಿದ್ಧಾರ್ಥ? ನೀನು ಏನು ಹೇಳುತ್ತೀಯಾ ಸಿದ್ಧಾರ್ಥ?" ಎಂದು ಛೇಡಿಸುವ ಮನಸ್ಸಿಗೆ ಏನು ಹೇಳುವುದೆಂದು ತಿಳಿಯದೇ ಗೋವಿಂದನನ್ನೂ ತನ್ನ ಅರ್ಥಾನ್ವೇಷಣೆಗೆ ಎಳೆದುಕೊಳ್ಳುತ್ತಾನೆ. "ನಾವು ಪ್ರಗತಿ ಹೊಂದಿದ್ದೇವೆ, ಏನಾದರೂ ಗುರಿ ಸಾಧಿಸಿದ್ದೇವೆ ಅನ್ನುವುದರ ಬಗ್ಗೆ ನೀನು ಏನು ಹೇಳ್ತೀಯಾ ಗೋವಿಂದ?" ಎಂದು ಕೇಳಿದರೆ ಗೋವಿಂದ ತಾವು ಸಮಯವನ್ನು ವ್ಯರ್ಥ ಮಾಡುತ್ತಿದ್ದೇವೆ ಎಂದು ಭಾವಿಸುವುದಿಲ್ಲ, ಬದಲಾಗಿ, "ನಾವು ಕಲಿಯುತ್ತಿದ್ದೇವೆ. ನಮ್ಮ ಕಲಿಕೆಯನ್ನು ಮುಂದುವರಿಸುತ್ತೇವೆ. ನೀನೊಬ್ಬ ದೊಡ್ಡ ಸಮಾನನಾಗುತ್ತೀಯ ಸಿದ್ಧಾರ್ಥ. ಬಹಳ ಬೇಗನೇ ನೀನು ಪ್ರತಿಯೊಂದೂ ಅಭ್ಯಾಸವನ್ನೂ ಮಾಡಿ ಮುಗಿಸಿದೆ. ಆಗಾಗ ನಮ್ಮ ಹಿರಿಯ ಸಮಾನರೂ ನಿನ್ನ ಅಭಿನಂದಿಸಿದ್ದಾರೆ. ಒಂದು ದಿನ ನೀನೊಬ್ಬ ಮಹಾತ್ಮನಾಗುತ್ತೀಯ ಸಿದ್ಧಾರ್ಥ" ಎಂದು ಸಮಾಧಾನಗೊಳಿಸಲು ಯತ್ನಿಸಿದರೆ ಸಿದ್ಧಾರ್ಥ ಅಂತಹ ಬಡ ಸಂಧಾನದ ಪಟ್ಟಿಗೆ ಬಗ್ಗುವವನಲ್ಲ. "ಈ ಸಮಾನರ ಜೊತೆ ಸೇರಿಕೊಂಡು ಇವತ್ತಿನವರೆಗೂ ನಾವು ಏನೇನೆಲ್ಲಾ ಕಲಿತಿರುವೆವೋ ಅದನ್ನು ಇನ್ನೂ ಸರಳವಾಗಿ ಬೇರೆ ವಿಧಾನಗಳಿಂದಲೇ ಕಲಿಯಬಹುದಿತ್ತು, ಈ ರೀತಿ ನಮ್ಮತನವನ್ನು ಮರೆಯುವುದನ್ನು ಮದಿರಾಲಯಗಳಲ್ಲಿ, ವೇಶ್ಯಾವಾಟಿಕೆಗಳಲ್ಲಿ, ಜೂಜುಗೃಹಗಳಲ್ಲಿ ಕೂಡ ಕಲಿಯಬಹುದಿತ್ತು" ಎನ್ನುತ್ತಾನೆ ಸಿದ್ಧಾರ್ಥ. ಸಾಕಷ್ಟು ಧ್ಯಾನ ಧಾರಣ ಉಪವಾಸಾದಿಗಳನ್ನು ಮಾಡಿ ತನ್ನನ್ನು ತಾನು ಗಮನಿಸಿಕೊಳ್ಳುವ ಸಿದ್ಧಾರ್ಥನಿಗೆ ಅನ್ನಿಸುವುದಾದರೂ ಏನು? "ಏನದು ಧ್ಯಾನ, ಅಶರೀರಭಾವ, ಉಪವಾಸ, ಪ್ರಾಣಧಾರಣ! ಇವೆಲ್ಲವೂ ತನ್ನತನದಿಂದ ತಪ್ಪಿಸಿಕೊಳ್ಳುವುದು. ನಮ್ಮದೇ ಇಂದ್ರಿಯಗಳನ್ನು ಜೋಮು ಹಿಡಿಸಿಕೊಂಡು ನೋವಾಗದಂತೆ ಜಡಗೊಳಿಸಿಕೊಳ್ಳುವುದು. ದಿಕ್ಕುಗಾಣದ ಬದುಕಿನಿಂದ ಒಂದಷ್ಟು ತಪ್ಪಿಸಿಕೊಳ್ಳುವುದು. ಈ ತಪ್ಪಿಸಿಕೊಳ್ಳುವುದನ್ನು ಎತ್ತಿನ ಬಂಡಿ ಓಡಿಸುವವನೂ ಕೂಡಾ ಮದಿರಾಲಯದಲ್ಲಿ ಒಂದಿಷ್ಟು ಅಕ್ಕಿಯ ಮದಿರೆಯನ್ನು ಕುಡಿಯುತ್ತಾ ಸಾಧಿಸುತ್ತಾನೆ. ಆಗ ಅವನಿಗೂ ಏನೂ ಬಾಧಿಸುವುದಿಲ್ಲ, ದೇಹಭಾವ ಮರೆಯುವ ತತ್ಕಾಲದ ಪಲಾಯನವನ್ನು ಈ ಸಿದ್ಧಾರ್ಥ ಗೋವಿಂದರಂತೆಯೇ, ಅವನೂ ಕೆಲವು ಬಟ್ಟಲ ಅಕ್ಕಿಯ ಸುರೆಯ ಕುಡಿದು ಪಡೆಯುತ್ತಾನೆ. ಇದೂ ಅಷ್ಟೇ!"

ಆದರೆ ಗೋವಿಂದ ತನ್ನ ಸಾಂಪ್ರದಾಯಿಕ ಮನಸ್ಥಿತಿಯಿಂದ ಹೊರಗೆ ಬರಲು ಇಚ್ಛಿಸುವುದಿಲ್ಲ. "ಸಿದ್ಧಾರ್ಥನೆಂದರೆ ಗಾಡಿ ಓಡಿಸುವವನಲ್ಲ, ಸಮಾನನೆಂದರೆ ಕುಡಿದು ಬೀಳುವವನಲ್ಲ. ನಿಜ, ಒಬ್ಬ ಕುಡುಕ ತನ್ನ ಇಂದ್ರಿಯಪ್ರಜ್ಞೆಗಳನ್ನು ಜಡಗೊಳಿಸಿಕೊಳ್ಳುತ್ತಾನೆ. ನಿಜ, ಅವನು ತತ್ಕಾಲಕ್ಕೆ ತನ್ನ ದೇಹಭಾವದಿಂದ ಹೊರತಾಗಿ ವಿಶ್ರಮಿಸುತ್ತಾನೆ. ಆದರೆ ಅಮಲು ಇಳಿದಾಗ ಅವನಲ್ಲಿ ಏನೂ ಬದಲಾವಣೆ ಆಗಿರುವುದಿಲ್ಲ, ಅವನಿಗೆ ಅರಿವು, ವಿವೇಕ ಏನೂ ಬಂದಿರುವುದಿಲ್ಲ. ಅವನಿಗೆ ಜ್ಞಾನೋದಯವೂ ಆಗಿರುವುದಿಲ್ಲ, ಉನ್ನತಿಯನ್ನು ಪಡೆದಿರುವುದಿಲ್ಲ." ಇದು ಅವನ ಧೋರಣೆ. "ಖಂಡಿತವಾಗಿಯೂ ನಾವು ವರ್ತುಲದೊಳಗೇ ಸುತ್ತುತ್ತಿಲ್ಲ. ಇದರಲ್ಲಿ ಅನೇಕ ಸುರುಳಿಗಳಿವೆ. ನಾವು ಅವುಗಳಲ್ಲಿ ಮೇಲೆಮೇಲಕ್ಕೆ ಸಾಗುತ್ತಿದ್ದೇವೆ. ನಾವೀಗ ಅದೆಷ್ಟೋ ಹಂತಗಳನ್ನು ದಾಟಿದ್ದೇವೆ" ಎಂದೇ ನಂಬುತ್ತಾನೆ. ಆದರೆ ಸಿದ್ಧಾರ್ಥನದು ವಿಶ್ಲೇಷಣಾತ್ಮಕವಾದ ದೃಷ್ಟಿ. ಅವನದು ಬಹಳ ಸೂಕ್ಷ್ಮ ಮತ್ತು ನಿಷ್ಠುರವಾದ ಪರೀಕ್ಷಾತ್ಮಕ ದೃಷ್ಟಿ. ತಮ್ಮ ಮಾರ್ಗದರ್ಶಿಯಾಗಿರುವ ಹಿರಿಯ ಸಮಾನರ ಬದುಕಿಗೆ ಅರವತ್ತರ ಪ್ರಾಯವಾಗಿದೆ, ಇನ್ನೂ ನಿರ್ವಾಣವನ್ನು ಪಡೆದಿಲ್ಲ. "ಅವರಿಗೆ ಎಪ್ಪತ್ತು, ಎಂಭತ್ತು ಆಗಬಹುದು. ಹಾಗೆಯೇ ನನಗೂ, ನಿನಗೂ ವಯಸ್ಸಾಗುವುದು. ನಿರ್ವಾಣ ಹೊಂದುತ್ತೇವೆಯೇ? ನಮ್ಮ ಹಿರಿಯ ಗುರುವಿಗೇ ನಿರ್ವಾಣ ಸಿಕ್ಕಿಲ್ಲ, ನಮಗೂ ಸಿಗುವುದಿಲ್ಲ. ಗೋವಿಂದಾ, ಅಲ್ಲಿರುವ ಅಷ್ಟೊಂದು ಸಮಾನರಲ್ಲಿ ಯಾರೊಬ್ಬರೂ ನಿರ್ವಾಣ ಹೊಂದುವರೆಂಬ ನಂಬಿಕೆ ನನಗಿಲ್ಲ, ಇನ್ನೂ ಅತಿ ಮುಖ್ಯವಾದ ಹಾದಿಯನ್ನು ನಾವು ಕಂಡುಕೊಂಡೇ ಇಲ್ಲ, ಕಂಡುಕೊಳ್ಳಲು ಸಾಧ್ಯವೂ ಇಲ್ಲ ಅಲ್ಲವೇ ಗೋವಿಂದಾ?" ಎಂದು ಕೇಳುವನು ಸಿದ್ಧಾರ್ಥ. ತಾನು ಸಮಾನರಿಂದ ಹೊರತಾಗುವನು ಎಂದೂ ತಿಳಿಸುವನು. "ಅದಷ್ಟು ಬೇಗನೆಯೇ ಈ ನಿನ್ನ ಗೆಳೆಯ ಸಮಾನರ ದಾರಿಯಿಂದ ದೂರ ಸರಿಯುತ್ತಾನೆ. ನಾನು ದಾಹದಿಂದ ಹಾತೊರೆಯುತ್ತಿದ್ದೇನೆ ಗೋವಿಂದ. ನನ್ನಲ್ಲಿ ಪ್ರಶ್ನೆಗಳು ಏಳುತ್ತಲೇ ಇವೆ ಗೆಳೆಯಾ. ಅರಿವಿಗಾಗಿ ಅನ್ವೇಷಣೆ ಮಾಡುತ್ತಿದ್ದೇನೆ. ಆದರೆ, ಈ ಸಮಾನರು, ಬ್ರಾಹ್ಮಣರು



▶▶ 19

ಮನೆಮುರುಕ ವಾಸ್ತು ಭವಿಷ್ಯಕಾರರು

ಇತ್ತೀಚೆಗೆ ಮನೆಮುರುಕ ವಾಸ್ತು ಭವಿಷ್ಯಕಾರರ ಹಾವಳಿ ನಗರಗಳಲ್ಲಿ ಹೆಚ್ಚಾಗುತ್ತಿದೆ. ಎಂದೋ ಕಟ್ಟಿದ ಮನೆಗಳನ್ನು, ಕಟ್ಟಡಗಳನ್ನು, ಗುಡಿಗೋಪುರಗಳನ್ನು ಕೆಡವಿ ಹೊಸದಾಗಿ ಅವರು ಹೇಳುವ ದಿಕ್ಕು ದೆಸೆಗೆ ವಾಸ್ತುಪ್ರಕಾರ ಕಿಟಕಿ ಬಾಗಿಲು ಇಡುತ್ತಿರುವ ದೃಶ್ಯ ಕಣ್ಣಿಗೆ ರಾಚುತ್ತಿವೆ. "ಯಾಕೆ ಸ್ವಾಮಿ ಬಾಗಿಲು ಒಡೆದಿರಿ, ಕಿಟಕಿ ತೆಗೆದಿರಿ, ಅಡುಗೆಮನೆ, ಬಾತ್‌ರೂಮ್ ಬದಲಿಸಿದಿರಿ" ಎಂದರೆ "ಅದೇ ಸಾರ್, ವಾಸ್ತು ಪ್ರಕಾರ ದಕ್ಷಿಣಕ್ಕೆ ಬಾಗಿಲು ಇರಬಾರದಂತೆ, ಅಡುಗೆ ಮನೆ ಅಲ್ಲಿರಬಾರದಂತೆ, ಅಗ್ನಿ ಮೂಲೆಗೆ ಇರಬೇಕಂತೆ, ಬಾತ್‌ರೂಮ್ ಇಲ್ಲಿರಬೇಕಂತೆ, ವಾಟರ್ ಟ್ಯಾಂಕ್ ಅಲ್ಲಿರಬೇಕಂತೆ, ಸಂಪು ಇಲ್ಲಿರಬೇಕಂತೆ, ಅದಕ್ಕೆ ಆಲ್ಟ್ರೇಷನ್ ಮಾಡಿಸುತ್ತಿದ್ದೇವೆ" ಎನ್ನುತ್ತಾರೆ. "ಅರೆ ಇಷ್ಟು ದಿನ, ಇಷ್ಟು ವರ್ಷ ಇದ್ದಿರಲ್ಲ, ಈಗೇಕೆ ಇಂಥ ಕೆಲಸಕ್ಕೆ ಕೈ ಹಾಕಿದಿರಿ?" ಎಂದರೆ "ಏನೋ ಹೆಂಗಸರು ಕೇಳಬೇಕಲ್ಲ, ಮಕ್ಕಳು ಕೇಳಬೇಕಲ್ಲ" ಎಂದು ಸಬೂಬು ಕೊಡುತ್ತಾರೆ.

ಜ್ಯೋತಿಷ್ಯಕಾರರ ಹಾವಳಿಯಿಂದ ಹೀಗೆ ಮನೆ ಮಠಗಳೂ ಮಂತ್ರಿಮಹೋದಯರ ಬಂಗಲೆಗಳೂ ಮುರಿದುಬೀಳುತ್ತಿವೆ. ಒಬ್ಬ ಸಚಿವನ ಹೆಸರುಬಲಕ್ಕೆ ಒಂದು ಬಂಗಲೆಯ ವಾಸ್ತು ಸರಿ ಇಲ್ಲ ಎಂದರೆ ಕೂಡಲೇ ಸಾರ್ವಜನಿಕ ಹಣದಿಂದ ಅದರ ಬಾಗಿಲು ಕಿಟಕಿಗಳ ದಿಕ್ಕುದೆಸೆ ಬದಲಿಸಲಾಗುತ್ತದೆ. ವಿಧಾನಸೌಧದ ಕಚೇರಿ ಬಾಗಿಲುಗಳನ್ನೇ ಮುರಿದು ದಿಕ್ಕು ಬದಲಿಸಿ ತಂತಮ್ಮ ಹೆಸರುಬಲಕ್ಕೆ ಬರುವ ದಿಕ್ಕಿಗೆ ಬದಲಿಸಿಕೊಂಡ ಅವಿವೇಕಿಗಳೂ ಇದ್ದಾರೆ. ಒಟ್ಟಾರೆ ನಮ್ಮ ದೈನಂದಿನ ಬದುಕನ್ನು ಈ ಭವಿಷ್ಯಕಾರರು ನಿರ್ಧರಿಸುತ್ತಿದ್ದಾರೆ. ಕಾಣದ ಕೈ ನಮ್ಮನ್ನು ನಿಯಂತ್ರಿಸುತ್ತಿದೆ. ವಾಸ್ತು ಬಗೆಗಿನ ಮೌಢ್ಯ ಅತಿಯಾಗುತ್ತಿದೆ.

ದಿನಬೆಳಗಾದರೆ ನಿತ್ಯ ಭವಿಷ್ಯದಿಂದಲೇ ನಮ್ಮ ಕಾರ್ಯಕ್ರಮಗಳು ಆರಂಭಗೊಳ್ಳುತ್ತವೆ. ಹೆಸರುಬಲ, ರಾಶಿಬಲ, ಕಾಲಬಲ ನೋಡಿಕೊಂಡೇ ಜನ ತಮ್ಮ ದೈನಂದಿನ ಕಾರ್ಯಕಲಾಪಗಳಲ್ಲಿ ತೊಡಗಿಕೊಳ್ಳುವ ಕಾಲ ಬಂದಿದೆ. ಆದರೂ ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲ, ಭವಿಷ್ಯತ್‌ಕಾರರ ಜಾಲಕ್ಕೆ ಸಿಲುಕಿದ ಅಮಾಯಕ ಜನರು ಬಲೆಗೆ ಬಿದ್ದ ಹಕ್ಕಿಗಳಂತೆ ಸ್ವಂತ ಯೋಚನೆಯನ್ನೇ ಬಿಟ್ಟುಬಿಟ್ಟಿದ್ದಾರೆ. ಮುಂಬರುವ ಕಷ್ಟಗಳಿಗೆ ಪರಿಹಾರವೆಂದು ಪೂಜೆ ಪುನಸ್ಕಾರ, ದಕ್ಷಿಣೆ ದಾನಗಳೆಂದು ಅವರಿಗೆ ಕೊಡುವುದು ಇವರ ಪಾಡಾಗಿದೆ.

ಇದೇ ಉಳ್ಳವರೆಲ್ಲರ ಜೀವನ ಶೈಲಿಯಾಗುತ್ತಿದೆ. ಇರಲು ಸೂರೂ ಇಲ್ಲದೆ, ಎರಡು ಹೊತ್ತಿನ ಊಟಕ್ಕೂ ತತ್ವಾರ ಇರುವ ಬಡವರು ವಾಸ್ತು, ಬಾಗಿಲು, ದಿಕ್ಕುದೆಸೆಗಳನ್ನು ನೋಡುತ್ತಾ ಕೂತರೆ ಅವರು ಬದುಕುವುದೆಂತು? ಈಗೀಗ ದಕ್ಷಿಣಕ್ಕೆ ಬಾಗಿಲಿರುವ ಮನೆಗಳಿಗೆ ಬಾಡಿಗೆಗೆ ಬರುವ ಜನರೇ ಇಲ್ಲದಂತಾಗಿದೆ. ದಕ್ಷಿಣಾಭಿಮುಖದ ಸೈಟಿನ ಬೆಲೆ ಕೂಡ ಕಡಿಮೆ. ಈ ಬಗ್ಗೆ ನಮ್ಮ ಒಂದೆರಡು ಸ್ವಂತ ಅನುಭವಗಳನ್ನೇ ಇಲ್ಲಿ ಹೇಳಿದರೆ ತಪ್ಪಲ್ಲ.


ವಿಜಯನಗರದಲ್ಲಿ 1980ರಲ್ಲಿ ಕಟ್ಟಿದ ನಮ್ಮದೊಂದು ಹಳೆಯ ಮನೆ ಇದೆ. ಅದರ ಬಾಗಿಲು ದಕ್ಷಿಣಕ್ಕೆ. 2000 ವರ್ಷಗಳವರೆ ನಾವು 20 ವರ್ಷ ಆ ಮನೆಯಲ್ಲೇ ವಾಸ ಇದ್ದೆವು. ನಮ್ಮ ಮೂರು ಮಕ್ಕಳು ಓದಿ ಬರೆದು ಇಬ್ಬರು



ವಿದೇಶಕ್ಕೂ ಹೋದರು. ನಾವು ನಾಗರಬಾವಿಗೆ ಬಂದ ಮೇಲೆ ಅದನ್ನು ಬಾಡಿಗೆಗೆ ಕೊಟ್ಟೆವು. ಆದರೆ ಬರುಬರುತ್ತ ಮುಂದಿನ ರಸ್ತೆ ಎತ್ತರಗೊಂಡಿತು. ನೀರು ಕೊಳಾಯಿಗಳು ತುಕ್ಕು ಹಿಡಿದವು. ಅದನ್ನೆಲ್ಲಾ ಈಗ ರಿಪೇರಿ ಮಾಡಿಸುತ್ತಿದ್ದೆವು. ಇದೇ ಸಂದರ್ಭದಲ್ಲಿ ನಮ್ಮ ಎದುರು ಮನೆಯವರು ತಮ್ಮ ಮನೆ ಕೆಡವಿ ಹೊಸಮನೆ ನಿರ್ಮಾಣಕ್ಕೆ ತೊಡಗಿಕೊಂಡಿದ್ದಾರೆ. ಅಲ್ಲಿನತನಕ ಇರಲು ಅವರಿಗೊಂದು ಮನೆ ಬೇಕಿತ್ತು, ಅಚಾನಕ್ಕಾಗಿ ಬಂದ ನಮ್ಮ ಗೆಳೆಯ "ಅಲ್ಲಿಯ ತನಕ ಈ ಮನೆಯಲ್ಲೇ ಇರಬಹುದಲ್ಲ" ಎಂದರೆ, ಅವರು "ಇದು ದಕ್ಷಿಣದ ಬಾಗಿಲು, ನಮ್ಮ ಮಗ ಒಪ್ಪುವುದಿಲ್ಲ" ಎಂದರು. ಅವರ ಮಗ ಸಾ… ಇಂಜಿನಿಯರ್. ಆದಕ್ಕೆ ನಾವು "ಬಾಗಿಲು … ಇಟ್ಟುಕೊಟ್ಟರೆ ಆಗಬಹುದೇ?" ಎಂದರೆ "ಸರಿ" … ನಾವು ಬೆರಗಾಗಿ ಹೋದೆವು. ನಮ್ಮ ದಕ್ಷಿಣದ … ಮನೆಗೆ ಇನ್ನೂ ನಾವು ಬಾಡಿಗೆದಾರರನ್ನು ಹುಡುಕು…


ನಮ್ಮ ಮನೆ ಕತೆ ಹೀಗಾಯಿತು. ಗೆಳೆ… ರಾಜೇಗೌಡರು ಹೇಳಿದ ಕತೆ ಬೇರೆಯದೇ … ಮಹಾಲಕ್ಷ್ಮೀ ಲೇಔಟ್‌ನಲ್ಲಿ ಅವರದೂ ಒಂ… ಮನೆ ಇದ್ದು; ಸುಮಾರು 30 ವರ್ಷಗಳ… ಕಟ್ಟಿದ್ದು, ಬಾಡಿಗೆಗೆ ಬಿಟ್ಟು ನಾಗರಬಾವಿಗೆ … ಹಿಂದಿದ್ದ ಬಾಡಿಗೆದಾರ ಬಿಟ್ಟುಹೋದ … ಕೆಲವಾರು ತಿಂಗಳು ಖಾಲಿಯೇ ಇತ್ತು, ಕಾರಣ … ದಕ್ಷಿಣಕ್ಕೆ ಬಾಗಿಲಿರುವುದು. ಕಡೆಗೆ ಒಬ್ಬ ಬಾ… ಸಿಕ್ಕಿದನಂತೆ. ಲೀಜ್‌ಗೆ ಹಾಕಿದರು. ಆತ … ಫೋನ್‌ನಲ್ಲಿ ಕೇಳಿದ "ಈ ದಕ್ಷಿಣದ ಬ… ಪೂರ್ವಕ್ಕೆ ತಿರುಗಿಸಲೇ?" ಎಂದು. ಇವರು … ಆಗಲ್ಲ, ನಮಗೆ ಟೈಮಿಲ್ಲ, ಹಣವೂ ಇಲ್ಲ" … "ನಾನೇ ನನ್ನ ಹಣದಲ್ಲಿ ತಿರುಗಿಸಿಟ್ಟುಕೊಳ್ಳುತ್ತೇನೆ" … ಗೌಡರ ಮಕ್ಕಳು "ಹೋಗಲಿ ಬಿಡಿ … ಖಾಲಿಯಾಕಿರಬೇಕು?" ಎಂದರಂತೆ. ಗೌಡರು … ಎಂದರು. ಹೀಗೆ ವಾಸ್ತು ಭವಿಷ್ಯಕಾರರ ಮನೆಮು… ನಮ್ಮ ಮನೆಗಳಿಗೂ, ಮನಗಳಿಗೂ ನುಗ್ಗಿ … ಆದ್ದರಿಂದ ನಮ್ಮ ಸಾಮಾನ್ಯ ವಿವೇ… ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಇಲ್ಲ… ಮನೆಮುರುಕರ ಹಾವಳಿ ಇನ್ನೂ ಹೆಚ್ಚಾಗುವುದ… ಇಂಥ ಮೌಢ್ಯಗಳಿಗೆ ಬೆಲೆ ತೆರಬೇಕಾಗುವುದು.

- ಪ್ರೊ. ಶಿವರಾ…



ಕಲಬುರ್ಗಿಯವರ ಬಲಿದಾನ ವ್ಯರ್ಥವಾಗದಿರ…

ಮಹಾರಾಷ್ಟ್ರದಲ್ಲಿ ವಿಚಾರವಾದಿ ನರೇಂದ್ರ ದಾಭೋಲ್ಕರರ ಬಲಿದಾನದಿಂದ ಆ ರಾಜ್ಯದಲ್ಲಿ ಮೂಢನಂಬಿಕೆ ನಿಷೇಧ ಕಾನೂನು ಅನುಷ್ಠಾನಗೊಂಡಿತು. ದಾಭೋಲ್ಕರರು ಜೀವಂತವಿದ್ದಾಗ ಅಲ್ಲಿ ಆಡಳಿತದಲ್ಲಿದ್ದ ಮೃದು ಹಿಂದೂತ್ವ ನೀತಿ ಅನುಸರಿಸುತ್ತಿದ್ದ ಕಾಂಗ್ರೆಸ್-ಎನ್‌ಸಿಪಿ ಸರಕಾರ ಏನಾದರೊಂದು ನೆಪದಲ್ಲಿ ಈ ಮಸೂದೆ ಪಾಸ್ ಮಾಡುವುದನ್ನು ವರ್ಷಾನುಗಟ್ಟಲೆ ಮುಂದೂಡುತ್ತಲೇ ಬಂದಿತ್ತು. ಆದರೆ ದಾಭೋಲ್ಕರರ ಹತ್ಯೆಯ ನಂತರ ಅವರ ಶಿಷ್ಯರು, ಅಭಿಮಾನಿಗಳು ಹಾಗೂ ಸಹವರ್ತಿಗಳು ಹೇರಿದ ಭಾರಿ ಒತ್ತಡದಿಂದಾಗಿ ಮಹಾರಾಷ್ಟ್ರ ಸರಕಾರ ಮೂಢನಂಬಿಕೆ ನಿಷೇಧ ಕಾಯ್ದೆ ಪಾಸ್ ಮಾಡುವ ಅನಿವಾರ್ಯತೆ ಉಂಟಾಯಿತು. ಹೀಗೆ ದಾಭೋಲ್ಕರರ ಬಲಿದಾನ ಕೊನೆಗೂ ವ್ಯರ್ಥವಾಗಲಿಲ್ಲ.



ಅದೇ ರೀತಿ ನಮ್ಮ ಡಾ. ಎಮ್.ಎಮ್.ಕಲಬುರ್ಗಿಯವರ ಬಲಿದಾನವೂ ವ್ಯರ್ಥವಾಗದಿರಲಿ. ಮಹಾರಾಷ್ಟ್ರದಂತಹದ್ದೇ ಮೂಢನಂಬಿಕೆ ನಿಷೇಧ ಕಾಯ್ದೆ ಕರ್ನಾಟಕದಲ್ಲಿಯೂ ಅನುಷ್ಠಾನವಾಗುವಂತೆ ಕಲಬುರ್ಗಿಯವರ ಅಭಿಮಾನಿಗಳಾಗಿರುವ ಸಮಸ್ತ ಕನ್ನಡಿಗರೂ ಕರ್ನಾಟಕ ಸರಕಾರದ ಮೇಲೆ ಒತ್ತಡ ಹೇರಲಿ.



ಕರ್ನಾಟಕದ ಈಗಿನ ಕಾಂಗ್ರೆಸ್ ಸರಕಾರವೂ ಮೃದು ಹಿಂದೂತ್ವ ನೀತಿ ಅನುಸರಿಸುತ್ತಿರುವುದರಿಂದ ಅಷ್ಟು ಸುಲಭವಾಗಿ ಈ ಮೂಢನಂಬಿಕೆ ನಿಷೇಧ ಕಾಯ್ದೆ ಅನುಷ್ಠಾನಗೊಳಿಸಲು ಸರಕಾರ ಒಪ್ಪಲಿಕ್ಕಿಲ್ಲ ನಿಜ. ಆದರೆ ಈಗ ಪ್ರೊ. ಕಲಬುರ್ಗಿಯವರ ಹತ್ಯೆಯಿಂದಾಗಿ ಪರಿಸ್ಥಿತಿ ಕಾವೇರಿರುವುದರಿಂದ ಸರಕಾರದ ಮೇಲೆ ಒತ್ತಡ ಹೇರಿ ಮೂಢನಂಬಿಕೆ ನಿಷೇಧ ಕಾಯ್ದೆ ಅನುಷ್ಠಾನಗೊಳಿಸುವ ಸುಸಮಯ ಒದಗಿಬಂದಿದೆ. ಈ ಸಂದರ್ಭ ಕೈತಪ್ಪಲು ಬಿಡಬಾರದು.


- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಸಾಹಿತಿಗಳ ಸ್ವಾತಂತ್ರ್ಯಕ್ಕೆ ಗುಂಡು!

ಹೇಯಕೃತ್ಯಕ್ಕೆ ಕಾರಣನಾದ ದುಷ್ಕರ್ಮಿಗಳಿಗೆ ಧಿಕ್ಕಾರ! ಅತ್ಯಂತ ಖಂಡನೀಯ ಕೃತ್ಯಗೈದು ಇಡೀ ಸಾಹಿತ್ಯಕ, ಸಾಂಸ್ಕೃತಿಕ ಲೋಕವನ್ನು ತಲ್ಲಣಕ್ಕೆ ದೂಡಿದ ಅವರ ಅಸಹನೆಗೆ ಧಿಕ್ಕಾರ. ನಾವು ಎಂತಹ ಅನಾಗರಿಕ ಸಮಾಜದಲ್ಲಿ ಜೀವಿಸುತ್ತಿದ್ದೇವೆ ಎಂಬುದರ ಪ್ರತೀಕವಾಗಿದೆ ಡಾ.ಎಂ.ಎಂ. ಕಲಬುರ್ಗಿಯವರ ಕಗ್ಗೊಲೆ.


- ಡಾ.ಅಮೀರುದ್ದೀನ್ ಖಾಜಿ, ವಿಜಯಪುರ

ಶೋಕಣ್ಣನ ಶೋಕಗೀತೆ




ಇತ್ತೀಚೆಗೆ ನಿಧನರಾದ ಮಾಜಿ ರಾಷ್ಟ್ರಪತಿ ಎ. ಪಿ. ಜೆ. ಅಬ್ದುಲ್ ಕಲಾಮ್ ಅವರ ಸಾವಿನಲ್ಲೂ ಪರಿಣಾಮಕಾರಿಯಾದ ಸೂಕ್ಷ್ಮ ರಾಜಕೀಯ ನಾಟಕವೊಂದು ನಡೆದಿತ್ತು ಅದು ಅದೇ ದಿವಸ ಸರಕಾರ "ದುಷ್ಟ" ಯಾಕೂಬ್ ಮೆಮೋನ್‌ನ ಗಲ್ಲನ್ನು ಪಕ್ಕಾಗೊಳಿಸಿದ್ದು. ಇಲ್ಲಿನ ಮುಸಲ್ಮಾನರು ಹೇಗಿರಬೇಕು ಹಾಗು ಹೇಗಿರಬಾರದೆಂದು ಏಕಕಾಲದಲ್ಲಿ ಸಂಬಂಧಿಸಿದ ಜನರಿಗೆಲ್ಲ ಈ ಮೂಲಕ ಸಂದೇಶವನ್ನು ಬಿತ್ತಲಾಯಿತು. ಆದರೆ ಕಲಾಮ್ ಸಾಹೇಬರ ಸಾವಿನ ಲಾಭ ಇಲ್ಲಿಗೇ ನಿಂತಂತೆ ಕಾಣಿಸುತ್ತಿಲ್ಲ, ಅದು ದೇಶ ಕಂಡ ಇತಿಹಾಸ ಕಾಲದ ಇನ್ನೊಬ್ಬ "ದುಷ್ಟ" ಔರಂಗಜೇಬನವರೆಗೂ ಕಲಾಮರನ್ನು ಕೊಂಡೊಯ್ಯುವಂತೆ ಮಾಡಿದೆ.

ಭಾರತವನ್ನು ದೀರ್ಘಕಾಲ ಆಳಿದ ಔರಂಗಜೇಬ್ ರಾಜಕೀಯ ಕಾರಣಗಳಿಗಾಗಿ ಹಾಗು ಶಿವಾಜಿಯ ವೈರಿ ಎಂಬ ಕಾರಣಕ್ಕೆ ಆತ ಹಿಂದೂ ವಿರೋಧಿ ಎಂದು ಹೆಚ್ಚು ಕುಖ್ಯಾತಿ ಪಡೆದಂತವನು. ಬೇಕಾದಂತೆ ತಿರುಚಲ್ಪಟ್ಟ ಆತನ ಜೆಸಿಯಾ ತಲೆಗಂದಾಯವೂ ಆತನನ್ನು ಮತ್ತಷ್ಟು ದುಷ್ಟನನ್ನಾಗಿಸಿತು. ಆದರೆ ಪರಮ ಧಾರ್ಮಿಕ ವ್ಯಕ್ತಿಯಾಗಿದ್ದ ಆತ ಚಕ್ರವರ್ತಿಯಾಗಿಯೂ ಕೂಡ ಅತ್ಯಂತ ಸರಳತೆಯಿಂದ ಬದುಕಿದ್ದಂತವನು. ಒಳ್ಳೆಯವನೋ ಕೆಟ್ಟವನೋ ದೆಹಲಿಯನ್ನಾಳಿದ ಆತನ ಹೆಸರಿನಲ್ಲಿದ್ದಂತಹ ಒಂದು ರಸ್ತೆಯನ್ನು ಇದೀಗ ಮರುನಾಮಕರಣಗೊಳಿಸುವ ಹುನ್ನಾರ ನಡೆಯುತ್ತಿದೆ. ಅದು ಅಬ್ದುಲ್ ಕಲಾಮರ ಹೆಸರಿನಲ್ಲಿ, ಬಾಬರ್‌ನನ್ನು ನೆನಪಿಸುವ ಐತಿಹಾಸಿಕ ಬಾಬ್ರಿ ಮಸೀದಿಯನ್ನು ಇನ್ನಿಲ್ಲವಾಗಿಸಲಾಯಿತು. ಅದೇ ರೀತಿ ಇದೀಗ ಆತನ ಮರಿಮೊಮ್ಮಗ ಔರಂಗಜೇಬನ ಹೆಸರನ್ನೂ ಅಳಿಸುವಂತಹ ಕೆಲಸ ಕಾರ್ಯ ಇದೀಗ ನಡೆಯುತ್ತಿದೆ. ಗಾಂಧಿ ಮೈದಾನ, ಕೆಲ ನಗರಗಳ ಎಂಜಿ ರೋಡ್‌ಗಳು, ಗಾಂಧಿ ಅಂಚೆ ಚೀಟಿಗಳು, ನೋಟಿನಲ್ಲಿರುವ ಗಾಂಧಿ ಚಿತ್ರಕ್ಕೆಲ್ಲ ನಿಧಾನವಾಗಿ ಖೊಕ್ ಕೊಡುವಂತಹ ಯೋಜ(ಚ)ನೆಗಳು ನಡೆಯುತ್ತಿವೆ. (ಈಗಾಗಲೇ ಅಟಲ್ ನಗರ, ಗೋವಲ್ಕರ್, ದೀನದಯಾಳ್ ಹೆಸರಿನ ಗುರುತುಗಳೆಲ್ಲ ಚಾಲ್ತಿಗೆ ಬರತೊಡಗಿವೆ) ಮುಂದೆ ಕೆಂಪುಕೋಟೆ, ತಾಜ್‌ಮಹಲ್ ದಕ್ಷಿಣದ ಗೋಲ್ ಗುಂಬಜ್ ಎಲ್ಲವನ್ನೂ ಇಲ್ಲವಾಗಿಸುವ ಸಂದರ್ಭ ಬಂದರೂ ಬರಬಹುದು. ಬಾಮಿಯಾನ್ ಕಣಿವೆಯ ದೈತ್ಯ ಬುದ್ಧನನ್ನು ಡೈನಮೇಟ್‌ಗಳನ್ನಿಟ್ಟು ಒಡೆದ ತಾಲಿಬಾನ್, ಪುರಾತನ ಐತಿಹಾಸಿಕ ಸ್ಮಾರಕಗಳನ್ನು ಇಲ್ಲವಾಗಿಸುತ್ತಿರುವ ಐಸಿಸ್ ಉಗ್ರರ ಹಾದಿಯಲ್ಲೇ ನಾವೂ ಕೂಡ ನಡೆಯುತ್ತಿದೇವೆಯೇ?



ಅಂದಹಾಗೆ, ಬಿಬಿಎಂಪಿ ಚುನಾವಣೆ ಕುರಿತು ತಮ್ಮ ಪತ್ರಿಕೆಯಲ್ಲಿ ನ.ಲ. ನರೇಂದ್ರಬಾಬುರವರನ್ನು ದುರಂತ ನಾಯಕ ಎಂದು ಕರೆದಿದ್ದೀರಿ. ಆದರೆ ನಿಜವಾದ ದುರಂತನಾಯಕ ಇಲ್ಲಿ ಆರ್ ಅಶೋಕ್ ಸಾಹೇಬರು. ಯಾರೂ ನಿರೀಕ್ಷಿಸಿರದಂತೆ ಮೊತ್ತಮೊದಲಬಾರಿಗೆ ಆಡಳಿತದಲ್ಲಿರದ ಪಕ್ಷವೊಂದು ಗೆದ್ದು ದಾಖಲೆ ಬರೆದ ಹುಮ್ಮಸ್ಸಿನಲ್ಲಿದ್ದ ಬಿಜೆಪಿಗೀಗ ಮುಖಭಂಗವಾಗಿದೆ. ತಾನು ಯಾರು, ತನ್ನ ತಾಖತ್ ಏನೆಂದು ತೋರಿಸಿಕೊಂಡ ಹುಮ್ಮಸ್ಸಿನಲ್ಲಿದ್ದ ಮಾಜಿ ಉಪ ಮುಖ್ಯಮಂತ್ರಿ ಅಶೋಕ್ ಜೆಡಿಎಸ್-ಕಾಂಗ್ರೆಸ್ ಮೈತ್ರಿಯಿಂದ ಕಂಗಾಲಾಗಿದ್ದಾರೆ (ಅಧಿಕಾರ ಸಿಗದ ಗೆಲುವು ಸಿಕ್ಕೇನು ಪ್ರಯೋಜನ?).



ಪ್ರಕೃತಿದತ್ತವಾದ ಕೆಲವು ನ್ಯಾಯಗಳು ನಿಧಾನವಾಗಿಯಾದರೂ ಕಾರ್ಯರೂಪಕ್ಕೆ ಬರುವುದುಂಟು. ಅನೈತಿಕವಾಗಿ ಆಪರೇಷನ್ ಕಮಲ ಎಂಬ "ಹಡಬೆ" ಸಿದ್ಧಾಂತದಿಂದ ಗದ್ದುಗೇರಿದ ಬಿಜೆಪಿಗೆ ಈಗ ಅದೇ ತಂತ್ರ ಮುಳುವಾಗಿರುವುದು ವಿಶೇಷ. ತನ್ನ ನಾಚಿಕೆಗೆಟ್ಟ ತಂತ್ರವನ್ನು ತನ್ನ ವಿರೋಧಿಗಳು ಸರಿಯಾದ ಸಮಯದಲ್ಲಿ ಬಳಸಿಕೊಂಡು ತಮ್ಮನ್ನು ಒದ್ದದ್ದು ಬಿಜೆಪಿಯ ನ್ಯಾಯಕ್ಕೆ ತಕ್ಕುದಾದ ಪಾಠವೇ ಆಗಿದೆ. ಅಂದರೆ, ಇದನ್ನು ವಿರೋಧಿಸಲು ಅವರಿಗೀಗ ಬಾಯೇ ಬರುತ್ತಿಲ್ಲ. ಬಾಯಿಹರುಕ ಸದಾನಂದ ಗೌಡ ಇದನ್ನು ಅಪವಿತ್ರ ಮೈತ್ರಿ ಎಂದು ಕರೆದಾಗ ಸಿದ್ದರಾಮಯ್ಯ ಅದಕ್ಕೆ ಸರಿಯಾದ ಮಂಗಳಾರತಿಯನ್ನೇ ಮಾಡಿದರು. ಗೆಲುವನ್ನು ತಂದ… ಈ ಮೂಲಕ ಮುಂದಿನ ಅಧಿಕಾರ ಹಾಗು ಸ್ಥಾನ… ಕನಸು ಕಾಣುತ್ತಿದ್ದ ಆರ್ ಅಶೋಕ್ ಈಗ ಅಶೋ… ಸೀತೆಯಂತಾಗಿ ಹೋಗಿದ್ದು ಮಾತ್ರ ಚಾರಿತ್ರಿಕ ದುರ… ಬಿಜೆಪಿಯ ಸ್ವಯಂಕೃತಾಪರಾಧವೋ ಬಲ್ಲವರೇ ಹೇ…

ಹಿಂದಿನ ಸಂಚಿಕೆಯಲ್ಲಿ ಗೌರಿ ಮೇಡಮ್ ಮೆ… ಬೂಟಾಟಿಕೆಯ ಮಾತುಗಳನ್ನು ಚೆನ್ನಾಗಿ ಬಿಚ್ಚಿ… ದೇಶದ ಪ್ರಧಾನಿಯಾಗಿದ್ದುಕೊಂಡು ಧೈಯ…

ಮರೆಯುವ ಬದಲು ಎಲ್ಲೂ … ಮಾತಾಡದೇ ಮಾಧ್ಯಮಗಳ… ಮುಖಾಮುಖಿಯಾಗದೇ ರೇಡಿ… ಒನ್ ವೇ ಮಂಕೀ ಬಾತ್ ಎಂಬ… ಬಾತ್ ಮಾ(ತಾ)ಡುವ ಮೋ… ಸ್ವಮಯದ ಹಿಂದೆ ಮಾತಿನಲ್ಲೇ … ಮಂಗ ಮಾಡಿ ಗದ್ದುಗೆಗೆ ಏರಿದ … ಈತನ ಮಾತು ಕೇಳಿದ … ವಿದೇಶದಲ್ಲಿನ ಕಪ್ಪುಹಣ ತಿಂಗಳ… ನಮ್ಮೆಲ್ಲರ ಕಿಸೆಗೆ ಬೀಳುತ್ತದೆ; ಪಾಕ್ ಹಾಗು ಚ… ಬಾಲಮುದುಡಿ ಕೂರುತ್ತವೆ (ಪಾಕ್ ಅಂತೂ ಇ… ಪ್ರತಿ ದಿನ ಕದನ ವಿರಾಮ ಉಲ್ಲಂಘನೆ ನಡೆಸಿ ಹ… ಮುಂದುವರೆಸುತ್ತಲೇ ಮೋದಿಯ ಟೊಳ್ಳು… ಬಿಚ್ಚುತ್ತಲೇ ಇದೆ); ಭ್ರಷ್ಟಾಚಾರ ತೊಲಗುತ್ತದೆ … ಭ್ರಮಿಸಿಕೊಂಡು ಈತನನ್ನು ಗೆಲ್ಲಿಸಿದ್ದವು. ಆದ… ಹೇಳಿದ ಯಾವೊಂದು ಕಾರ್ಯವೂ ಆಗದೇ ಜನ… ನಿಧಾನವಾಗಿ ಮರಳುತ್ತಿದ್ದಾರೆ.

ಈತನ ಮಾತುಗಳೋ ಒಂದಕ್ಕೊಂದು … ಇರದು. ಮುಸಲ್ಮಾನರು ಮಧ್ಯರಾತ್ರಿಯಲ್ಲಿ … ಬಾಗಿಲು ತೆರೆಯುತ್ತೇನೆ ಎನ್ನುತ್ತಾನೆ, ಮೊನ್ನೆ ಗ… ಪಟೇಲ್ ಮೀಸಲಾತಿ ಗಲಾಟೆ ಸಂದರ್ಭದ… ಹೇಳಿದ್ದೆಂದರೆ, "ಈ ಗಾಂಧಿಯ ನೆಲದಲ್ಲಿ ಈ… ಅಸ್ತ್ರವಾಗಿ ಬಳಕೆಯಾಗುತ್ತಿದೆ. ಯಾರೂ ಹಿಂ… ಇಳಿಯಬಾರದು. ಶಾಂತಿಮಂತ್ರ ಜಪಿಸಬೇಕು. … ಮಾತುಕತೆಗಳಿಂದ ಪರಿಹಾರವಿದೆ" … ಗುಜರಾತ್ ಗಲಭೆಯ ಮೈನ್ … ಹೇಳಿದಂತಹ ಮಾತು. ಅಂದಿನ ಅ… ಸಾವುಗಳನ್ನು ಗಾಲಿಯಡಿ ಸಿಲುಕುವ … ಸಾವಿನಂತೆ ಚಿತ್ರಿಸಿದ್ದ 'ಮಾನವೀಯ… ಮಾತನಾಡಿದ ಪರಿಯಿದು. ಈತನ ಈ ನ… ಡಂಭಾಚಾರದ ಮಾತುಗಳೇ ಸಂತ್ರಸ್ತರನ… ಇರಿಯುವಂತೆ ತೋರುತ್ತಿರುವುದಂತೂ …

-ಅವಿನಾಶ್ ಎಮ್ ಎಸ್, ನ…

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದ… ಪ್ರತಿಕ್ರಿಯೆಗಳನ್ನು 9980331427 ನಂಬ… ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸ…

"ಅಚ್ಛೇ ದಿನ್" ಯಾರಿಗೆ? ಫ್ಯಾಕ್ಟರಿ ಮಾಲಕರಿಗೆ!

-ಜೇಬಿಗೇ ಬಂದು ಬೀಳಲಿದೆ ಕಪ್ಪುಹಣ", "ತಿನ್ನಲ್ಲ, ...ಕೆ ಬಿಡಲ್ಲ" ಇವೆಲ್ಲಾ ಬರೀ ಬೊಗಳೆ, ಜೋಕ್ ...ಬುದೀಗ ಜನರಿಗೆ ಅರ್ಥವಾಗತೊಡಗಿದೆ. "ಅಚ್ಛೇ ... ಆಯೆಂಗೆ" ಕೂಡ ಇದೇ ಸಾಲಿಗೆ ಸೇರಿದ ಇನ್ನೊಂದು ...ಡ್ಡ ಮೋದಿ ಜೋಕ್ ಎಂಬುದನ್ನು ನರೇಂದ್ರ ಸಿಂಗ್ ...ಮರ್ ಎಂಬೊಬ್ಬ ಕೇಂದ್ರ ಸಚಿವ ಇದೀಗ ...ತುಮಾಡಿದ್ದಾನೆ. ಈತನ ಪ್ರಕಾರ (ಇಂದೋರ್, ಆಗಸ್ಟ್ ...ರ ಸಾರ್ವಜನಿಕ ಸಭೆ) ಅವರ ಪಕ್ಷ "ಅಚ್ಛೇ ದಿನ್



...ಂಗೆ" ಭರವಸೆಯನ್ನು ಎಂದೂ ಕೊಟ್ಟೇ ಇಲ್ಲವಂತೆ, ... ಪಕ್ಷದ ಘೋಷಣೆ ಆಗಿರಲೇ ಇಲ್ಲವಂತೆ, ಅದೆಲ್ಲ ...ಾಜಿಕ ಮಾಧ್ಯಮಗಳ ಆಟವಂತೆ! ಇದು ನಿಜವಿರಲಿ ...ಬಿ ಮೋದಿ ಸರ್ಕಾರ ಒಳ್ಳೆಯ ದಿನಗಳನ್ನು ...ತ್ತಿರುವುದಂತೂ ನಿಜ. ಆದರೆ ಯಾರಿಗೆ? ...ಾಮಾನ್ಯರಿಗಲ್ಲ, ಫ್ಯಾಕ್ಟರಿ ಮಾಲಕರಿಗೆ, ಕಾರ್ಪೋರೇಟು ...ಗಳಿಗೆ!

...ಚುನಾವಣೆಗಳ ಕಾಲದಲ್ಲಿ ಹಣದ ಹೊಳೆ ಹರಿಯಿಸಿದ್ದ ...ರಿ ಮಾಲಕರು, ಕಾರ್ಪೋರೇಟು ಧಣಿಗಳು ಅದನ್ನು ...ಜಸೇವೆಗಾಗಿ ಮಾಡಿದ್ದರೆಂದು ಯಾರಾದರೂ ...ಸಿದರೆ ಮೂರ್ಖತನವಾಗುತ್ತದೆ. ಏಕೆಂದರೆ ಇದೊಂದು ...ಯು ಕೈಸಾಲವೇ ಆಗಿದ್ದು ಚುನಾವಣೆಗಳ ನಂತರದಲ್ಲಿ ...ಲ್ಲ ಸಾಲಬಾಕಿಗಾಗಿ ಒತ್ತಾಯಿಸತೊಡಗಿದ್ದಾರೆ. ...ದರಿಂದಲೆ ಅಧಿಕಾರಕ್ಕೆ ಬಂದತಕ್ಷಣ ಮೋದಿ ಸರ್ಕಾರ ...ದ ಮೊದಲ ಕೆಲಸವೆಂದರೆ ಹೊಸ ಭೂಕಬಳಿಕೆಯ ...ದೆ ಮತ್ತಿತರ ಕಾರ್ಪೋರೇಟ್ ಪರನೀತಿಗಳನ್ನು ...ಗೊಳಿಸಿರುವುದು. ಮತ್ತೊಂದು ದಿಕ್ಕಿನಲ್ಲಿ 67 ...ಗಳಷ್ಟು ಹಳೆಯದಾದ ಫ್ಯಾಕ್ಟರಿ ಕಾಯಿದೆಯನ್ನು ...ಕರಿಗೆ ಅನುಕೂಲಕರವಾಗುವಂತೆ ತಿದ್ದುಪಡಿ ಮಾಡಿ ಮಾಡಿದ ಬಳಿಕ "ಕೈಗಾರಿಕಾ ಕಾಯಿದೆ (ತಿದ್ದುಪಡಿ) 2014"ಅನ್ನು ಕಳೆದ ವರ್ಷದ ಆಗಸ್ಟ್‌ನಷ್ಟು ಹಿಂದೆಯೆ ಲೋಕಸಭೆಯಲ್ಲಿ ಮಂಡಿಸಲಾಗಿದೆ. ಲೋಕಸಭೆ ಅದನ್ನು ಸಂಬಂಧಪಟ್ಟ ಸಂಸತ್ತಿನ ಸ್ಥಾಯಿ ಸಮಿತಿಗೆ ಕಳುಹಿಸಿದೆ. ಮಸೂದೆಯನ್ನು ಪರಿಶೀಲಿಸಿದ ಸಮಿತಿ ಅದರಲ್ಲಿರುವ ಓವರ್‌ಟೈಮ್ ಮಿತಿಯನ್ನು ದುಪ್ಪಟ್ಟು ಮಾಡುವುದು, ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ದುಡಿಯಲು ಅವಕಾಶ ನೀಡುವುದು ಮುಂತಾದ ಕೆಲವು ಪ್ರಸ್ತಾಪಗಳ ಬಗ್ಗೆ ತನ್ನ ಆಕ್ಷೇಪ ವ್ಯಕ್ತಪಡಿಸಿದೆ. ಆದರೆ ಸಮಿತಿಯ ಸಲಹೆಗಳನ್ನು ತಿರಸ್ಕರಿಸುವ ಅಧಿಕಾರ ಸರಕಾರಕ್ಕಿರುವುದರಿಂದ ಅದೀಗ ಹಳೆ ಮಸೂದೆಗೆ ಅನೇಕ ಹೊಸ ಪ್ರಸ್ತಾಪಗಳನ್ನು ಸೇರಿಸಿ ಅದನ್ನು ಮತ್ತೆ ಮಂಡಿಸಲಿದೆ. ಹೊಸ ಮಸೂದೆಗೆ ಬಹುಶಃ "ಕೈಗಾರಿಕಾ ಕಾಯಿದೆ (ತಿದ್ದುಪಡಿ) 2015" ಎಂಬ ಹೆಸರಿಡಲಾಗುವುದು. ಹೊಸ ಪ್ರಸ್ತಾಪಗಳಿಂದ ಕೂಡಿರುವ ಈ ಕಾಯಿದೆ ಕಾರ್ಮಿಕರ ಸುರಕ್ಷತೆ ಮತ್ತು ಕೈಗಾರಿಕಾ ಪ್ರಗತಿಗೆ ಪೂರಕವಾಗಲಿದೆ ಎಂಬುದು ಸರ್ಕಾರದ ಅಂಬೋಣ.

ಹೊಸ ಕಾನೂನಿನಲ್ಲಿ "ಫ್ಯಾಕ್ಟರಿ" ಪದದ ಅರ್ಥ ಏನಿರಬೇಕೆಂಬ ಬಗ್ಗೆ ಕಾರ್ಮಿಕ ಸಚಿವಾಲಯವೂ ತನ್ನ ಸಲಹೆಸೂಚನೆಗಳನ್ನು ನೀಡಿದೆ. ಆದರಂತೆ "ಫ್ಯಾಕ್ಟರಿ ಅಂದರೆ ಸದ್ಯ 40 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರು ದುಡಿಯುತ್ತಿರುವ ಅಥವಾ ಹಿಂದಿನ 12 ತಿಂಗಳ ಅವಧಿಯಲ್ಲಿ ಯಾವುದೇ ದಿನ ದುಡಿಯುತ್ತಿದ್ದ ಜಾಗವಾಗಿದೆ ಮತ್ತು ಅದರ ಯಾವುದೇ ಭಾಗದಲ್ಲಿ ಉತ್ಪಾದನಾ ಪ್ರಕ್ರಿಯೆ ನಡೆಯುತ್ತಿರುತ್ತದೆ." 40ಕ್ಕೂ ಕಡಿಮೆ ಉದ್ಯೋಗಿಗಳಿರುವ ಉದ್ದಿಮೆಗಳನ್ನೆಲ್ಲ ಕಾಯಿದೆಯ ವ್ಯಾಪ್ತಿಯಿಂದ ಹೊರಗಿಡಬೇಕೆಂದು ಸಚಿವಾಲಯ ಶಿಫಾರಸು ಮಾಡಿದೆ. ಇದರರ್ಥ ಇಂತಹ ಉದ್ದಿಮೆಗಳು ಕಾರ್ಮಿಕರಿಗೆ ಯಾವುದೇ ಸಾಮಾಜಿಕ ಭದ್ರತೆ ಒದಗಿಸಬೇಕಾಗಿಲ್ಲ ಮತ್ತು ಕಾರ್ಮಿಕರು ಇದನ್ನು ಪ್ರಶ್ನಿಸುವ ಹಾಗೂ ಇಲ್ಲ.


"ಫ್ಯಾಕ್ಟರಿ" ಪದದ ಅರ್ಥವನ್ನು ಹೀಗೆ ಬದಲಾಯಿಸುವದರ ಫಲವಾಗಿ ಮಾಲಕರಿಗೆ ಭಾರಿ ಪ್ರಯೋಜನ ದೊರೆಯಲಿದೆ. ಏಕೆಂದರೆ ಇದರಲ್ಲಿ ಒಂದೇ ಉದ್ದಿಮೆಯೊಳಗಿರುವ ಎರಡು ವಿಭಾಗಗಳನ್ನು ಎರಡು ಪ್ರತ್ಯೇಕ ಸಂಸ್ಥೆಗಳನ್ನಾಗಿ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಮಾಲಕ ಒಂದು ಅರ್ಜಿ ಸಲ್ಲಿಸಿ ತನ್ನ ಸಂಸ್ಥೆಯ ಎರಡು ವಿಭಾಗ ಅಥವಾ ಶಾಖೆಗಳನ್ನು ವಿಭಿನ್ನ ಫ್ಯಾಕ್ಟರಿಗಳೆಂದು ಘೋಷಿಸಲು ವಿನಂತಿಸಿಕೊಳ್ಳಬಹುದಾಗಿದೆ. ಇದಕ್ಕೆ ಒಂದು ತಿಂಗಳೊಳಗಾಗಿ ಉತ್ತರ ಬರದಿದ್ದಲ್ಲಿ ಪ್ರಸ್ತಾಪಕ್ಕೆ ಸಮ್ಮತಿ ದೊರಕಿದೆ ಎಂದರ್ಥ. ಹೀಗೆ ಅನುಮತಿ ದೊರಕಿದ ಬಳಿಕ ಮಾಲಕರು ತಮ್ಮ ಒಂದೇ ಸಂಸ್ಥೆಯ ಬೇರೆ ಬೇರೆ ಶಾಖೆಗಳನ್ನು ಅಥವಾ ವಿಭಾಗಗಳನ್ನು ಪ್ರತ್ಯೇಕ ಉತ್ಪಾದನಾ ಕೇಂದ್ರಗಳೆಂದು ಘೋಷಿಸಿ ಎಲ್ಲ ವಿನಾಯಿತಿಗಳನ್ನು ಗಿಟ್ಟಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ 80 ಮಂದಿ ಕಾರ್ಮಿಕರಿರುವ ಒಂದು ಫ್ಯಾಕ್ಟರಿಯನ್ನು ಎರಡು ಪ್ರತ್ಯೇಕ ಫ್ಯಾಕ್ಟರಿಗಳೆಂದು ಹೇಳಿಕೊಂಡು ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಅನುವು ಮಾಡಿಕೊಡಲಿದೆ ಎನ್ನುತ್ತಾರೆ ಎಐಟಿಯುಸಿ ರಾಷ್ಟ್ರೀಯ ಕಾರ್ಯದರ್ಶಿ ಡಿ.ಎಲ್.ಸಚ್‌ದೇವ.

ಉದ್ಯಮಿಗಳ ಮೇಲೆ ಹೆಚ್ಚು ನಂಬಿಕೆ ಇರಿಸಲು ಮುಂದಾಗಿರುವ ಮೋದಿ ಸರ್ಕಾರಕ್ಕೀಗ ಕಾರ್ಖಾನೆಗಳಲ್ಲಿ ಸುರಕ್ಷತೆ ಮತ್ತು ಆರೋಗ್ಯದ ಮಾನದಂಡಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಸ್ವತಂತ್ರ ನಿಯಂತ್ರಣಾ ಪ್ರಾಧಿಕಾರವೊಂದನ್ನು ಸ್ಥಾಪಿಸಬೇಕಾಗಿದೆ. ಅಂತಹ ಪ್ರಾಧಿಕಾರದಲ್ಲಿರುವ ಸುರಕ್ಷತಾ ಅಧಿಕಾರಿಯ ಮೂಲಕ ಮಾಲಕರ ಕೋರಿಕೆ ತಲುಪಿದ 15 ದಿನಗಳ ಬಳಿಕ ಅದು ತನ್ನಿಂತಾನೇ ಮಂಜೂರಾಗುವಂತೆ ಮಾಡುವುದರಿಂದ ಮಂಜೂರಾತಿ ಪ್ರಕ್ರಿಯೆ ಇನ್ನಷ್ಟು ಶೀಘ್ರಗೊಳ್ಳಲಿದೆ ಎನ್ನುತ್ತಿದೆ ಮೋದಿ ಸರ್ಕಾರ. ಸರ್ಕಾರದ ಬಯಕೆಗಳೆಲ್ಲವನ್ನೂ ಮಸೂದೆಯಲ್ಲಿ ಸೇರಿಸಲಾಗಿದ್ದು ಅದರಲ್ಲಿ "ಇವತ್ತಿನ ಪರಿಸ್ಥಿತಿಗಳು ಭಿನ್ನವಾಗಿದ್ದು ಸದ್ಯ ಇರುವಂಥಾ ಕಾನೂನುಗಳಿಂದ ಅವುಗಳ ನಿಭಾವಣೆ ಅಸಾಧ್ಯವಾಗಿದೆ. ಆದುದರಿಂದ ಇನ್ನಷ್ಟು ಚೈತನ್ಯಯುತ ಕಾನೂನು ಬೇಕಾಗಿದೆ. ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಆದುದರಿಂದ ಹೆಚ್ಚೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗಬೇಕು, ಹೆಚ್ಚೆಚ್ಚು ಉತ್ಪಾದನೆ ಆಗಬೇಕು. ಇದಕ್ಕಾಗಿ ಸರಳ, ಶೀಘ್ರ ಹಾಗೂ ಪರಿಣಾಮಕಾರಿ ಪ್ರಕ್ರಿಯೆ ಬೇಕಾಗಿದೆ. ಆದುದರಿಂದ ಒಂದು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಬೇಕು. ಕಂಪ್ಯೂಟರ್ ಮೂಲಕ ನೋಂದಣಿ ಅರ್ಜಿ ಸಲ್ಲಿಸುವಿಕೆ ಮತ್ತು ಅದರ ಅನುಮೋದನಾ ಪ್ರಕ್ರಿಯೆಯ ಸುಗಮಗೊಳಿಸುವಿಕೆಗೆ ಅವಶ್ಯವಿರುವ ಮೂಲಸೌಕರ್ಯಗಳು, ಸೇವೆಗಳು ಮತ್ತು ವ್ಯವಸ್ಥೆಗಳನ್ನು ಸೃಷ್ಟಿಸಬೇಕು. ಉದ್ಯಮಿಗಳು ಸುರಕ್ಷತೆ ವಿಷಯದಲ್ಲಿ ಹೆಚ್ಚು ಜವಾಬ್ದಾರಿ ವಹಿಸುವಂತಾಗಲು ಅವರು ಸುರಕ್ಷತೆಯ ಮಾನದಂಡಗಳ ಬಗ್ಗೆ ಸ್ವಯಂಘೋಷಣೆ ಮಾಡಲು ಅನುಮತಿ ನೀಡಬೇಕು. ಮಾಲಕರು ಸುರಕ್ಷತೆ, ಆರೋಗ್ಯ, ಕಾರ್ಯಸ್ಥಳದ ವ್ಯಾಧಿಗಳು ಮತ್ತು ಸ್ವಚ್ಛತೆಯ ಮಾನದಂಡಗಳ ಬಗ್ಗೆ ಸ್ವಯಂಘೋಷಣೆ ನೀಡಿದ ಬಳಿಕ ತಾತ್ಕಾಲಿಕ ಅನುಮತಿ ನೀಡಬೇಕು" ಎಂದು ಹೇಳಲಾಗಿದೆ. ಪ್ರತ್ಯೇಕ ಸ್ವತಂತ್ರ ನಿಯಂತ್ರಣಾ ಪ್ರಾಧಿಕಾರದಲ್ಲಿರುವ ಸುರಕ್ಷತಾ ಅಧಿಕಾರಿಯ ಮೂಲಕ ಮಾಲಕರ ಕೋರಿಕೆ ತಲುಪಿದ 15 ದಿನಗಳ ಬಳಿಕ ಅದು ತನ್ನಿಂತಾನೇ ಮಂಜೂರಾಗುವಂತೆ ಮಾಡುವುದರಿಂದ ಮಂಜೂರಾತಿ ಪ್ರಕ್ರಿಯೆ ಇನ್ನಷ್ಟು ಶೀಘ್ರಗೊಳ್ಳಲಿದೆ ಎಂದು ಹೇಳಲಾಗುತ್ತಿದೆ. ಇದೆಲ್ಲವನ್ನು ನೋಡುವಾಗ ಮೋದಿ ಸರ್ಕಾರ ಉದ್ಯಮಿಗಳ ಮೇಲೆ ಹೆಚ್ಚು ನಂಬಿಕೆ ಇರಿಸಲು ಮುಂದಾಗಿರುವುದು ಸ್ಪಷ್ಟವಿದೆ.

ಸಂಸ್ಥೆಯ ಉತ್ಪಾದನಾ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸದ ಮಾರಾಟ ಮತ್ತಿತರ ವಿಭಾಗಗಳನ್ನು ಈ ಕಾನೂನಿನ ಪರಿಧಿಯಿಂದ ಹೊರಗಿಡುವ ಬಗ್ಗೆಯೂ ಸರ್ಕಾರ ಚಿಂತಿಸುತ್ತಿದೆ. ಕರಡು ಮಸೂದೆಯಲ್ಲಿ ಉತ್ಪಾದನೆ ಪದದ ಅರ್ಥವನ್ನು ಬದಲಾಯಿಸಿರುವುದು ಬಹುಶಃ ಆ ಕಾರಣಕ್ಕಾಗಿ ಇರಬಹುದು. "ಉತ್ಪಾದನೆ"ಯ ಹೊಸ ಅರ್ಥ ಹೀಗಿದೆ: ಉತ್ಪಾದನೆ ಅಂದರೆ ಮೂಲ ವಸ್ತುವಿನ ಗುಣ, ಸ್ಥಿತಿ, ಆಕಾರ, ಗಾತ್ರ, ಉಪಯುಕ್ತತೆಗಳಂತಹ ಮೂಲ ಸ್ವಭಾವವನ್ನು ಬದಲಾಯಿಸುವುದು ಮತ್ತು ಅಥವಾ ಮೂಲ ವಸ್ತುವಿನ ಮೌಲ್ಯ ಹೆಚ್ಚಿಸುವುದು. ಉದಾಹರಣೆಗೆ ಅಸಂಸ್ಕರಿತ ಹಾಲನ್ನು ಬೇರೆ ಬೇರೆ ಗಾತ್ರದ ಪೊಟ್ಟಣಗಳಿಗೆ ತುಂಬಿಸುವುದು ಉತ್ಪಾದನೆ ಆಗುವುದಿಲ್ಲ. ಹೊಸ ಮಸೂದೆಯ ಪ್ರಸ್ತಾಪಗಳನ್ನೋದಿ ಉದ್ಯಮಿಗಳಿಗೆಲ್ಲ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ಹಲವಾರು "ಅನಗತ್ಯ" ಕಾರ್ಮಿಕ ಕಾನೂನುಗಳನ್ನು ಒಟ್ಟು ಸೇರಿಸಿ ಇಂತಹದೊಂದು "ಒಳ್ಳೆಯ" ಕಾನೂನು ಮಾಡಹೊರಟಿರುವುದಕ್ಕಾಗಿ ಅವರೆಲ್ಲರೂ ಮೋದಿ ಸರ್ಕಾರವನ್ನು ಹಾಡಿಹೊಗಳುತ್ತಿದ್ದಾರೆ. ಆದರೆ ಮೋದಿ ಸರ್ಕಾರದ ಈಡೇರದ ಭರವಸೆಗಳಿಂದಾಗಿ ಈಗಾಗಲೆ ಸಹನೆ ಕಳೆದುಕೊಳ್ಳುತ್ತಿರುವ ಕಾರ್ಮಿಕ ಸಂಘಟನೆಗಳಂತೂ ಬಂಡಾಯವೇಳುವುದು ಖಚಿತವೆಂದು ತೋರುತ್ತದೆ.

(ಆಧಾರ:<http:/www.livemint.com>ಲೇಖನ)

ಬೂಸಿ ಬಸ್ಯ... ಮೋಡಿ! 78



⏮ ಪುರಾಣದ ಹೂರಣ

...ಲ್ಲರ ಬಳಿ ಪ್ರಶ್ನಿಸುವುದು ಯಾವುದೋ ಒಂದು ...ಸೋ ಅಥವಾ ಕಪಿಯ ಬಳಿ ಪ್ರಶ್ನಿಸುವುದಷ್ಟೇ ...ಯೋಜನವಾಗಿದೆ. ನಾನೇನೂ ಕಲಿಯಲಿಲ್ಲ ಗೆಳೆಯಾ. ...ವಿಶ್ವದಲ್ಲಿರುವುದು ಒಂದೇ ಅರಿವು. ಆ ಅರಿವೇ ...ಕಡೆಯೂ ಇರುವಂತಹದ್ದು. ಆ ಅರಿವೇ ಆತ್ಮ. ...ನನ್ನಲ್ಲಿಯೂ ಇದೆ. ನಿನ್ನಲ್ಲಿಯೂ ಇದೆ. ಎಲ್ಲಾ ...ಗಳಲ್ಲಿಯೂ ಇದೆ. ಆದ್ದರಿಂದ ಅದನ್ನು ತಿಳಿಯಲು ...ಸುವುದೇ ತಪ್ಪು ಎನಿಸುತ್ತದೆ" ಎನ್ನುತ್ತಾನೆ. ...ಿಂದನಿಗೆ ಗಾಬರಿ. "ಹೀಗಾದರೆ ನಮ್ಮ ಸಾಧನೆಯ ...ನು? ಹೀಗೆಲ್ಲಾ ಮಾತಾಡಬೇಡ. ನಿನ್ನ ಮಾತುಗಳು ...ಗಿಯೂ ನನ್ನ ಎದೆಯಲ್ಲಿ ಗಾಬರಿ, ಕಳವಳ ಹುಟ್ಟಿ ...ತ್ತಿದೆ. ನೀನೇ ಯೋಚನೆ ಮಾಡು. ಕಲಿಯುವುದರಿಂದ ... ಪ್ರಯೋಜನ ಇಲ್ಲ ಅಂದರೆ ಪವಿತ್ರವಾದ ಪ್ರಾರ್ಥನೆ ...ಬೇಕು? ಪವಿತ್ರವಾದ ಬ್ರಾಹ್ಮಣ ಕುಲದ ...ಗೌರವಸಾಗಬೇಕು? ಸಮಾನರ ಪೂಜ್ಯತೆ ಏನಾಗಬೇಕು? ...ದರೆ ಈ ಭೂಮಿಯಲ್ಲಿ ಯಾವುದು ಶ್ರೇಷ್ಠ? ಯಾವುದು ...ದ್ದು?" ಎಂದು ಹೋಟಾಡಿಕೊಳ್ಳುವನು.

...ಆಗಲೇ ಅವನಿಗೆ ಒಂದು ವಿಷಯ ಗೊತ್ತಾಯಿತು. ...ಂದರೆ, ಒಬ್ಬ ಗೌತಮನೆಂಬ ಮಹಾಪುರುಷ ...ಂತೆ. ಅವನು ಅರಿವಿನಲ್ಲಿ, ಪ್ರಜ್ಞೆಯಲ್ಲಿ ಉನ್ನತವಾಗಿ ಸಾಧಿಸಿ ಬುದ್ಧನೆಂದು ಜನ ಕರೆಯುತ್ತಾರಂತೆ. ಪ್ರಾಪಂಚಿಕ ದುಃಖ ದುಮ್ಮಾನಗಳನ್ನೆಲ್ಲಾ ಆತ ಮೀರಿದ್ದಾನಂತೆ. ಜನ್ಮಾಂತರದ ಚಕ್ರದಿಂದ ಪಾರಾಗಿದ್ದಾನಂತೆ. ಬರಿಯ ಕಾಲ್ನಡಿಗೆಯಲ್ಲಿ ಸಂಚರಿಸುತ್ತಿದ್ದಾನಂತೆ. ತನ್ನ ಶಿಷ್ಯರಿಗೆ ಮತ್ತು ಅರಿವಿನ ಆಶಯವಿರುವವರ ಜೊತೆಗೆ ತನ್ನ ಜ್ಞಾನವನ್ನು ಹಂಚಿಕೊಳ್ಳುತ್ತಾನಂತೆ. ಅವನಲ್ಲಿ ಯಾವ ಸೊತ್ತೂ ಸಂಪದವೂ ಇಲ್ಲವಂತೆ. ಮನೆಯಿಲ್ಲ, ಮಠವಿಲ್ಲ, ಬೈರಾಗಿಯಂತೆ ಕಾಷಾಯ ವಸ್ತ್ರವನ್ನು ಧರಿಸಿರುತ್ತಾನಂತೆ. ಯಾವಾಗಲೂ ನಗುನಗುತ್ತಾ ಪ್ರಸನ್ನಚಿತ್ತನಾಗಿ ಇರುತ್ತಾನಂತೆ. ರಾಜಾಧಿರಾಜರು, ಪಂಡಿತರು, ಬ್ರಾಹ್ಮಣರು ಕೂಡ ಅವನಿಗೆ ತಲೆ ಬಾಗುತ್ತಿದ್ದಾರಂತೆ. ಅವನ ಸಂಘಕ್ಕೆ ಸೇರುತ್ತಿದ್ದಾರಂತೆ. ಹೌದು, ಅವನು ಗೌತಮ ಬುದ್ಧ, ಶಾಕ್ಯ ವಂಶದ ಜ್ಞಾನಿ. ಅವನಿಗೆ ಅತ್ಯುನ್ನತವಾದಂತಹ ಜ್ಞಾನ ಲಭಿಸಿದೆಯಂತೆ. ಅವನಿಗೆ ತನ್ನ ಹಿಂದಿನ ಜನ್ಮಗಳೆಲ್ಲವೂ ತಿಳಿದಿದೆ. ಅವನಿಗೆ ನಿರ್ವಾಣ ಪ್ರಾಪ್ತಿಯಾಗಿದೆ ಹಾಗೂ ಮತ್ತೆ ಈ ಜನನ ಮರಣದ ಚಕ್ರದೊಳಗೆ ಆತ ಬೀಳುವುದಿಲ್ಲ, ಅವನ ಮಾತುಗಳಿಂದಲೇ ಭೂತ, ಪಿಶಾಚಿಗಳನ್ನು ತೊಲಗಿಸಿದ್ದಾನೆ. ಅಷ್ಟೇಕೆ ದೇವತೆಗಳೊಡನೆ, ಯಕ್ಷರೊಡನೆ ಕೂಡ ಮಾತಾಡುತ್ತಾನೆ ಎಂದು ಕೆಲವರು ಬುದ್ಧನನ್ನು ಒಪ್ಪಿದರೆ, "ಅವನೊಬ್ಬ ನೀತಿಗೆಟ್ಟವ. ವಿಲಾಸಿಜೀವನ ನಡೆಸುತ್ತಿದ್ದಾನೆ. ಯಾವ ಕಲಿಕೆಯೂ ಇಲ್ಲ, ತಪಸ್ಸಿದ್ಧಿಯೂ ಇಲ್ಲ, ಅವನೊಬ್ಬ ಮೋಸದ ಸಮ್ಮೋಹನಕಾರ. ಮರುಳು ಮಾಡುವವನು" ಎಂದು ಹೇಳುವವರಿದ್ದರು.

ಹೊಸತಿಗಾಗಿ ಹಾತೊರೆಯುವ ಸಿದ್ಧಾರ್ಥನ ಗೆಳೆಯನಾಗಿರುವ ಗೋವಿಂದನಿಗೂ ಆ ಪ್ರಭಾವವಿದ್ದೇ ಇರುತ್ತದೆ. "ನಾವಿಬ್ಬರೂ ಕಾಡಿನಲ್ಲಿರುವ ಸಮಾನರು ಆ ಗೌತಮ ಬುದ್ಧನ ಬಗ್ಗೆ ತಿಳಿದುಕೊಳ್ಳಲು ಕಾತರದಿಂದಿದ್ದೇವೆ. ದಯಮಾಡಿ ಅವನ ಬಗ್ಗೆ ಮತ್ತಷ್ಟು ತಿಳಿಸುವಿರಾ? ಆತನ ಬೋಧನೆಗಳನ್ನು ಕೇಳಲು ನಾವಿಬ್ಬರೂ ಉತ್ಸುಕರಾಗಿದ್ದೇವೆ" ಎಂದು ತನ್ನ ಉತ್ಸಾಹ ಮತ್ತು ಉತ್ಸುಕತೆಗಳನ್ನು ತೋರ್ಪಡಿಸುತ್ತಾನೆ. ಆಗ ಬುದ್ಧ ಸಾವತಿ ಪಟ್ಟಣದಲ್ಲಿದ್ದ. ಅಲ್ಲಿ ಪ್ರತಿಯೊಂದು ಮಗುವಿಗೂ ಬುದ್ಧನ ಹೆಸರಿನ ಪರಿಚಯವಿದೆ. ಅಲ್ಲಿ ಪ್ರತಿಯೊಬ್ಬರ ಮನೆಯಲ್ಲಿ ಯೂ ಬುದ್ಧ ಮತ್ತು ಅವನ ಬಿಕ್ಕುಗಳ ಭಿಕ್ಷಾಪಾತ್ರೆಯನ್ನು ತುಂಬಲು ಆಹಾರವನ್ನು ಸಿದ್ಧವಿಟ್ಟಿರುತ್ತಾರೆ. ನಗರದ ಸಮೀಪವೇ ಆತನಿಗೆ ಇಷ್ಟವಾದ ಜೇತವನದಲ್ಲಿ, ಬುದ್ಧ ತನ್ನ ಸಂಘದವರ ಜೊತೆ ಇರುತ್ತಾನೆ. ಶ್ರೀಮಂತ ವರ್ತಕನಾದ ಅನಂತ ಪಿಂಡಿಕನು ಆ ವನವನ್ನು ಬುದ್ಧನ ವಾಸ್ತವ್ಯಕ್ಕೆಂದೇ ಕೊಡುಗೆಯಾಗಿ ನೀಡಿದ್ದಾನೆ. ಇವೆಲ್ಲಾ ತಿಳಿದ ಗೆಳೆಯರಿಬ್ಬರೂ ಜೇತವನಕ್ಕೆ ಬುದ್ಧನ ಕಾಣಲು ಹೊರಡುತ್ತಾರೆ.

ಆದರೆ ಹಿರಿಯ ಶಮನಾಸ ಅವರನ್ನು ಹೋಗಬಿಡುವುದಿಲ್ಲ, "ಸಮಾನರ ದಾರಿಯೇ ಕೈವಲ್ಯಕ್ಕೆ ಸೋಪಾನ. ಇಂಥಾ ನಿಖರ ನಿರ್ವಾಣದ ಹಾದಿಗೆ ಬೆನ್ನು ಹಾಕಿ ನೀವು ನಡೆಯುವುದೆಂದರೆ, ಸಮಾನರಿಗೆ ಮಾಡುವ ಅವಮಾನ. ಇದರಿಂದ ನೀವು ಪಡೆಯುವ ಫಲವಾದರೋ ಅತಳವಾದ ನೋವಿನ ಪಾತಾಳ, ನಿರಂತರ ನರಕದ ವಾಸ" ಎಂದು ಹೆದರಿಸುತ್ತಾನೆ.

ಆದರೆ ಸಿದ್ಧಾರ್ಥ ತನ್ನ ಮನಶಕ್ತಿಯಿಂದ ಆತನನ್ನು ಮಣಿಸಿ ತನ್ನ ದಾರಿ ತಾನು ಹಿಡಿಯುತ್ತಾನೆ. ಇದನ್ನು ಸಾಕ್ಷೀಕರಿಸುವ ಗೋವಿಂದ ಬೆರಗಾಗುತ್ತಾನೆ.

"ಸಿದ್ಧಾರ್ಥ, ನೀನು ಸಮಾನರಿಂದ ಬಹಳಷ್ಟು ಕಲಿತಿರುವೆ. ಹಿರಿಯ ಸಮಾನರನ್ನು ಮಣಿಸುವುದು ಅಷ್ಟು ಸುಲಭವಲ್ಲ, ನಿಜವಾಗಿ, ನೀನೇನಾದರೂ ಇನ್ನಷ್ಟು ಕಾಲ ಇಲ್ಲಿದ್ದಿದ್ದೇ ಆದರೆ ನೀನು ನೀರಿನ ಮೇಲೆ ನಡೆಯುವುದನ್ನೇ ಸಾಧಿಸಬಹುದು."

ಆದರೆ ಸಿದ್ಧಾರ್ಥ, "ನನಗೆ ಅದು ಬೇಕಿಲ್ಲ, ನೀರಿನ ಮೇಲೆ ನಡೆಯುವ ಸಾಧನೆಗೆ ನನ್ನ ಜೀವಮಾನದ ಆಯುಷ್ಯವನ್ನು ಸವೆಸಬೇಕಿಲ್ಲ, ಸಾಧಾರಣವಾದ ಅಂಬಿಗನೇ ಆ ಕೆಲಸ ಉತ್ತಮವಾಗಿ ಮಾಡಬಲ್ಲ, ಹಿರಿಯ ಸಮಾನರೇ ಅಂತಹ ಸಾಧನೆಗಳಿಂದ ತೃಪ್ತಿ ಹೊಂದಲಿ."

ಇದು ಸಿದ್ಧಾರ್ಥನ ಧೋರಣೆ. ಇದು ಹರ್ಮನ್ ಹೆಸ್ಸೆಯ ಸಿದ್ಧಾರ್ಥನಂತಹ ಅನ್ವೇಷಕರ ಧೋರಣೆ. ನಿತ್ಯವೂ ಸತ್ಯಕ್ಕಾಗಿ ಹಾತೊರೆಯುವ, ಮುಕ್ತ ಮನಸ್ಸಿನಿಂದ, ವಿಶಾಲ ಹೃದಯದಿಂದ ಇರುವ ಜನರ ಒಲವು ನಿಲುವುಗಳ ಪ್ರತೀಕವಾಗಿ ಸಿದ್ಧಾರ್ಥ ನಿಲ್ಲುತ್ತಾನೆ. ಅವನಿಗೆ ಯಾವುದೇ ಜನಪ್ರಿಯತೆಯ, ಮಂದಿಯ, ಬಂಡಿಯ ಒಲವಾಗಲಿ, ಆಗ್ರಹವಾಗಲಿ ಇರುವುದಿಲ್ಲ. ಅವನಿಗಿರುವುದೆಂದರೆ ಪ್ರಬುದ್ಧತೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 16-09-2015 RNI No. KARKAN

ಅದ್ದೂರಿ ಮದುವೆ ಮತ್ತು ಟಿವಿಗಳ ಬಗ್ಗೆ ಟಿ



ಮೊನ್ನೆ ನಡೆದ ಶಿವರಾಜ್‌ಕುಮಾರ್ ಅವರ ಪುತ್ರಿಯ ಮದುವೆಯನ್ನು ಬಹುತೇಕ ಕನ್ನಡದ ಸುದ್ದಿ ವಾಹಿನಿಗಳು 'ಬ್ರೇಕಿಂಗ್ ನ್ಯೂಸ್'ನಂತೆ ಬಿತ್ತರಿಸಿದವು. ಶಿವಣ್ಣ ಶಾಪಿಂಗ್ ಹೋಗಿದ್ದು, ಐವತ್ತು ಲಕ್ಷದ ಕಾರ್‌ಅನ್ನು ಉಡುಗೊರೆಯಾಗಿ ಕೊಟ್ಟಿದ್ದು, ಮಂಗಳಮುಖಿಯರು ಆಶೀರ್ವದಿಸಿದ್ದು ಎಲ್ಲವನ್ನೂ ಲೈವ್ ಆಗಿ ಹಲವು ಚಾನೆಲ್‌ಗಳು ತೋರಿಸಿದವು.

ದೊಡ್ಮನೆಯ ಖಾಸಗಿ ಮದುವೆ ಬಗ್ಗೆ ಟಿವಿ ಚಾನಲ್‌ಗಳ ವ್ಯಾಮೋಹ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆಗೆ ಗುರಿಯಾಯಿತು. ರಾಜ್ಯದಲ್ಲಿ ರೈತರು ... ಮಾಡಿಕೊಳ್ಳುತ್ತಿರುವ ಹೊತ್ತಿನಲ್ಲಿ, ಬರಗಾಲದಿಂದಾಗಿ ಕುಡಿಯುವ ನೀ... ತತ್ತರಿಸುತ್ತಿರುವ ಸಂದರ್ಭದಲ್ಲಿ, ಅದೂ ಎಂ.ಎಂ.ಕಲ್ಬುರ್ಗಿಯಂತಹ ಮೇರು ... ಬರ್ಬರವಾಗಿ ಕೊಲೆಯಾಗಿರುವ ದಿನವೂ ಟಿವಿಗಳು ಮಿಕ್ಕೆಲ್ಲವನ್ನು ಬದಿಗೊ... ಹೈಲೈಟ್ ಮಾಡಿದ್ದನ್ನು ಜನ ಟೀಕಿಸಿದರು. ಹಲವರಂತೂ 'ಮದುವೆ ಸಮಾ... ವೀಡಿಯೋ ಚಿತ್ರೀಕರಣ ಮಾಡಿಕೊಡಲಾಗುವುದು. ಸಂಪರ್ಕಿಸಿ: ಟಿವಿ-... ಟಿವಿ, ಸುವರ್ಣ ನ್ಯೂಸ್, ಬಿಟಿವಿ. ವಿಶೇಷ ಸೂಚನೆ: ಮದುವೆ ಆದ... ಕೂಡಿರಬೇಕು' ಎಂಬ ಜೋಕ್ ಅನ್ನು ರಚಿಸಿ ಫೇಸ್‌ಬುಕ್‌ನಲ್ಲಿ ಶೇರ್ ಮಾಡಿ...

ರಾಜ್‌ಕುಮಾರ್ ಮತ್ತು ಅವರ ಪುತ್ರರಾದ ಶಿವಣ್ಣ, ರಾಘಣ್ಣ ಮತ್ತು ಪು... ರಾಜ್ಯದ ಜನರ ಪ್ರೀತಿಗೆ ಸಕಾರಣವಾಗಿಯೇ ಪಾತ್ರರಾಗಿದ್ದಾರೆ. ಅವರೆಲ್ಲ... ಅಭಿಮಾನವನ್ನು ವ್ಯಕ್ತಪಡಿಸುತ್ತಲೇ, ರಾಜ್ ಕುಟುಂಬದವರು ಈ ಹೊತ್ತಿ... ಅದ್ದೂರಿಯಾಗಿ ಮದುವೆ ಮಾಡುವ ಬದಲು ಸರಳವಾಗಿ ಮಾಡಿದ್ದರೆ ಚೆನ್... ಎಂದರೆ ತಪ್ಪಾಗದು ಎಂದು ಭಾವಿಸಿದ್ದೇವೆ. ಹಾಗೆಯೇ ಈ ಮದು... ಸಾಂಪ್ರದಾಯಿಕವಾಗಿ ಮಾಡುವ ಬದಲು ಸಾಮೂಹಿಕ ಮದುವೆಯ... ಮಂತ್ರಮಾಂಗಲ್ಯದಂತೆಯೋ ಮಾಡಿದ್ದರೆ ಅವರು ಇಡೀ ರಾಜ್ಯಕ್ಕೆ ಮಾದರಿಯ... ಎಂದೂ ಹೇಳಬಹುದು. ಆದರೆ ದುರದೃಷ್ಟವಶಾತ್, ಇಂತಹ ಸಮ... ಸಲಹೆಗಳನ್ನು ಕೊಡಬಲ್ಲವರು ರಾಜ್ ಕುಟುಂಬದವರ ಸುತ್ತಮುತ್ತ ... ಕಾಣಿಸುವುದಿಲ್ಲ.

ಅದೇನೇ ಇರಲಿ, ಹೊಸ ದಂಪತಿಗಳಾದ ಡಾ. ನಿರುಪಮಾ ಮತ್ತು ಡಾ. ... ನಮ್ಮ ತಂಡದ ಪರವಾಗಿ ಬೆಸ್ಟ್ ವಿಶಸ್.

ಕಾಶ್ಮೀರದ ಸುಂದರಿ ಅಕ್ಷಾ ಭಟ್ ವೃತ್ತಿಪರತೆ



ಅಕ್ಷಾ ಭಟ್ ಮತ್ತು ಕಾಶ್ಮೀರದ ಸುಂದರಿ ಈಗ ಗಾಂಧಿನಗರದಲ್ಲಿ ಹವಾ ಎಬ್ಬಿಸುತ್ತಿದ್ದಾಳೆ. ಆಕೆ ನಟಿಸಿರುವ ಮೊದಲ ಚಿತ್ರ, ರತ್ನಜಾ ನಿರ್ದೇಶನದ 'ಪ್ರೀತಿಯಲ್ಲಿ ಸಹಜ' ಬಿಡುಗಡೆಗೊಳ್ಳುವ ಮುನ್ನವೇ ಆಕೆ ಎರಡನೆ ಚಿತ್ರದಲ್ಲೂ ನಟಿಸಿದ್ದಾಳೆ. ಆಕೆಯ ಎರಡನೆ ಚಿತ್ರ ಎ.ಎಂ.ಆರ್. ರಮೇಶ್ ನಿರ್ದೇಶನದ 'ಗೇಮ್'.

ಕಳೆದ ಒಂದೆರಡು ವರ್ಷಗಳ ಕಾಲ ಬೆಂಗಳೂರಿನಲ್ಲಿ ಆಡಿಯೋಗ್ರಾಫಿ ಕಲಿಯುತ್ತಿರುವ ಅಕ್ಷಾ ಅಲ್ಲಿ ಇಲ್ಲಿ ಮಾಡೆಲಿಂಗ್ ಮಾಡಿಕೊಂಡಿದ್ದಳು. ಆಕೆಯ ಫೋಟೋವನ್ನು ಫೇಸ್‌ಬುಕ್‌ನಲ್ಲಿ ನೋಡಿದ ರತ್ನಜಾ "ನನ್ನ ಸಿನಿಮಾದಲ್ಲಿ ನಟಿಸುವ ಆಸೆ ಇದೆಯಾ?" ಎಂದು ಪ್ರಶ್ನಿಸಿದರು. ಅಲ್ಲಿಯತನಕ ಸಿನಿಮಾ ಲೋಕವನ್ನು ಪ್ರವೇಶಿಸುವ ಬಗ್ಗೆ ಆಸಕ್ತಿ ಹೊಂದಿರದಿದ್ದ ಅಕ್ಷಾ ಕುತೂಹಲಕ್ಕೆ ರತ್ನಜಾರನ್ನು ಭೇಟಿಯಾದಳು. ಅವರು ತಮ್ಮ ಸಿನಿಮಾದಲ್ಲಿ ನಾಯಕಿಯ ಪಾತ್ರವನ್ನೇ ಕೊಟ್ಟಾಗ ಆಕೆ ಒಪ್ಪಿಕೊಂಡಳು.

ಇತ್ತೀಚೆಗೆ ನಡೆದ 'ಪ್ರೀತಿಯಲ್ಲಿ ಸಹಜ' ಸಿನಿಮಾದ ಆಡಿಯೋ ರಿಲೀಸ್ ಸಮಾರಂಭದಲ್ಲಿ ಇತರರು ಮಾತನಾಡುತ್ತಿದ್ದಾಗಲೂ ಅಕ್ಷಾ ತನ್ನ ಫೋನಿನಲ್ಲಿ ಜೋರಾಗಿ ಮಾತನಾಡುತ್ತಿದ್ದದ್ದು ಅಲ್ಲಿದ್ದವರಲ್ಲಿ ಅಚ್ಚರಿ ಮೂಡಿಸಿತ್ತು. ಆದರೆ ಏನಾಗಿತ್ತೆಂದರೆ ಆ ಹೊತ್ತಿನಲ್ಲೇ ಅಕ್ಷಾಳ ತಂದೆಯನ್ನು ಅನಾರೋಗ್ಯದ ಕಾರಣಕ್ಕೆ ಆಸ್ಪತ್ರೆಗೆ ಸೇರಿಸಲಾಗಿತ್ತು. ಆ ಸುದ್ದಿಯಿಂದಾಗಿ ಅಕ್ಷಾ ಸಹಜವಾಗಿಯೇ ಆಘಾತಗೊಂಡಿದ್ದರಿಂದ ಆಕೆ ಫೋನಿನಲ್ಲಿ ಜೋರಾಗಿ ಮಾತನಾಡುತ್ತಿದ್ದಳು. ಮಾತ್ರವಲ್ಲ ಅಂತಹ ಸುದ್ದಿ ಬಂದನಂತರವೂ ಆಕೆ ತನ್ನ ಚೊಚ್ಚಲ ಸಿನಿಮಾದ ಸಮಾರಂಭದಲ್ಲಿ ಭಾಗವಹಿಸುವ ಮೂಲಕ ವೃತ್ತಿಪರತೆಯನ್ನು ತೋರಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಂಗನಾ ಅಭಿಮಾನಿಗಳಿಗೆ ರಸದೌತಣ




ಕಂಗನಾ ರನೌತ್ ಎಂಬ ಬೆಡಗಿ ಈಗ ಬಾಲಿವುಡ್‌ನ ಸಾಮ್ರಾಟೆ. ಯಾವ ಖಾನ್ ಎಂಬ ನಾಯಕ ನಟನ ಹಂಗಿಲ್ಲದೆ ತಾನು ನಟಿಸಿರುವ ಸಿನಿಮಾಕ್ಕೆ ಹಾಕಿರುವ ಬಂಡವಾಳಕ್ಕಿಂತ ಹೆಚ್ಚು ಆದಾಯ ತರುವ ತಾಕತ್ತು ಹೊಂದಿರುವ ಏಕೈಕ ನಟಿ ಕಂಗನಾ. ಬಹಳ ವರ್ಷಗಳ ಕಾಲ ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಂಗನಾ ಎಲ್ಲರ ಗಮನ ಸೆಳೆದದ್ದು 'ಕ್ವೀನ್' ಚಿತ್ರದ ಮೂಲಕ. ಅದು ಸೂಪರ್ ಹಿಟ್ ಆಯಿತಲ್ಲದೆ ಇತ್ತೀಚೆಗೆ ಕಂಗನಾ ಬಳಗದಿಂದಲೇ 'ಮನು ವೆಡ್ಸ್ ತನು ರಿಟರ್ನ್ಸ್' ಚಿತ್ರವೂ ಹಿಟ್ ಆಗಿತ್ತು. ಸದ್ಯದಲ್ಲೇ ಬಿಡುಗಡೆಗೊಳ್ಳುತ್ತಿರುವ 'ಕಟ್ಟಿ ಬಟ್ಟಿ' ಬಗ್ಗೆಯೇ ಜನರು ಕುತೂಹಲಗೊಂಡಿರುವುದೂ ಕಂಗನಾ ಆ ಚಿತ್ರದ ನಾಯಕಿ ಎಂಬ ಕಾರಣಕ್ಕೆ ಹೊರತು ಬೇರಾವ ಕಾರಣಕ್ಕೂ ಅಲ್ಲ.

1857ರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಬದುಕನ್ನು ಆಧರಿಸಿ ತಯಾರಾಗಲಿರುವ ... ಕಂಗನಾ ರಾಣಿ ಲಕ್ಷ್ಮೀಬಾಯಿಯ ಪಾತ್ರವನ್ನು ನಿರ್ವಹಿಸಲಿದ್ದಾಳೆ. ಆ ಚಿತ್ರವನ್ನು ಖ್ಯಾತ ನಿರ್ದೇಶಕ ಕೇತನ್ ಮೆಹತಾ ನಿರ್ದೇ... ಅಷ್ಟೇ ಅಲ್ಲ, 40ರ ದಶಕದಲ್ಲಿ ಸಂಭವಿಸುವ ಒಂದು ಕತೆಯನ್ನು ಆಧರಿಸಿ ವಿಶಾಲ್ ಭರದ್ವಾಜ್ ನಿರ್ದೇಶಿಸುತ್ತಿರುವ ... ಚಿತ್ರದಲ್ಲೂ ಕಂಗನಾಳೆ ಪ್ರಮುಖ ಪಾತ್ರಧಾರಿಣಿ. ಒಟ್ಟಾರೆ ಕಂಗನಾ ಅಭಿಮಾನಿಗಳಿಗೆ ರಸದೌತಣ ಕಾದಿದೆ ಎನ್ನಬ...

ವಾರೆವ್ಹಾ, ನವಾಜುದ್ದೀನ್!!

ಈಗ ಹಿಂದಿಯ ಕಲಾತ್ಮಕ ಚಿತ್ರಗಳಲ್ಲೂ ಮತ್ತು ಕಮರ್ಷಿಯಲ್ ಚಿತ್ರಗಳಲ್ಲೂ ಕಂಗೊಳಿಸುತ್ತಿರುವ ನಟ ನ... ಸಿದ್ದಿಕಿ. ಇತ್ತೀಚೆಗೆ 'ಬಜರಂಗಿ ಭಾಯ್‌ಜಾನ್' ಎಂಬ ಕಮರ್ಷಿಯಲ್ ಸಿನಿಮಾದಲ್ಲಿ ಎಲ್ಲರ ಮೆಚ್ಚುಗೆಗೆ ... ನವಾಜುದ್ದೀನ್ ಇದೇ ಹೊತ್ತಲ್ಲಿ 'ಮಾಂಜೆ- ದಿ ಮೌಂಟನ್ ಮ್ಯಾನ್' ಎಂಬ ಕೇತನ್ ಮೆಹತಾ ನಿರ್ದೇಶನ... ಚಿತ್ರದಲ್ಲೂ ವಿಮರ್ಶಕರ ಮತ್ತು ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ಎಂತಹ ಪಾತ್ರವಾದರೂ ಸೈ, ಅದಕ್ಕೆ ಜೀವ ... ತಾಕತ್ತನ್ನು ಹೊಂದಿರುವ ನವಾಜುದ್ದೀನ್ ಅದೆಷ್ಟೋ ವರ್ಷಗಳ ಕಾಲ, ಎಲ್ಲರಿಂದಲೂ 'ರಿಜೆಕ್ಟ್' ಆದವರ...



ಉತ್ತರ ಪ್ರದೇಶದ ಒಂದು ಪುಟ್ಟ ಹಳ್ಳಿಯಲ್ಲಿನ ಬಡ ಕುಟುಂಬದಲ್ಲಿ ಜನಿಸಿದ ನವಾಜುದ್ದೀನ್ ನಟನಾಗಬೇಕೆಂದೇ ಮುಂಬೈಗೆ ಬಂದವರು. ನಟನಾಗುವ ಹಾದಿಯಲ್ಲಿ ಆತ ಎದುರಿಸಿದ ಕಷ್ಟಗಳಿಗೆ ಲೆಕ್ಕವಿಲ್ಲ. ಆದರೂ ತನ್ನ ಕನಸುಗಳನ್ನು ನನಸಾಗಿಸಬೇಕೆಂದು ಪಣ ತೊಟ್ಟು ಆತ ಗೆದ್ದಿದ್ದು ನಿಜವಾಗಲೂ ಸ್ಫೂರ್ತಿದಾಯಕ.

ಇತ್ತೀಚೆಗೆ ಒಂದು ಸಂದರ್ಶನದಲ್ಲಿ ನವಾಜುದ್ದೀನನಿಗೆ ಹಲವಾರು ಪ್ರಶ್ನೆಗಳನ್ನು ಕೇಳಲಾಯಿತು. ಆ ಸಂದರ್ಶನದಲ್ಲಿ 'ಥಟ್ ಎಂದು ಹೇಳಿ' ತರಹದ ಭಾಗದಲ್ಲಿ ಹಲವಾರು ಹೆಸರುಗಳನ್ನು ಮತ್ತು ಪದಗಳನ್ನು ಆತನ ಮುಂದೆ ಇಟ್ಟು ಆತನ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಯಿತು. ಆಗ ನವಾಜುದ್ದೀನನಿಗೆ 'ಸೋನಿಯಾ ಗಾಂಧಿ?' ಎಂದು ಪ್ರಶ್ನಿಸಲಾಯಿತು. ಎಲ್ಲ ಪ್ರಶ್ನೆಗಳಿಗೂ ನಗುನಗುತ್ತಲೇ ಉತ್ತರಿಸುತ್ತಿದ್ದ ನವಾಜುದ್ದೀನ್ ಈ ಹೆಸರು ಕೇಳುತ್ತಿದ್ದಂತೆ ಗಂಭೀರವಾದರು. ಆಮೇಲೆ ಆತ ಕೊಟ್ಟ ಉತ್ತರ ಏನು ಗೊತ್ತಾ? "ಸೋನಿಯಾ ಗಾಂಧಿ ಮಾ ಹೈ ಇಸ್ ದೇಶ್ ಕಾ. (ಸೋನಿಯಾ ಗಾಂಧಿ ಈ ದೇಶದ ತಾಯಿ)"

ವಾರೆವ್ಹಾ ಎಂತಹ ಮಾತು ನವಾಜುದ್ದೀನ್!!

PRINTER, PUBLISHER, PROPRIETOR AND EDITOR : GAURI LANKESH, No.9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail.com